
ವಾರ್ಷಿಕ ಚಂದಾ ರೂ.25/-



ಮಾಸಿಕ

# ಜನಪದ

ಸಂಪುಟ-07 • ಸಂಚಿಕೆ-01 • ಅಕ್ಟೋಬರ್ 2023




Downloaded From:www.kpscvaani.com



ಸಮಾಜ ಕಲ್ಯಾಣ ಇಲಾಖೆಯು ಸೆಪ್ಟೆಂಬರ್ 15 ರಂದು ವಿಧಾನಸೌಧ ಮುಂಭಾಗದಲ್ಲಿ ಆಯೋಜಿಸಿದ್ದ
ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಭಾರತದ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ ಮಾಡಿದ ನಂತರ ಮುಖ್ಯಮಂತ್ರಿ ಅವರು
ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಸಂದರ್ಭ. ಸಮಾಜ ಕಲ್ಯಾಣ ಸಚಿವರಾದ ಹೆಚ್.ಸಿ. ಮಹದೇವಪ್ಪ ಅವರು ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆಪ್ಟೆಂಬರ್ 17 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆಯೋಜಿಸಿದ್ದ
ವಿಶ್ವಕರ್ಮ ಜಯಂತಿಯನ್ನು ಉದ್ಘಾಟಿಸಿದ ಸಂದರ್ಭ. ಈ ಸಂದರ್ಭದಲ್ಲಿ ಮಧುಗಿರಿ ನಿಟ್ಟರಹಳ್ಳಿ
ಅಭಯಹಸ್ತೆ ಆದಿಲಕ್ಷ್ಮಿ ಸಂಸ್ಥಾನ ಮತ್ತು ವಿಶ್ವಕರ್ಮ ಸಂಪನ್ಮೂಲ ಮಠದ ಶ್ರೀ ಶ್ರೀ ಶ್ರೀ ಡಾ.ನೀಲಕಂಠಾಚಾರ್ಯ ಮಹಾಸ್ವಾಮಿಗಳು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ್ ತಂಗಡಗಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-01 • ಅಕ್ಟೋಬರ್ 2023




**06** ಅರಮನೆ ನಗರಿಯಲ್ಲಿ ಗೃಹಲಕ್ಷ್ಮಿ ಯೋಜನೆಗೆ ವಿದ್ಯುಕ್ತ ಚಾಲನೆ ನೀಡಿದ ಸರ್ಕಾರ
• ಟಿ.ಕೆ.ಹರೀಶ್

**09** 371 ಜೆ ಜಾರಿಗೆ ದಶಮಾನೋತ್ಸವ ಸಂಭ್ರಮ
• ದೇವಯ್ಯ ಗುತ್ತೇದಾರ್

**12** ಕೂಲಿ ಕಾರ್ಮಿಕರ ಮಕ್ಕಳ ಪಾಲನೆಗಾಗಿ ಕೂಸಿನ ಮನೆ
• ರವಿ ಮಿರಾಸ್ಕರ್

**13** ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಚೇತೋಹಾರಿಯಾದ ಕ್ಷೀರಭಾಗ್ಯ
• ಸುಭಾಷಿಣಿ

**15** ಅಭಿವೃದ್ಧಿಯ ಪರಿಭಾಷೆ ಬದಲಿಸಿದ ಕರ್ನಾಟಕ ಮಾದರಿ
• ನಟರಾಜು.ವಿ

**18** ದೈತ್ಯನ ಅರಿಯಲು ಇನ್ನೊಬ್ಬ ಆದಿತ್ಯ
• ಗುರುರಾಜ್ ಎಸ್ ದಾವಣಗೆರೆ

**21** ದಸರೆಯಲ್ಲಿ ಆನೆಗಳ ದರ್ಬಾರು
• ಪಿ.ಮಮತಾ





**23** ರಫ್ತು ಉತ್ತೇಜನಕ್ಕಾಗಿ ಡಾಕ್ ಘರ್ ನಿರ್ಯಾತ್ ಕೇಂದ್ರ
• ಡಾ. ವರ ಪ್ರಸಾದ್ ರಾವ್ ಪಿ.ವಿ

**25** ಅಪ್ಪಟ ಗಾಂಧಿವಾದಿ : ಬೆಳಗಾವಿಯ ಶಿವಾಜಿ ಕಾಗ್ನೇಕರ್
• ಡಾ. ಎಸ್.ಬಿ. ಬಸೆಟ್ಟಿ

**29** ಮುಖ್ಯಮಂತ್ರಿಗಳ ಅಧಿಕೃತ ವಾಟ್ಸಾಪ್ ಚಾನಲ್

**30** ದೇಶದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿ
• ಮುನಿರಾಜ. ಎಂ

**32** ಕೆರೆಗಳ ಪುನಶ್ಚೇತನಕ್ಕೆ ಮಿಷನ್ ಅಮೃತ ಸರೋವರ "ಸಂಜೀವಿನಿ"
• ಬಿ.ಜಿ. ಸೋಮಶೇಖರ್

**35** ಮಹಿಳಾ ಸಬಲೀಕರಣದಿಂದ ಸ್ವಚ್ಛತೆಯಡೆಗೆ ಹಳ್ಳಿಗಳು
• ಯತಿರಾಜ್ ಎಂ. ಡಿ

**37** ರೈತರಿಗೆ ವರವಾಗಿರುವ ಕೃಷಿ ಯಂತ್ರಧಾರೆ ಕೇಂದ್ರಗಳು
• ಕೆ.ಎಸ್. ರಾಜಮನ್ನಾರ್

**39** ಭಾರತದ ಹೆಗ್ಗಳಿಕೆಯನ್ನು ಹೆಚ್ಚಿಸಿದ ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ
• ಆರ್. ಎಸ್. ಪಾಟೀಲ

**42** ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಂಡಿರುವ ಕೃಷಿವಿಜ್ಞಾನ ವಸ್ತು ಸಂಗ್ರಹಾಲಯ
• ಆರ್. ಸ್ಮಿತಾ

**44** ಬಯಲು ಸೀಮೆಯ ಚಾರ್ಮಾಡಿ ಘಾಟ್
• ಲಕ್ಷ್ಮಿಕಾಂತರಾಜು ಎಂ.ಜಿ

**46** ಪಾಲಕರನ್ನು ದೂರವಾಗಿಸುವ ಪತ್ನಿಯಿಂದ ವಿಚ್ಛೇದನ ಪಡೆಯಲು ಪತಿಗೆ ಅವಕಾಶ
• ಡಾ. ಡಿ. ಎಂ. ಹೆಗಡೆ

**48** ಮತ್ತೆ ಮರುಜೀವ ಪಡೆದ ಆಲದ ಮರ
• ಶಶಿಧರ ಅಂಗಡಿ

**50** ಪದಬಂಧ-47



**ಪ್ರಧಾನ ಸಂಪಾದಕರು**
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಪಲ್ಲವಿ ಹೊನ್ನಾಪುರ
ಜಂಟಿ ನಿರ್ದೇಶಕರು (ಹೆ.ಪ್ರ)

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಸೆಪ್ಟೆಂಬರ್ ಮಾಹೆಯ ಮುಖಪುಟದಲ್ಲಿ ಚಂದ್ರನ ಮೇಲೆ ಭಾರತದ ವಿಕ್ರಮ ಚಿತ್ರಣ ಉತ್ತಮವಾಗಿ ಮೂಡಿ ಬಂದಿದೆ. ಚಂದ್ರನ ಮೇಲೆ ಭಾರತದ ವಿಕ್ರಮ ವಿಷಯದ ಬಗ್ಗೆ ಎಲ್ಲರಿಗೂ ಅರ್ಥವಾಗುವ ರೀತಿ ನಾಗೇಶ್ ಹೆಗಡೆಯವರು ಓದುಗರಿಗೆ ಲೇಖನದ ಮುಖಾಂತರ ಸೊಗಸಾಗಿ ಪರಿಚಯ ಮಾಡಿಕೊಟ್ಟಿರುತ್ತಾರೆ.

ಕರ್ನಾಟಕದ ಸರ್ವಾಂಗೀಣ ಪ್ರಗತಿಗಾಗಿ 'ಕರ್ನಾಟಕ ಅಭಿವೃದ್ಧಿ ಮಾದರಿ' ಲೇಖನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 77 ನೇ ಸ್ವಾತಂತ್ರ್ಯ ದಿನಾಚರಣೆಯ ಭಾಷಣದ ಕುರಿತು ಲೇಖಕರಾದ ನಟರಾಜು.ವಿ ಅವರು ದೇಶಕ್ಕೆ ಮಾದರಿಯಾಗುವಂತಹ ಅಭಿವೃದ್ಧಿ ಕೆಲಸಗಳ ಬಗ್ಗೆ ಉತ್ತಮವಾಗಿ ತಿಳಿಸಿಕೊಟ್ಟಿದ್ದಾರೆ.

ಹಾಗೆಯೇ ಡಾ.ಕೆ.ಪುಟ್ಟಸ್ವಾಮಿ ಅವರು ಬರೆದಿರುವ 'ವರ್ಷ ಪೂರ್ತಿ ಹಾಸ್ಯ ಚಕ್ರವರ್ತಿಯ ಶತಮಾನೋತ್ಸವ ಆಚರಣೆ' ಕುರಿತ ಲೇಖನದಲ್ಲಿ ನರಸಿಂಹರಾಜು ಅವರ ಜೀವನ ಚರಿತ್ರೆಯನ್ನು ಓದುಗರಿಗೆ ಸಂಕ್ಷಿಪ್ತವಾಗಿ ತಿಳಿಸಿಕೊಟ್ಟಿರುತ್ತಾರೆ. ಇಂತಹ ಉತ್ತಮ ಲೇಖನಗಳನ್ನು ಪ್ರಕಟಿಸಿರುವ ಸಂಪಾದಕರಿಗೆ ಅಭಿನಂದನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

**– ಎಸ್. ಮಹದೇವಶೆಟ್ಟಿ, ಟಿ.ನರಸೀಪುರ**

* * *

'ಶಕ್ತಿ ಯೋಜನೆ ಸ್ತ್ರೀಯರ ಪಾಲಿಗೆ ಸಂಜೀವಿನಿ' ಲೇಖನವು ಸರ್ಕಾರದ ಯೋಜನೆಯು ಎಷ್ಟರ ಮಟ್ಟಿಗೆ ಜನಪ್ರಿಯಗೊಂಡಿದೆ ಎಂಬುದನ್ನು ಮನದಟ್ಟು ಮಾಡಿಕೊಡುವಂತಿದೆ. ಲೇಖಕರು ಹೇಳಿರುವಂತೆ ಒಂದು ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಸಮರ್ಥ ನಾಯಕತ್ವ ಮತ್ತು ಇಚ್ಛಾ ಶಕ್ತಿ ಖಂಡಿತಾ ಅಗತ್ಯ. ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಿಂತನೆಯಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ, ಸಮಾನತೆಗಾಗಿ ನೀಡಲಾಗಿರುವ ಶಕ್ತಿ ಯೋಜನೆಯು ಬಹುಪಾಲು ಮಹಿಳೆಯರಿಗೆ ಅನುಕೂಲಕರವಾಗಿದೆ.

ಲೇಖಕರು ಹೇಳಿರುವಂತೆ ಬಹಳಷ್ಟು ಮಹಿಳೆಯರು ಮನೆ, ಮಕ್ಕಳು ಅಂತಾ ಮನೆಗೆ ಮಾತ್ರ ಸೀಮಿತವಾಗಿದ್ದರು. ಆದರೆ ಶಕ್ತಿ ಯೋಜನೆಯಿಂದಾಗಿ ಅವರು ಈಗ ಪ್ರೇಕ್ಷಣೀಯ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸವನ್ನು ಕೈಗೊಳ್ಳುತ್ತಿದ್ದಾರೆ. ಅಲ್ಲದೆ ಕೆಲಸದ ನಿಮಿತ್ತ ಓಡಾಡಲು ತಗಲುತಿದ್ದ ಖರ್ಚು-ವೆಚ್ಚವು ಅವರಿಗೆ ಉಳಿಯುತ್ತಿದೆ. ಇದರಿಂದ ಅವರ ಜೀವನ ಮಟ್ಟದಲ್ಲಿ ಸ್ವಲ್ಪವಾದರೂ ಸುಧಾರಣೆ ಕಾಣುತ್ತಿದೆ. ಒಟ್ಟಿನಲ್ಲಿ ಈ ಯೋಜನೆಯು ಮಹಿಳೆಯರ ಪಾಲಿಗೆ ಸಂಜೀವಿನಿಯಾಗಿ ಪರಿಣಮಿಸಿದೆ ಎಂದು ನಾನು ಭಾವಿಸುತ್ತೇನೆ.

**–ಲತಾ ರಾಮಚಂದ್ರ, ಕೃಷ್ಣರಾಜನಗರ**

* * *

ಸರ್ಕಾರಿ ಶಾಲಾ ಮಕ್ಕಳಿಗೆ ವಿಜ್ಞಾನದಲ್ಲಿ ಆಸಕ್ತಿ ಮೂಡಿಸುತ್ತಿರುವ ದೇವರಾಜು ಅವರ ಕುರಿತ ಲೇಖನವು ಇತರೆ ಸರ್ಕಾರಿ ಶಾಲಾ ಶಿಕ್ಷಕರಿಗೆ ಸ್ಫೂರ್ತಿದಾಯಕವಾಗಿದೆ.




ಗ್ರಾಮೀಣ ಭಾಗದ ಮಕ್ಕಳಿಗೆ ಇಂಗ್ಲೀಷ್ ಮತ್ತು ವಿಜ್ಞಾನ ವಿಷಯವು ಕಬ್ಬಿಣದ ಕಡಲೆಯಂತೆ ಭಾಸವಾಗುತ್ತದೆ. ಅಂತಹದರಲ್ಲಿ ಈ ಭಾಗದ ಮಕ್ಕಳಿಗೆ ಅವರು ವಿಜ್ಞಾನದ ವಿಷಯದಲ್ಲಿ ಆಸಕ್ತಿ ಮೂಡಿಸಲು ಇಸ್ರೋ ವಿಜ್ಞಾನಿಗಳನ್ನು ಶಾಲೆಗೆ ಕರೆಸಿ ಮಕ್ಕಳೊಂದಿಗೆ ಸಂವಾದ ನಡೆಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾದುದು.

**–ಹೇಮಂತ್ ಕೆ.ಎಸ್, ಕೋಲಾರ**

* * *

ಸಿರಿಧಾನ್ಯ ಬೆಳೆಗಾರರಿಗೆ ಸರ್ಕಾರದ ವತಿಯಿಂದ ದೊರಕುವ ಸೌಲಭ್ಯ ಮತ್ತು ಸವಲತ್ತುಗಳ ಮಾಹಿತಿ ನೀಡುವಂತಹ ಲೇಖನವನ್ನು ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಪಡಿಸಿರುವುದು ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರಯೋಜನಕಾರಿಯಾಗಿದೆ. ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡುವ ಯೋಜನೆಯಾದ 'ರೈತಸಿರಿ' ಯೋಜನೆಯ ಫಲಾನುಭವಿಗಳಾಗಲು ಬೇಕಾದ ಅರ್ಹತೆಗಳು, ಯೋಜನೆಯಡಿ ದೊರಕುವ ಸೌಲಭ್ಯಗಳು, ಯೋಜನೆಯ ಪ್ರಕ್ರಿಯೆ, ಯೋಜನೆಗೆ ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆಗಳು ಇವೇ ಮುಂತಾದ ಎಲ್ಲಾ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಇಂತಹ ಲೇಖನಗಳು ಹೆಚ್ಚು ಉಪಯುಕ್ತವಾಗಲಿದೆ.

**–ಸತೀಶ್ ಚಂದ್ರ, ಚಾಮರಾಜನಗರ**

* * *

'ಅವಿವಾಹಿತೆಗೂ ಗರ್ಭಪಾತದ ಹಕ್ಕು' ಲೇಖನವು ಕಾನೂನಿನ ಪರಿಚಯವನ್ನು ಮಾಡಿಸುವ ಜೊತೆಗೆ ಮಹಿಳೆಯರಿಗೆ ಅರಿವು ಮೂಡಿಸುವ ಲೇಖನವಾಗಿದೆ. ಕಾಯಿದೆ ಕಾನೂನುಗಳ ಕುರಿತು ಅರಿಯುವುದು ಈಗಿನ ಕಾಲದಲ್ಲಿ ಬಹಳ ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಕಾನೂನಿನ ಕುರಿತು ಅರಿವನ್ನು ಹೊಂದಲು ಇಂತಹ ಲೇಖನಗಳು ಸಹಕಾರಿಯಾಗಲಿವೆ.

**–ಕೃಷ್ಣೇಗೌಡ, ರಾಮನಗರ**

ಸೆಪ್ಟೆಂಬರ್ ಸಂಚಿಕೆಯ ಮುಖಪುಟವು ನಾವೆಲ್ಲರೂ ಹೆಮ್ಮೆ ಪಡುವಂತೆ ಸೊಗಸಾಗಿತ್ತು. 'ಚಂದ್ರನ ಮೇಲೆ ಭಾರತದ ವಿಕ್ರಮ' ಲೇಖನವು ಕೂಡ ಚಂದ್ರಯಾನ-3 ರ ಕುರಿತು ಮಾಹಿತಿಯನ್ನು ನೀಡುವ ಜೊತೆಗೆ ಚಂದ್ರಯಾನಕ್ಕಾಗಿ ಇಸ್ರೋ ಸಂಸ್ಥೆಯ ವಿಜ್ಞಾನಿಗಳು ನಡೆಸಿದ ಪರಿಶ್ರಮ ಮತ್ತು ನೌಕೆ ತಯಾರಿಕೆಯ ಹಿಂದಿನ ಪ್ರತಿ ಹಂತಗಳನ್ನು ಓದುಗರಿಗೆ ನೀಡಿದೆ ಎಂದರೆ ತಪ್ಪಾಗಲಾರದು. ಭಾರತವು ಚಂದ್ರನ ದಕ್ಷಿಣ ಧ್ರುವದಲ್ಲಿ ನೌಕೆಯನ್ನು ಇಳಿಸಿದ ಮೊದಲ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಮ್ಮ ದೇಶದ ಈ ಸಾಧನೆಯು ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಕೂಡ ಲೇಖಕರು ಸೊಗಸಾಗಿ ಓದುಗರಿಗೆ ತಿಳಿಸಿಕೊಟ್ಟಿದ್ದಾರೆ.

**–ರಚನಾ ಎಂ, ಮೈಸೂರು**

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದು 1947 ಕ್ಕೆ ಆದರೂ ನಿಜಾಮರ ಆಳ್ವಿಕೆಯಲ್ಲಿದ್ದ ಕಲ್ಯಾಣ ಕರ್ನಾಟಕ ಭಾಗಕ್ಕೆ ಒಂದು ವರ್ಷ ತಡವಾಗಿ ಸ್ವಾತಂತ್ರ್ಯ ಲಭಿಸಿತು. ಹಾಗಾಗಿ ಕಲ್ಯಾಣ ಕರ್ನಾಟಕ ವಿಮೋಚನೆಗೆ ಅಮೃತ ವರ್ಷಾಚರಣೆಯಾದರೆ, ಪ್ರಾದೇಶಿಕ ಅಸಮಾನತೆಯನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಜಾರಿ ಮಾಡಲಾದ 371 (ಜೆ) ಕಾಯ್ದೆ ಜಾರಿಗೆ ದಶಮಾನೋತ್ಸವದ ಸಂಭ್ರಮ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆಪ್ಟೆಂಬರ್ 17 ರಂದು ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನೆಯ ಅಮೃತ ಮಹೋತ್ಸವ ಹಾಗೂ ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದಲ್ಲಿ ವಿಶೇಷ ಸ್ಥಾನಮಾನ ಕಲ್ಪಿಸುವ 371 (ಜೆ) ಕಾಯ್ದೆ ಜಾರಿಯ ದಶಮಾನೋತ್ಸವವನ್ನು ಉದ್ಘಾಟಿಸಿದರು.

ಕಾಯ್ದೆ ಜಾರಿಯಾದ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಅತಿ ಶೀಘ್ರದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸಿತು. ಆ ಭಾಗದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಜಾರಿ ಮಾಡಿ, ಅವರಿಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗ ದೊರಕುವಂತೆ ಮಾಡಿತು. ಇದು ಶತಮಾನಗಳಿಂದ ಹಿಂದುಳಿದಿದ್ದ ಈ ಭಾಗದ ಜನರ ಬದುಕಿನಲ್ಲಿ ಹಲವು ಬದಲಾವಣೆಗಳನ್ನು ತಂದಿತು.

ಕಲ್ಯಾಣ ಕರ್ನಾಟಕ ಭಾಗ ಅಭಿವೃದ್ಧಿಯಾಗದ ಹೊರತು ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂಬುದನ್ನು ಮನಗಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸಕ್ತ 2023-24 ನೇ ಸಾಲಿನ ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 5,000 ಕೋಟಿ ರೂ. ಮೊತ್ತದ ಕಾಮಗಾರಿ ಅನುಷ್ಠಾನಗೊಳಿಸುವುದಾಗಿ ಘೋಷಿಸಿದ್ದಾರೆ. ಮಂಡಳಿಯ ಅಧ್ಯಕ್ಷರಾದ ಡಾ. ಅಜಯ್ ಸಿಂಗ್ ಅವರು ಪ್ರಸಕ್ತ ಸಾಲಿಗೆ 3,000 ಕೋಟಿ ರೂ. ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ಈಗಾಗಲೇ ರೂಪಿಸಿದ್ದಾರೆ. ಇದರೊಂದಿಗೆ ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ಸಂವಿಧಾನದ 371 (ಜೆ) ಪರಿಚ್ಛೇದದ ಅನುಷ್ಠಾನದ ಮೇಲ್ವಿಚಾರಣೆಗೆ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ. ಇದು ಕಲ್ಯಾಣ ಕರ್ನಾಟಕ ಭಾಗದ ಜನರ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರವು ಪಣತೊಟ್ಟಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಹತ್ತು ವರ್ಷಗಳ ಹಿಂದೆ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಶಾಲಾ ಮಕ್ಕಳ ಮಾನಸಿಕ ಮತ್ತು ದೈಹಿಕ ಸದೃಢತೆಗಾಗಿ ಜಾರಿಗೆ ತಂದ **'ಕ್ಷೀರ ಭಾಗ್ಯ'** ಯೋಜನೆ ಪ್ರಾರಂಭವಾಗಿ ಒಂದು ದಶಕ ಕಳೆದಿದೆ. ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 7 ರಂದು ಮಧುಗಿರಿಯಲ್ಲಿ ದಶಮಾನೋತ್ಸವ ಸಂಭ್ರಮವನ್ನು ಆಚರಿಸಲಾಯಿತು. ಈ ಯೋಜನೆಯು ನೆರೆಹೊರೆಯ ಇತರೆ ರಾಜ್ಯಗಳಿಗೆ ಮಾದರಿಯಾಗಿರುವುದಲ್ಲದೆ, ರಾಜ್ಯದ ಅತ್ಯುತ್ತಮ ಪೂರಕ ಪೌಷ್ಟಿಕ ಆಹಾರ ವಿತರಣೆಯ ಯೋಜನೆ ಎಂದು ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯದಿಂದ ಪ್ರಶಂಸೆ ಪಡೆದಿದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕ್ಷೀರಭಾಗ್ಯ ಯೋಜನೆಯಿಂದ ಆದ ಶೈಕ್ಷಣಿಕ ಪರಿಣಾಮಗಳ ಕುರಿತು ಕೈಗೊಂಡ ಅಧ್ಯಯನದಿಂದ ಬಿಸಿ ಹಾಲು ಸ್ವೀಕರಿಸಿದ ನಂತರದಲ್ಲಿ ಶೇ. 95.60 ರಷ್ಟು ಶಾಲಾ ಮಕ್ಕಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ಲವಲವಿಕೆಯಿಂದ ಪಾಲ್ಗೊಳ್ಳುತ್ತಿರುವುದು ತಿಳಿದು ಬಂದಿದೆ.

ಇನ್ನು ಮಹಿಳಾ ಸಬಲೀಕರಣ ದೃಷ್ಟಿಯಿಂದ ಕುಟುಂಬದ ಯಜಮಾನಿಗೆ ಮಾಸಿಕವಾಗಿ 2000 ರೂ. ಆರ್ಥಿಕ ನೆರವು ನೀಡುವ ನಾಲ್ಕನೇ ಗ್ಯಾರಂಟಿ ಯೋಜನೆಯಾದ **'ಗೃಹಲಕ್ಷ್ಮಿ'** ಯೋಜನೆಗೆ ಸರ್ಕಾರವು ಮೈಸೂರಿನಲ್ಲಿ ಆಗಸ್ಟ್ 30 ರಂದು ಅದ್ಧೂರಿಯಾಗಿ ಚಾಲನೆ ನೀಡಿತು. ರಾಜ್ಯದ 1.28 ಕೋಟಿ ಜನ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿದ್ದು, ಅಂದು ಈ ಯೋಜನೆಗೆ ನೋಂದಾಯಿಸಿಕೊಂಡಿದ್ದ 1.13 ಕೋಟಿ ಕುಟುಂಬಗಳ ಯಜಮಾನಿಯರ ಖಾತೆಗೆ ಏಕಕಾಲಕ್ಕೆ ಹಣವನ್ನು ಜಮೆ ಮಾಡಲಾಯಿತು. **'ಗೃಹಲಕ್ಷ್ಮಿ'** ಯೋಜನೆಯನ್ನು ಮಾದರಿಯಾಗಿಟ್ಟುಕೊಂಡು ತಮಿಳುನಾಡು ಸರ್ಕಾರವು ಇತ್ತೀಚೆಗಷ್ಟೇ ಮಹಿಳೆಯರಿಗೆ ತಲಾ ಮಾಸಿಕ 1000 ರೂ. ನೀಡುವ ಯೋಜನೆಗೆ ಚಾಲನೆ ನೀಡಿರುವುದು ಯೋಜನೆಯ ಯಶಸ್ಸಿಗೆ ಸಾಕ್ಷಿಯಾಗಿದೆ.

ಅಕ್ಟೋಬರ್ ತಿಂಗಳು ರಾಷ್ಟ್ರಪಿತ ಮಹಾತ್ಮಾ ಗಾಂಧಿ, ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಹಾಗೂ ದಸರಾ ಹಬ್ಬದ ಸಂಭ್ರಮ ಹೊತ್ತು ತರಲಿದೆ. ಗಾಂಧೀಜಿಯವರ ಸರ್ವೋದಯದ ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹತ್ವದ ಹೆಜ್ಜೆಯಾಗಿದೆ. ಬರದಿಂದ ರಾಜ್ಯದ 192 ತಾಲ್ಲೂಕುಗಳು ತತ್ತರಿಸಿದ್ದು, ರಾಜ್ಯ ಸರ್ಕಾರ ಪರಿಹಾರ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲು ಸಜ್ಜಾಗಿದೆ.

**ಓದುಗರೆಲ್ಲರಿಗೂ ಗಾಂಧಿ ಜಯಂತಿ ಮತ್ತು ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು**

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From:www.kpscvaani.com




# ಅರಮನೆ ನಗರಿಯಲ್ಲಿ ಗೃಹಲಕ್ಷ್ಮಿ ಯೋಜನೆಗೆ ವಿದ್ಯುಕ್ತ ಚಾಲನೆ ನೀಡಿದ ಸರ್ಕಾರ

**ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆಯ ಚಾಲನೆಗೆ ಆರು ಲಕ್ಷಕ್ಕೂ ಅಧಿಕ ಫಲಾನುಭವಿಗಳು ಸಾಕ್ಷಿಯಾದರು.**

ಟಿ.ಕೆ.ಹರೀಶ್

ಎಲ್ಲಾ ದಿಕ್ಕುಗಳಿಂದ ಹರಿದುಬಂದ ಸಹಸ್ರಾರು ಮಹಿಳೆಯರ ಸಮ್ಮುಖದಲ್ಲಿ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆಗೆ ಅರಮನೆ ನಗರಿ ಮೈಸೂರಿನಲ್ಲಿ ಆಗಸ್ಟ್ 30 ರಂದು ವಿದ್ಯುಕ್ತ ಚಾಲನೆ ದೊರಕಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಈ ಅದ್ಧೂರಿ ಸಮಾರಂಭದಲ್ಲಿ 'ಗೃಹಲಕ್ಷ್ಮಿ'ಯರ ಸಂಭ್ರಮ ಎದ್ದು ಕಾಣುತಿತ್ತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಮಹಿಳೆಯರು, ತಾಯಂದಿರು, ಅಕ್ಕ-ತಂಗಿಯರು, ಮನೆಯ ಯಜಮಾನಿಯರ ಮೊಗದಲ್ಲಿ ಸಂತಸ ಮನೆ ಮಾಡಿತ್ತು.

ಚುನಾವಣಾ ಪ್ರಣಾಳಿಕೆಯನ್ನು ಸಮರ್ಪಕವಾಗಿ ಜಾರಿ ಮಾಡುವುದು ರಾಜಧರ್ಮ. ಅದರಂತೆ ಸರ್ಕಾರವು ಐದು ಗ್ಯಾರಂಟಿಗಳಲ್ಲಿ ಮಹತ್ವಾಕಾಂಕ್ಷಿ ನಾಲ್ಕನೇ ಗ್ಯಾರಂಟಿ ಯೋಜನೆಯಾದ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿತು. ರಾಜ್ಯದಲ್ಲಿ 1.26 ಕೋಟಿ ಕುಟುಂಬಗಳಿದ್ದು, ಈ ಯೋಜನೆಗೆ 1.10 ಕೋಟಿ ಜನ ನೋಂದಾಯಿಸಿಕೊಂಡಿದ್ದಾರೆ. ಈ ಕುಟುಂಬಗಳ ಯಜಮಾನಿಯರ ಖಾತೆಗೆ 2000 ರೂ.ಗಳನ್ನು ಜಮಾ ಮಾಡಲಾಯಿತು. ಇಡೀ ಭಾರತದಲ್ಲಿ ಯಾವ ರಾಜ್ಯವೂ ತೊಂದರೆಯಲ್ಲಿರುವ ಜನರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಂದರೆ ವರ್ಷಕ್ಕೆ ತಲಾ 24 ಸಾವಿರ ರೂ. ಹಣವನ್ನು ವರ್ಗಾಯಿಸಿರುವುದಿಲ್ಲ.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಅವರು ಬಟನ್ ಒತ್ತಿ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡಿದಾಗ ವೇದಿಕೆಗೆ ಬಂದ ಅಷ್ಟಲಕ್ಷ್ಮಿಯರು ಹಾಗೂ 2 ಸಾವಿರ ಮೌಲ್ಯದ ಚೆಕ್ ಪ್ರತಿಕೃತಿಯನ್ನು ನೋಡುತ್ತಿದ್ದಂತೆ ಮಹಿಳೆಯರ ಹರ್ಷೋದ್ಗಾರ ಮುಗಿಲು ಮುಟ್ಟಿತು. ರಾಜ್ಯದ 12,600 ಸ್ಥಳಗಳಲ್ಲಿ ಏಕಕಾಲದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ವಿಶೇಷವಾಗಿತ್ತು. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ಹೊಂದಿರುವ ರಣದೀಪ್ ಸಿಂಗ್ ಸುರ್ಜೆವಾಲ ಅವರು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಸೇರಿದಂತೆ ಇತರ ಜನಪ್ರತಿನಿಧಿಗಳು ಈ


Downloaded From:www.kpscvaani.com



ಐತಿಹಾಸಿಕ ಚಾರಿತ್ರಿಕ ಕ್ಷಣಕ್ಕೆ ಸಾಕ್ಷಿಯಾದರು.

ಸಮಾರಂಭದಲ್ಲಿ 1 ಲಕ್ಷ ಆಸನ ವ್ಯವಸ್ಥೆ ಮಾಡಲಾಗಿತ್ತು. ವೇದಿಕೆಗೆ 140 ಅಡಿ ಉದ್ದದ ಸ್ಕ್ರೀನ್ ಹಾಗೂ ವೇದಿಕೆ ಸುತ್ತ ಎಲ್‌ಇಡಿ ಸ್ಕ್ರೀನ್‌ಗಳನ್ನು ಅಳವಡಿಸಲಾಗಿತ್ತು. ಗೃಹಲಕ್ಷ್ಮಿ ಯೋಜನೆ ಉದ್ಘಾಟನೆ ವೇದಿಕೆಯು ಗುಲಾಬಿ ಬಣ್ಣದಲ್ಲಿ ಕಂಗೊಳಿಸುತಿತ್ತು. ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಗಳ ಫಲಾನುಭವಿಗಳಿಗಾಗಿ 2 ಸಾವಿರ ಬಸ್ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮಕ್ಕೆ ನಿರೀಕ್ಷೆಗೂ ಮೀರಿ ಗೃಹಲಕ್ಷ್ಮಿಯರ ಆಗಮನವಾಗಿತ್ತು.

> ಚುನಾವಣಾ ಪೂರ್ವದಲ್ಲಿ ನಾವು ನೀಡಿದ್ದ ಭರವಸೆಯಂತೆ ಅಧಿಕಾರಕ್ಕೆ ಬಂದ ಮೇಲೆ ನೂರು ದಿನಗಳಲ್ಲಿ ನೀಡಿದ್ದ ಆಶ್ವಾಸನೆಯನ್ನು ಈಡೇರಿಸಿದ್ದೇವೆ. ನಾವು ಬಡವರು ಮತ್ತು ಮಧ್ಯಮ ವರ್ಗದವರ ಪರ ಯೋಜನೆ ಘೋಷಿಸಿದಾಗ ಇಲ್ಲದ ಆರೋಪಗಳು ಕೇಳಿ ಬಂದವು. ಆದರೆ ಅವೆಲ್ಲವನ್ನು ಮೀರಿ ಈಗ ಗ್ಯಾರಂಟಿ ಯೋಜನೆಗಳು ಜಾರಿಯಾಗಿವೆ. ಯುವನಿಧಿಯು ಡಿಸೆಂಬರ್ ಅಥವಾ ಜನವರಿಯಲ್ಲಿ ಪ್ರಾರಂಭವಾಗಲಿದೆ. ನಮ್ಮ ಸರ್ಕಾರ ಬಡವರ, ದಲಿತರ, ಹಿಂದುಳಿ, ಅಲ್ಪಸಂಖ್ಯಾತ, ರೈತರ, ಕಾರ್ಮಿಕರ, ಯುವಕರ, ಮಹಿಳೆಯರ ಪರವಾದ ಸರ್ಕಾರ ಎಂದು ಸಾಬೀತು ಮಾಡಲಾಗಿದೆ.
>
> **ಸಿದ್ದರಾಮಯ್ಯ, ಮುಖ್ಯಮಂತ್ರಿಗಳು**

ಆವರಣದ ಮುಂಭಾಗದಲ್ಲಿ ಆಗಮಿಸುವವರನ್ನು ಆಕರ್ಷಿಸಲು ಅಂಬಾವಿಲಾಸ ಅರಮನೆಯ ಪ್ರತಿರೂಪದ ಕಟೌಟ್ ನಿರ್ಮಿಸಲಾಗಿತ್ತು. ಫೇಸ್ ಬುಕ್ ಲೈವ್ ಮೂಲಕ ಕಾರ್ಯಕ್ರಮ ವೀಕ್ಷಿಸಲು ಕೂಡ ಅವಕಾಶ ಮಾಡಿಕೊಡಲಾಗಿತ್ತು.

ಈ ಯೋಜನೆಗೆ ಚಾಲನೆ ನೀಡಿದ ನಂತರ ಮಾತನಾಡಿದ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಯಾವ ಸರಕಾರವೂ ಈ ರೀತಿಯ ಯೋಜನೆಗಳನ್ನು ಮಾಡಿಲ್ಲ. ನಮ್ಮ ಸರಕಾರ ನುಡಿದಂತೆ ನಡೆದಿದೆ. ನೀಡಿದ್ದ ಭರವಸೆಯನ್ನು ಪೂರೈಸಿದೆ. ಸಿದ್ದರಾಮಯ್ಯ ನೇತೃತ್ವದ ಸರಕಾರವು 5 ಗ್ಯಾರಂಟಿಗಳಲ್ಲಿ ನಾಲ್ಕನ್ನು ಸಮರ್ಥವಾಗಿ ಅನುಷ್ಠಾನಗೊಳಿಸಿದ್ದು, ಉಳಿದಿರುವ 'ಯುವ ನಿಧಿ' ಯೋಜನೆಯು ಇನ್ನು ಕೆಲವೇ ತಿಂಗಳಲ್ಲಿ ಜಾರಿಗೆ ಬರಲಿದೆ ಎಂದರು.

ಹಾಗೆಯೇ ಆಗಸ್ಟ್ 27ಕ್ಕೆ ಸರ್ಕಾರ ಅಧಿಕಾರಕ್ಕೆ ಬಂದು 100 ದಿನಗಳನ್ನು ಪೂರೈಸಿದ ಸಂದರ್ಭದಲ್ಲಿ ಜನತೆಯ ಮುಂದೆ ಸರ್ಕಾರದ ಸಾಧನೆಗಳನ್ನು ತಿಳಿಸಲು ಸಣ್ಣ ಕೈಪಿಡಿ ಹೊರ ತರಲಾಯಿತು. ಆ ಮೂಲಕ ಸರ್ಕಾರವು ರಾಜ್ಯದ ಜನತೆಗೆ 100 ದಿನಗಳಲ್ಲಿ ಸರ್ಕಾರ ಮಾಡಿರುವ ಕರ್ತವ್ಯ, ಜವಾಬ್ದಾರಿ ಹಾಗೂ ಸಾಧನೆಯನ್ನು ತಿಳಿಸಿತು.

ಮಹಿಳೆಯರ ಸಬಲೀಕರಣವೆಂಬ ಮಾತು ಕೇವಲ ವಾದ ಅಥವಾ ಭಾಷಣಕ್ಕಷ್ಟೇ ಸೀಮಿತವಾಗಿರದೆ, ಗೃಹಲಕ್ಷ್ಮಿ ಯೋಜನೆಯ ಮೂಲಕ ಕಾರ್ಯೋನ್ಮುಕವಾಗಿದೆ. ಬಡ, ಶ್ರಮಿಕ ವರ್ಗದ ಮಹಿಳೆಯರು ಜೀವನ ನಡೆಸುವ ಶೈಲಿಯನ್ನು ಸರ್ಕಾರ ಬಹಳ ಹತ್ತಿರದಿಂದ ಅವಲೋಕಿಸಿದೆ. ಆದ್ದರಿಂದಲೇ ಇಂತಹ ಗಟ್ಟಿ ನಿರ್ಧಾರಗಳು ಹೊರಬರಲು ಸಾಧ್ಯವಾಗಿದೆ. ಮಾಹೆಯಾನ 2000 ರೂ.ಗಳನ್ನು ಮಹಿಳೆಯರ ಖಾತೆಗೆ ಜಮಾ ಮಾಡುವ ಈ ಯೋಜನೆಯು ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ಮಹಿಳೆಯರಿಗೆ ಸಹಾಯ ಹಸ್ತ ಚಾಚಿದಂತ್ತಾಗಿದೆ. ಮೂಲಭೂತ ಸೌಕರ್ಯಗಳನ್ನು ಪಡೆಯುವುದಕ್ಕಾಗಿಯೇ ಮಹಿಳೆಯರು ಹೋರಾಡುವ ಪರಿಸ್ಥಿತಿ ಇತ್ತು. ನಾಳೆಯ ಜೀವನ ನಿರ್ವಹಣೆಗೆ ಇಂದಿನಿಂದಲೇ ಪೂರ್ವ ಲೆಕ್ಕಾಚಾರ ಮಾಡುವ ಈ ದಿನಮಾನಗಳಲ್ಲಿ ಇಂತಹ



Downloaded From:www.kpscvaani.com



## ಗೃಹಲಕ್ಷ್ಮಿ ಯೋಜನೆಗೆ ರಾಹುಲ್ ಗಾಂಧಿ ಸಂತಸ

ಕರ್ನಾಟಕ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿಯಾಗಲಿದೆ. ಕರ್ನಾಟಕದ ಯೋಜನೆಗಳು ಕೇವಲ ಭರವಸೆಯ ಯೋಜನೆಗಳಲ್ಲ, ದೇಶದ ಆಡಳಿತಕ್ಕೊಂದು ದಿಕ್ಸೂಚಿ. ಚುನಾವಣೆ ಪೂರ್ವದಲ್ಲಿ ನಾವು ಕೊಟ್ಟ ಭರವಸೆಗಳನ್ನು ಈಡೇರಿಸಿದ್ದೇವೆ. ನಮಗೆ ಬದ್ಧತೆ ಇದೆ. ನಾವು ನುಡಿದಂತೆ ನಡೆದಿದ್ದೇವೆ.

ಯುವ ನಿಧಿ ಯೋಜನೆಯನ್ನು ಹೊರತುಪಡಿಸಿ ನಾವು ಕೊಟ್ಟ ನಾಲ್ಕು ಖಾತರಿಗಳು (ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಮತ್ತು ಅನ್ನಭಾಗ್ಯ) ರಾಜ್ಯದ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುತ್ತವೆ. ಇದರ ಹಿಂದೆ ಆಳವಾದ ಚಿಂತನೆ ಇದೆ. ಕರ್ನಾಟಕದ ಮಹಿಳೆಯರು ಮರದ ಬಲಶಾಲಿ ಬೇರುಗಳಿದ್ದಂತೆ. "ಬೇರುಗಳು ಗಟ್ಟಿಯಾಗಿದ್ದರೆ, ಮರ ಯಾವುದೇ ಬಿರುಗಾಳಿ ಬಂದರೂ ತಡೆದುಕೊಳ್ಳುತ್ತದೆ.

ಕಳೆದ ವರ್ಷ 'ಐಕತ್ಯಾ ಯಾತ್ರೆ'ಯಲ್ಲಿ ಕರ್ನಾಟಕದಲ್ಲಿ 600 ಕಿ.ಮೀ. ದೂರವನ್ನು ನಡೆದುಕೊಂಡು ಹೋಗುವಾಗ ಮಹಿಳೆಯರು ಬೆಲೆ ಏರಿಕೆ ವಿರುದ್ಧ ಅಸಮಾಧಾನಗೊಂಡಿದ್ದನ್ನು ಗಮನಿಸಿದ್ದೆ. ಮಹಿಳೆಯರು ಎದುರಿಸುತ್ತಿರುವ ಸವಾಲುಗಳು ಈ ಐದು ಭರವಸೆಗಳನ್ನು ಪ್ರಾರಂಭಿಸಲು ಸ್ಫೂರ್ತಿ ನೀಡಿತು. ಇಂದು 1 ಕೋಟಿ ಜನರಿಗೆ ಗೃಹಲಕ್ಷ್ಮಿ ಯೋಜನೆ ತಲುಪುತ್ತಿದೆ. ಇಡೀ ವಿಶ್ವದಲ್ಲೇ ಮಹಿಳೆಯರಿಗೆ ಇಷ್ಟು ದೊಡ್ಡ ಮೊತ್ತದ ಹಣ ನೀಡುವ ಕಾರ್ಯ ನಡೆದಿಲ್ಲ. ಬಡವರ ಕಲ್ಯಾಣಕ್ಕಾಗಿ ಸರಕಾರ ಕೆಲಸ ಮಾಡಬೇಕು ಎಂಬುದು ನಮ್ಮ ಚಿಂತನೆಯಾಗಿದೆ ಎಂದು ರಾಹುಲ್ ಗಾಂಧಿ ತಿಳಿಸಿದರು

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನೂರು ದಿನಗಳಲ್ಲಿ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದೇವೆ. ಇಡೀ ದೇಶದಲ್ಲೇ ಕರ್ನಾಟಕ ಮಾದರಿ ಎಂದು ತೋರಿಸಿದ್ದೇವೆ. ಇಡೀ ದೇಶದಲ್ಲಿ ಬದಲಾವಣೆಯ ಗಾಳಿ ಬೀಸಿದೆ.

**– ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿಗಳು.**

ತಾಯಿ ಚಾಮುಂಡೇಶ್ವರಿ ಸನ್ನಿಧಾನದಲ್ಲಿ, ಸಿಎಂ ತವರು ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ಸಿಕ್ಕಿದ್ದು ನನ್ನ ಜೀವನದ ಸಾರ್ಥಕ ಕ್ಷಣ ಎಂದೇ ಭಾವಿಸುತ್ತೇನೆ. ಜನರ ಕಣ್ಣೀರು ಒರೆಸುವ ಸಲುವಾಗಿ ನಮ್ಮ ಪಕ್ಷವು 5 ಗ್ಯಾರಂಟಿಗಳನ್ನು ಘೋಷಿಸಿತ್ತು. ಇದರಲ್ಲಿ ನಾಲ್ಕು ಯಶಸ್ವಿಯಾಗಿ ಅನುಷ್ಠಾನಗೊಂಡಿವೆ.

**ಏ– ಲಕ್ಷ್ಮಿ ಹೆಬ್ಬಾಳ್ಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು.**

ಯೋಜನೆ ಮಹಿಳಾ ಸಬಲೀಕರಣಕ್ಕೆ ಹೊಸ ಆಯಾಮವನ್ನು ಸೃಷ್ಟಿಸಿದೆ.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, ಹೆಣ್ಣು ಸಂಸಾರದ ಕಣ್ಣು, ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೇ ತೂಗಬಲ್ಲದು ಹೀಗೆ ನಾರಿ ಶಕ್ತಿಯನ್ನು ಅನಾವರಣಗೊಳಿಸುವ ಮಾತುಗಳನ್ನು ಅತ್ಯಂತ ಸೂಕ್ಷ್ಮವಾಗಿ ಅರ್ಥೈಸಿಕೊಂಡಾಗ ಮಹಿಳೆಯರ ನಿರ್ವಹಣಾ ಸಾಮರ್ಥ್ಯದ ಅರಿವು ನಮಗಾಗುತ್ತದೆ. ಆದ್ದರಿಂದ ಮಹಿಳಾ ಸಬಲೀಕರಣವೆಂಬುದು ಅತ್ಯಂತ ಅವಶ್ಯಕವಾಗಿದ್ದು, ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಗೃಹಲಕ್ಷ್ಮಿ ಯೋಜನೆಯಂತಹ ಪರಿಣಾಮಕಾರಿ ಯೋಜನೆಗಳ ಅನುಷ್ಠಾನದ ಅವಶ್ಯಕತೆ ಇತ್ತು.

ರಾಜ್ಯದ ಸುಮಾರು 1.10 ಕೋಟಿ ಮಹಿಳೆಯರಿಗೆ ಇದರ ಪ್ರಯೋಜನ ಸಿಗುತ್ತಿದೆ. ಈ ಯೋಜನೆಯಿಂದ ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳು 2 ಸಾವಿರ ಹಣ ಜಮೆ ಆಗುತ್ತದೆ.

'ಗೃಹಲಕ್ಷ್ಮಿ' ವಿಶ್ವದ ಅತಿದೊಡ್ಡ ನಗದು ವರ್ಗಾವಣೆ ಯೋಜನೆಯಾಗಿದೆ. ಗೃಹಲಕ್ಷ್ಮಿ ಯೋಜನೆಯು ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸುವ ಜೊತೆಗೆ ಅವರ ಜೀವನ ನಿರ್ವಹಣೆಗೂ ಸಹಕಾರಿಯಾಗಲಿದೆ. ಮಹಿಳೆಯರನ್ನು ಸಬಲರನ್ನಾಗಿಸುವಂತಹ ಯೋಜನೆಯನ್ನು ದೇಶದಲ್ಲೇ ಮೊಟ್ಟಮೊದಲಿಗೆ ನೀಡಿದ ಸರ್ಕಾರ ಎಂಬ ಹೆಗ್ಗಳಿಕೆಗೆ ರಾಜ್ಯ ಸರ್ಕಾರವು ಪಾತ್ರವಾಗಿದೆ.

ನಮ್ಮ ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆಯ ಮಾದರಿಯಲ್ಲೇ ತಮಿಳುನಾಡು ಸರ್ಕಾರ ಕೂಡ ಮಹಿಳೆಯರ ಸಬಲೀಕರಣಕ್ಕಾಗಿ ಮಾಸಿಕ ತಲಾ ಒಂದು ಸಾವಿರ ರೂ.ಗಳನ್ನು ನೀಡುವ ಯೋಜನೆಯನ್ನು ಇತ್ತೀಚೆಗಷ್ಟೇ ಚಾಲನೆ ನೀಡಿತು. ಇದು ಕರ್ನಾಟಕ ಸರ್ಕಾರದ ಯೋಜನೆಗಳು ಎಷ್ಟರಮಟ್ಟಿಗೆ ಜನಪ್ರಿಯತೆಯನ್ನು ಹೊಂದಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.



Downloaded From:www.kpscvaani.com



# 371ಜೆ ಜಾರಿಗೆ ದಶಮಾನೋತ್ಸವ ಸಂಭ್ರಮ

ದೇವಯ್ಯ ಗುತ್ತೇದಾರ್

ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಹೈದರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ) ಪ್ರದೇಶದ ಜನರ ಉನ್ನತಿಗಾಗಿ ದಿ.01-01-2013 ರಿಂದ ಜಾರಿಗೊಳಿಸಲಾದ ಸಂವಿಧಾನದ 371 (ಜೆ) ಕಲಂ ತಿದ್ದುಪಡಿಗೆ ಈಗ ದಶಮಾನೋತ್ಸವ ಸಂಭ್ರಮ.

ಈ ತಿದ್ದುಪಡಿಗೆ ಈಗ ದಶಮಾನೋತ್ಸವವಾದರೆ, ಹೈದರಾಬಾದ್ ಪ್ರಾಂತ್ಯ ನಿಜಾಮನಿಂದ ವಿಮೋಚನೆಯಾಗಿ 75 ವರ್ಷ ಪೂರ್ಣಗೊಂಡು ಅಮೃತ ಮಹೋತ್ಸವವೂ ಏಕಕಾಲಕ್ಕೆ ಬಂದಿದೆ. ಈ ತಿದ್ದುಪಡಿ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಸೇರಿ 7 ಜಿಲ್ಲೆಗಳ ಜನರ ಪಾಲಿಗೆ ಕಾಮಧೇನು ಮತ್ತು ಕಲ್ಪವೃಕ್ಷವೆಂದೇ ಬಣ್ಣಿಸಲಾಗುತ್ತಿದೆ.

ಉದ್ಯೋಗ, ಶಿಕ್ಷಣ ಮತ್ತು ಅಭಿವೃದ್ಧಿ ಸೇರಿ ಸರ್ವ ರಂಗಗಳಲ್ಲೂ ಅಭಿವೃದ್ಧಿ ಕಣ್ಣಿಗೆ ಕಾಣುತ್ತಿದೆ. ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ. ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಅನುದಾನ ಹರಿದು ಬರುತ್ತಿದ್ದರೆ, ವೃತ್ತಿಪರ ಕೋರ್ಸ್‌ಗಳಲ್ಲಿ ಮೀಸಲಾತಿ ಸಿಕ್ಕು ಬಡ ಮತ್ತು ಮಧ್ಯಮ ವರ್ಗದ ಮಕ್ಕಳು ಡಾಕ್ಟರ್, ಎಂಜಿನಿಯರ್ ಆಗಿದ್ದಾರೆ.

**ಭರಪೂರ ಅನುದಾನ:**

371ಜೆ ಜಾರಿಗೂ ಮುನ್ನ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಸ್ಥಾಪಿಸಲಾದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಗೆ 30-80 ಕೋಟಿ ರೂ. ಮಾತ್ರ ಅನುದಾನ ಬರುತ್ತಿತ್ತು. ಆದರೆ ಇದು ಜಾರಿಯಾದ ಬಳಿಕ ವರ್ಷಕ್ಕೆ ಬರೋಬ್ಬರಿ 5,000



Downloaded From:www.kpscvaani.com

**371 (ಜೆ) ಕಾಯ್ದೆ ಜಾರಿಯ ದಶಮಾನೋತ್ಸವ ಆಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಷಣದ ಸಾರಾಂಶ**

ಕಲಬುರಗಿಯಲ್ಲಿ ಏರ್ಪಡಿಸಲಾಗಿದ್ದ ಕಲ್ಯಾಣ ಕರ್ನಾಟಕ ವಿಮೋಚನೆಯ ಅಮೃತ ಮಹೋತ್ಸವ ಹಾಗೂ ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದಲ್ಲಿ ವಿಶೇಷ ಸ್ಥಾನಮಾನ ಕಲ್ಪಿಸುವ 371 (ಜೆ) ಕಾಯ್ದೆ ಜಾರಿಯ ದಶಮಾನೋತ್ಸವದ ಆಚರಣೆಯನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, 2013 ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೈದ್ರಾಬಾದ್ ಪ್ರದೇಶ ಅಭಿವೃದ್ಧಿ ಮಂಡಳಿ ಸ್ಥಾಪಿಸಿ ಈ ಭಾಗದ ಅಭಿವೃದ್ಧಿಗೆ ಹೊಸ ವೇಗ ನೀಡುವ ಪ್ರಯತ್ನಕ್ಕೆ ಚಾಲನೆ ನೀಡಲಾಯಿತು. ಜೊತೆಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಜಾರಿ ಮಾಡುವ ಮೂಲಕ ಶತಮಾನಗಳಿಂದ ಹಿಂದುಳಿದ ಈ ಭಾಗದ ಜನರ ಬದುಕಿನಲ್ಲಿ ಹಲವು ಬದಲಾವಣೆಗಳಿಗೆ ಕಾರಣವಾಯಿತು ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ 371 (ಜೆ) ತಿದುಪಡಿಯನ್ವಯ ರಚನೆಗೊಂಡ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರಸಕ್ತ 2023–24 ನೇ ಸಾಲಿನ ಆಯವ್ಯಯದಲ್ಲಿ ತಿಳಿಸಿದಂತೆ 5,000 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಅಲ್ಲದೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಜಿಲ್ಲೆಯವರೇ ಆದ ಡಾ. ಅಜಯ್ ಸಿಂಗ್ ಅವರ ನೇತೃತ್ವದಲ್ಲಿ ಪೂರ್ಣ ಪ್ರಮಾಣದಲ್ಲಿ ಮಂಡಳಿ ರಚಿಸಲಾಗಿದೆ. ಈಗಾಗಲೇ ಅವರು ಪ್ರಥಮ ಮಂಡಳಿ ಸಭೆ ನಡೆಸಿ ಪ್ರಸಕ್ತ ಸಾಲಿಗೆ 3,000 ಕೋಟಿ ರೂ. ಮೊತ್ತಕ್ಕೆ ಕ್ರಿಯಾ ಯೋಜನೆ ರೂಪಿಸುತ್ತಿದ್ದಾರೆ ಎಂದು ತಿಳಿಸಿದರು.

ಶೇಕಡಾ 25 ರಷ್ಟು ಅನುದಾನವನ್ನು ಶಿಕ್ಷಣಕ್ಕೆ ಮೀಸಲಿಟ್ಟಿದ್ದು, ಈ ಭಾಗದಲ್ಲಿ ಶಿಕ್ಷಣದ ಗುಣಮಟ್ಟ ಕಾಪಾಡಲು ಮತ್ತು ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೆ ಕೆ.ಕೆ.ಆರ್.ಡಿ.ಬಿ ಯು 'ಅಕ್ಷರ ಆವಿಷ್ಕಾರ' ಯೋಜನೆ ರೂಪಿಸಿದೆ. ಈ ಭಾಗದಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢಶಲಾ ಶಿಕ್ಷರ ಹುದ್ದೆಗಳನ್ನು 'ಅಕ್ಷರ ಮಿತ್ರ' ಪದನಾಮದಡಿ ಇದೇ ತಿಂಗಳ ಅಂತ್ಯಕ್ಕೆ ಭರ್ತಿ ಮಾಡಲು 18.34 ಕೋಟಿ ರೂ. ಅನುದಾನವನ್ನು ನೀಡಿ ಮಂಜೂರಾತಿ ನೀಡಲಾಗಿದೆ ಎಂಬ ಮಾಹಿತಿ ನೀಡಿದರು.

ಈ ಭಾಗದ ನಿರುದ್ಯೋಗಿ ಪದವಿ ಯುವಕ–ಯುವತಿಯರಿಗೆ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಕಲಬುರಗಿಯಲ್ಲಿ 'ಪರೀಕ್ಷಾ ಪೂರ್ವ ತರಬೇತಿ' ಕೇಂದ್ರವನ್ನು ಮುಂದಿನ ಆರ್ಥಿಕ ವರ್ಷದಿಂದ ಪ್ರಾರಂಭಿಸಲಾಗುತ್ತಿದೆ.

ಕಲ್ಯಾಣ ಕರ್ನಾಟಕ ಪ್ರದೇಶವು ದೇಶದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದರಿಂದ ಈ ಭಾಗದ ಜನರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಮತ್ತು ಪ್ರದೇಶದ ಅಭಿವೃದ್ಧಿಗೆ ವಿಶೇಷ ಅನುದಾನ ಒದಗಿಸುವ ವಿಶೇಷ ಸ್ಥಾನಮಾನ ನೀಡಬೇಕೆಂದು ಎರಡ್ಮೂರು ದಶಕಗಳ ಹೋರಾಟದ ಫಲವಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಕಲ್ಯಾಣ ಕರ್ನಾಟಕ ಭಾಗಕ್ಕೆ 371 (ಜೆ) ಕಾಯ್ದೆ ಜಾರಿಯಾಗಿದೆ. ಈ ಕಾಯ್ದೆ ಜಾರಿಗೆ ರಾಷ್ಟ್ರಪತಿಗಳು ಅಂಕಿತ ನೀಡಿದ ಕೂಡಲೇ ಅಂದು 2013 ರಲ್ಲಿ ರಾಜ್ಯದಲ್ಲಿದ್ದ ನಮ್ಮ ಸರ್ಕಾರ ಕೂಡಲೇ ಪ್ರದೇಶ ಮಂಡಳಿ ರಚಿಸಿದಲ್ಲದೆ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಸ್ಥಳೀಯರಿಗೆ ಮೀಸಲಾತಿ ಸೌಲಭ್ಯ ಒದಗಿಸುವ ಸರ್ಕಾರಿ ಆದೇಶ ಹೊರಡಿಸುವ ಮೂಲಕ ಈ ಭಾಗದ ಅಭಿವೃದ್ಧಿಯ ಹೊಸ ಶಕೆಗೆ ಚಾಲನೆ ನೀಡಲಾಗಿತ್ತು.

ಕಾಯ್ದೆ ಜಾರಿಯಾಗಿ ಇದೀಗ 10 ವರ್ಷ ತುಂಬಿದೆ. ಶತ ಶತಮಾನಗಳಿಂದ ಪ್ರಾಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಕಾರಣಗಳಿಂದ ಹಿಂದುಳಿದ ಪ್ರದೇಶದ ಅಭಿವೃದ್ಧಿಯನ್ನು ದಿನಬೆಳಗಾಗುವುದರೊಳಗೆ ಸಾಧಿಸಲು ಸಾಧ್ಯವಿಲ್ಲ. ಬಹು ಆಯಾಮದ ಬಡತನ ನಿವಾರಣೆ, ಮೂಲಸೌಕರ್ಯ ಅಭಿವೃದ್ಧಿ, ಸಾಮಾಜಿಕ ಜಾಗೃತಿ ಹೀಗೆ ವಿವಿಧ ಆಯಾಮಗಳಲ್ಲಿ ಸರ್ಕಾರ ಆದ್ಯತೆ ನೀಡಿ ಕೆಲಸ ಮಾಡಬೇಕಾಗುತ್ತದೆ. ಕೇವಲ ಅನುದಾನ ಒದಗಿಸುವುದು ಮುಖ್ಯವಲ್ಲ. ಅನುದಾನದ ಬಳಕೆ ಯಾವ ರೀತಿ ಮಾಡಿಕೊಳ್ಳಲಾಗುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ ಎಂದು ಹೇಳಿದರು.

ಅಭಿವೃದ್ಧಿ ಎಂದರೆ ಕೇವಲ ಹೆದ್ದಾರಿ, ರಸ್ತೆ, ದೊಡ್ಡ ದೊಡ್ಡ ಕಟ್ಟಡಗಳು ಮಾತ್ರವಲ್ಲ. ಜನರಿಗೆ ಉತ್ತಮ ಶಿಕ್ಷಣ, ಆರೋಗ್ಯ ಸೇವೆ, ಆರ್ಥಿಕ ಹಾಗೂ ಸಾಮಾಜಿಕ ಭದ್ರತಾ ಭಾವವೂ ಮುಖ್ಯವಾಗುತ್ತದೆ. ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ಆದ್ಯತೆ ನೀಡಿ ಕಾರ್ಯ ನಿರ್ವಹಿಸುತ್ತಿದೆ ಎಂಬುದಾಗಿ ತಿಳಿಸಿದರು.

ಕೋಟಿ ರೂ. ಬಂಪರ್ ಅನುದಾನ ಹರಿದು ಬರುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2013–14 ರಿಂದ 2023–24ರ ವರೆಗೆ ಸರ್ಕಾರದಿಂದ ಒಟ್ಟಾರೆ 14,878.33 ಕೋಟಿ ರೂ. ಅನುದಾನ ಹಂಚಿಕೆ ಮಾಡಿ 10,228.80 ಕೋಟಿ ರೂ. ಬಿಡುಗಡೆ ಮಾಡಿದೆ. ಇದರಲ್ಲಿ 8,520.74 ಕೋಟಿ ರೂ. ಖರ್ಚು ಮಾಡಲಾಗಿದೆ. ಬಿಡುಗಡೆಯಾದ ಅನುದಾನಕ್ಕೆ ಶೇ.83ರಷ್ಟು ಆರ್ಥಿಕ ಪ್ರಗತಿ ಸಾಧಿಸಿದೆ. ಒಟ್ಟಾರೆ 29,215 ಕಾಮಗಾರಿಗಳು ಕೈಗೆತ್ತಿಕೊಂಡು 24,563 ಕಾಮಗಾರಿ ಪೂರ್ಣಗೊಳಿಸಿದ್ದು, 4,652 ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗಾಗಿ ಈ ಭಾಗದಲ್ಲಿ ಅಭಿವೃದ್ಧಿ ಹೊಸ ಪರ್ವವೇ ಶುರುವಾಗಿದೆ.

**ಭರಪೂರ ಮೀಸಲಾತಿ:**

ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಕಚೇರಿ, ಸಂಸ್ಥೆ, ವಿಶ್ವವಿದ್ಯಾಲಯ, ನಿಗಮ–ಮಂಡಳಿಗಳಲ್ಲಿ ಗ್ರೂಪ್ 'ಎ' (ಜೂನಿಯರ್ ಸ್ಕೇಲ್) ಮತ್ತು ಗ್ರೂಪ್ 'ಬಿ' ಹುದ್ದೆಗಳಲ್ಲಿ ಶೇ.75 ರಷ್ಟು, ಗ್ರೂಪ್ 'ಸಿ' ಹುದ್ದೆಗಳಲ್ಲಿ ಶೇ.80 ರಷ್ಟು ಹಾಗೂ ಗ್ರೂಪ್ 'ಡಿ' ಹುದ್ದೆಗಳಲ್ಲಿ ಶೇ.85 ರಷ್ಟು ಹುದ್ದೆಗಳನ್ನು ಹಾಗೂ ರಾಜ್ಯದ ರಾಜಧಾನಿಯಲ್ಲಿರುವ ಸರ್ಕಾರಿ ಕಚೇರಿಗಳಲ್ಲಿ ಶೇ.8 ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗದ ಸ್ಥಳೀಯರಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಿದೆ. ಅದರನ್ವಯ, ಕಳೆದ ಆಗಸ್ಟ್ ಅಂತ್ಯಕ್ಕೆ ವಿವಿಧ ಇಲಾಖೆಗಳಲ್ಲಿ ಈ ಭಾಗದವರಿಗೆ 98,889 ಹುದ್ದೆ ನೇರ ನೇಮಕಾತಿಗೆ ಗುರುತಿಸಿದ್ದು, 70,738 ಭರ್ತಿಯಾಗಿವೆ. ಮುಂಬಡ್ತಿ ಮೀಸಲಿಗೆ ಗುರುತಿಸಿದ 33,371 ಹುದ್ದೆಗಳ ಪೈಕಿ 23,101 ಜನರಿಗೆ ಮುಂಬಡ್ತಿ ಭಾಗ್ಯ ನೀಡಲಾಗಿದೆ. ಇನ್ನು ಖಾಲಿ ಉಳಿದ ಹುದ್ದೆಗಳ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ಸರಕಾರ ಮುಂದಡಿ ಇಟ್ಟಿದೆ.

**ವೃತ್ತಿಪರ ಕೋರ್ಸ್‌ಗಳಲ್ಲಿ ಭರ್ಜರಿ ಸೀಟು:**

371(ಜೆ) ಜಾರಿಗೂ ಮುನ್ನ ಈ ಭಾಗದಿಂದ ನೂರರಿಂದ ಇನ್ನೂರು ಮಕ್ಕಳು ಮೆಡಿಕಲ್ ಸೀಟು ಪಡೆಯುವುದು ಸಹ ದುಸ್ತರವಾಗಿತ್ತು. ಆದರೆ ಇದು ಜಾರಿಯಾದ ಬಳಿಕ ಉನ್ನತ ಶಿಕ್ಷಣ, ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಇತರೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಶೇ.70 ಸ್ಥಾನಗಳನ್ನು ಮತ್ತು ರಾಜ್ಯದ ಉಳಿದ



Downloaded From:www.kpscvaani.com

ಇತರೆ ಭಾಗಗದಲ್ಲಿ ಶೇ.8ರಷ್ಟು ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಇದರ ಪರಿಣಾಮ 2014–15 ರಿಂದ 2022–23ನೇ ಶೈಕ್ಷಣಿಕ ಸಾಲಿನವರೆಗೆ 6,795 ಅಭ್ಯರ್ಥಿಗಳು ಮೆಡಿಕಲ್, 1,388 ಅಭ್ಯರ್ಥಿಗಳು ದಂತ ವೈದ್ಯಕೀಯ, 3,448 ಅಭ್ಯರ್ಥಿಗಳು ಹೋಮಿಯೋಪತಿ, 22,219 ಅಭ್ಯರ್ಥಿಗಳು ಎಂಜಿನಿಯರಿಂಗ್, 3,808 ಅಭ್ಯರ್ಥಿಗಳು ಕೃಷಿ ಸಂಬಂಧಿತ, 1,593 ಅಭ್ಯರ್ಥಿಗಳು ಬಿ.ಫಾರ್ಮಸಿ/ ಡಿ.ಫಾರ್ಮಸಿ ಸೇರಿದಂತೆ ಒಟ್ಟಾರೆ 10 ವರ್ಷದಲ್ಲಿ ಪ್ರದೇಶದ 39,251 ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯದಿಂದ ಉನ್ನತ ಶಿಕ್ಷಣ ಪಡೆದುಕೊಂಡಿದ್ದಾರೆ ಎನ್ನುವುದು ದಾಖಲೆಯೇ ಸರಿ.

**371(ಜೆ) ಅಡಿ ಕೈಗೊಂಡ ಪ್ರಮುಖ ಕೆಲಸಗಳು:**

ಕಲಬರಗಿಯಲ್ಲಿ ಕೆಕೆಆರ್‌ಡಿಬಿಯ 182.65 ಕೋಟಿ ರೂ. ಆರ್ಥಿಕ ನೆರವಿನೊಂದಿಗೆ 371 ಹಾಸಿಗೆಯ ಶ್ರೀ ಜಯದೇವ ಹೃದ್ರೋಗ ಮತ್ತು ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆ ನಿರ್ಮಾಣವಾಗುತ್ತಿದ್ದು, ಮುಂದಿನ 3–4 ತಿಂಗಳಿನಲ್ಲಿ ಲೋಕಾರ್ಪಣೆಗೆ ಸಿದ್ಧವಾಗಲಿದೆ.

ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ಶಿಕ್ಷಣ ಗುಣಮಟ್ಟ ಕಾಪಾಡಲು, ಶಿಕ್ಷಣ ಸಂಸ್ಥೆಗಳ ಮೂಲಸೌಕರ್ಯ ಹೆಚ್ಚಳ ಹಾಗೂ ವಸತಿ ನಿಲಯ ಕಟ್ಟಡ ನಿರ್ಮಾಣ ಹೀಗೆ ಅನೇಕ ಶೈಕ್ಷಣಿಕ ಚಟುವಟಿಕೆಗಳಿಗೆ ಒಟ್ಟಾರೆ 2013–14 ರಿಂದ 2022–23ರ ವರೆಗೆ ಒಟ್ಟಾರೆ 3,502 ಕೋಟಿ ರೂ. ಅನುದಾನ ಖರ್ಚು ಮಾಡಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯ ಬಲವರ್ಧನೆಗಾಗಿ ಆರೋಗ್ಯ ಕೇಂದ್ರ ನಿರ್ಮಾಣ, ಅಗತ್ಯ ವೈದ್ಯಕೀಯ ಸಲಕರಣೆ ಪೂರೈಕೆಗೆ 2013–14 ರಿಂದ 2022–23ರ ವರೆಗೆ ಸುಮಾರು 875.50 ಕೋಟಿ ರೂ. ಅನುದಾನ ಒದಗಿಸಿದೆ. ಶಿಕ್ಷಣ ಮತ್ತು ಆರೋಗ್ಯಕ್ಕೆ ಮಂಡಳಿ ಹೆಚ್ಚಿನ ಒತ್ತು ನೀಡಿದೆ. 7 ಜಿಲ್ಲೆಗಳ 37 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ 129.50 ಕೋಟಿ ರೂ. ಆರ್ಥಿಕ ಸಹಾಯ ಒದಗಿಸಿದೆ. ಈ ಭಾಗದ 38 ತಾಲೂಕುಗಳಲ್ಲಿ 1,060 ಹೊಸದಾಗಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ 159 ಕೋಟಿ ರೂ. 20 ಪರಿಶಿಷ್ಟ ಜಾತಿ ಹಾಗೂ



20 ಪರಿಶಿಷ್ಟ ಪಂಗಡದ ಹಾಸ್ಟೆಲ್ ನಿರ್ಮಾಣಕ್ಕಾಗಿ 204 ಕೋಟಿ ರೂ. ಅನುದಾನ ಮಂಜೂರಾತಿ ನೀಡಲಾಗಿದೆ.

**ಸಾರಿಗೆ ಕ್ಷೇತ್ರದಲ್ಲಿ ಹೊಸ ಪರ್ವ:**

ವಾಯುಯಾನ ಕ್ಷೇತ್ರಕ್ಕೆ ಮಂಡಳಿ ಬಲ ತುಂಬಿದೆ. ಕೆಕೆಆರ್‌ಡಿಬಿಯಿಂದ 58.52 ಕೋಟಿ ರೂ. ಅನುದಾನ ನೆರವಿನಿಂದ ಒಟ್ಟಾರೆ 181 ಕೋಟಿ ರೂ. ವೆಚ್ಚದಲ್ಲಿ ಕಲಬುರಗಿಯಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಿದ್ದು, ಇದರಿಂದ ಈ ಭಾಗದ ಕೈಗಾರಿಕೆ, ಶಿಕ್ಷಣ, ಕೃಷಿ, ಪ್ರವಾಸೋದ್ಯಮ, ಆರೋಗ್ಯ ಕ್ಷೇತ್ರ ಅಭಿವೃದ್ಧಿಗೆ ನೆರವಾಗಿದೆ. ರಾಯಚೂರಿನ ಯರಮರಸ್ ಹೊರವಲಯದಲ್ಲಿ 185.57 ಕೋಟಿ ರೂ. ವೆಚ್ಚದಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಲು ಈಗಾಗಲೇ 404 ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿದೆ. ಆರಂಭಿಕ ಮೂಲಸೌಕರ್ಯಗಳಿಗೆ ಕೆಕೆಆರ್‌ಡಿಬಿಯಿಂದ 84.66 ಕೋಟಿ ರೂ. ಅನುದಾನ ಒದಗಿಸಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಹೊಸದಾಗಿ 316 ಬಸ್‌ಗಳನ್ನು ಖರೀದಿಸಲು ಕೆಆರ್‌ಟಿಸಿಗೆ 45 ಕೋಟಿ ರೂ. ಒದಗಿಸಲಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಕಲಬುರಗಿ–ಅಫಜಲಪೂರ ರಸ್ತೆಯಲ್ಲಿ ಬರುವ 35.05 ಕೋಟಿ ರೂ. ವೆಚ್ಚದ ಮತ್ತು ಕಲಬುರಗಿ ನಗರದ ಜೇವರ್ಗಿ ರಸ್ತೆಯಲ್ಲಿ 23.50 ಕೋಟಿ ರೂ. ವೆಚ್ಚದಲ್ಲಿ ರೈಲ್ವೆ ಓವರ್ ಬ್ರಿಡ್ಜ್ (ಆರ್ ಒ ಬಿ) ನಿರ್ಮಿಸುವ ಮೂಲಕ ಕಲಬುರಗಿ ನಗರದಲ್ಲಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ.

**ಆರೋಗ್ಯ ಕ್ಷೇತ್ರಕ್ಕೆ ಬಲ:**

ಕಲಬುರಗಿ, ಯಾದಗಿರಿ, ಕೊಪ್ಪಳ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು, ಕಲಬುರಗಿಯಲ್ಲಿ 36.17 ಕೋಟಿ ರೂ. ವೆಚ್ಚದಲ್ಲಿ 120 ಹಾಸಿಗೆಯ ಸುಸಜ್ಜಿತ ಟ್ರಾಮಾ ಸೆಂಟರ್ (ತುರ್ತು ಚಿಕಿತ್ಸಾ ಘಟಕ) ಅನ್ನು ನಿರ್ಮಿಸಲಾಗಿದೆ. ಇತ್ತೀಚಿಗೆ ಮಂಡಿಸಿದ ಆಯವ್ಯಯದಲ್ಲಿ ಕಲಬುರಗಿಯ ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ ಘೋಷಿಸಿ, 70 ಕೋಟಿ ರೂ. ಮೀಸಲಿಡಲಾಗಿದೆ. ಜಿಮ್ಸ್ ಆವರಣದಲ್ಲಿಯೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾರ್ಯ ಸಹ ಭರದಿಂದ ಸಾಗಿದೆ. ಇದರಿಂದ ಪ್ರದೇಶದಲ್ಲಿ ಆರೋಗ್ಯ ಸೇವೆ ಮತ್ತಷ್ಟು ಉತ್ತಮಗೊಳುತ್ತಾ ಕಲಬುರಗಿ ಮೆಡಿಕಲ್ ಹಬ್ ಆಗಿ ಪರಿವರ್ತನೆಯಾಗಿದೆ ಎಂದರೆ ತಪ್ಪಾಗಲಾರದು.

**ಶಿಕ್ಷಣಕ್ಕೆ ಬಲ:**

ಮಂಡಳಿ 2023–24ನೇ ವರ್ಷವನ್ನು ಶಿಕ್ಷಣ ವರ್ಷವೆಂದು ಘೋಷಿಸಿ ಶಿಕ್ಷಣಕ್ಕೆ ಶೇ.25ರಷ್ಟು ಅನುದಾನ ಮೀಸಲಿರಿಸಿದೆ. ಅಕ್ಷರ ಆವಿಷ್ಕಾರ ಹೆಸರಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಹೊರಟಿದೆ. ಖಾಲಿ ಇರುವ 2,619 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು 'ಅಕ್ಷರ ಮಿತ್ರ' ಎಂಬ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡಿದ್ದು, ಶಿಕ್ಷಕರ ಹುದ್ದೆ ಖಾಲಿ ಇರದ ಏಕೈಕ ಭಾಗ ಕಲ್ಯಾಣ ಕರ್ನಾಟಕ ಆಗಲಿದ್ದು, ದೇಶದಲ್ಲೇ ಇದೊಂದು ಐತಿಹಾಸಿಕ ಕ್ರಮ ಎಂದೇ ಬಣ್ಣಿಸಲಾಗುತ್ತಿದೆ. ಒಟ್ಟಿನಲ್ಲಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಅಕ್ಷರ, ಅರಣ್ಯ ಮತ್ತು ಆರೋಗ್ಯ ಕ್ಷೇತ್ರವನ್ನು ಪ್ರಮುಖ ಆದ್ಯತೆಯಾಗಿ



Downloaded From:www.kpscvaani.com




# ಕೂಲಿ ಕಾರ್ಮಿಕರ ಮಕ್ಕಳ ಪಾಲನೆಗಾಗಿ ಕೂಸಿನ ಮನೆ

**ಗ್ರಾಮೀಣ ಭಾಗದ ಕೂಲಿ ಕಾರ್ಮಿಕ ಮಕ್ಕಳ ಪಾಲನೆಗಾಗಿ ಶಿಸುಪಾಲನಾ ಮಾದರಿಯಲ್ಲಿ ಕೂಸಿನ ಮನೆ ಕೇಂದ್ರಗಳ ಸ್ಥಾಪನೆ.**

ರವಿ ಮಿರಾಸ್ಕರ್

ರಾಜ್ಯದಾದ್ಯಂತ 40 ಕೋಟಿ ರೂ. ವೆಚ್ಚದಲ್ಲಿ 4,000 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮೀಣ ಭಾಗದ ಕೂಲಿ ಕಾರ್ಮಿಕರ ಮಕ್ಕಳ ಪಾಲನೆಯ ಉದ್ದೇಶದಿಂದ ತೆರೆಯಲಾಗುತ್ತಿರುವ “ಕೂಸಿನ ಮನೆ' ಶಿಶುಪಾಲನಾ ಕೇಂದ್ರಗಳ ಲೋಗೋವನ್ನು ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು.

ಕಲಬುರಗಿ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯ ಧ್ವಜಾರೋಹಣ ನಂತರ ಯೋಜನೆಯ ಲೋಗೋವನ್ನು ಗ್ರಾಮೀಣಾಭಿವೃಧ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ–ಬಿ.ಟಿ ಸಚಿವರಾದ ಪ್ರಿಯಾಂಕ್ ಖರ್ಗೆ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸೇರಿ ಮುಖ್ಯಮಂತ್ರಿ ಅವರು ಅನಾವರಣಗೊಳಿಸಿದರು.

ರಾಜ್ಯ ಸರ್ಕಾರ "ಕೂಸಿನ ಮನೆ" ತೆರೆಯಲು 40 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆಯಾದರೂ ಶಿಶುಪಾಲನಾ ಕೇಂದ್ರ ನಡೆಸಲು ಅಗತ್ಯವಿರುವ ಕಟ್ಟಡ, ಇತರ ಮೂಲ ಸೌಲಭ್ಯಗಳನ್ನು ಹಾಗೂ ಅನುದಾನವನ್ನು ಗ್ರಾಮ ಪಂಚಾಯಿತಿಗಳು ತಮ್ಮ ಸಂಪನ್ಮೂಲದಲ್ಲಿಯೇ ಹೊಂದಿಸಬೇಕು.

ಪ್ರಸಕ್ತ 2023–24ರ ಆಯವ್ಯಯ ಭಾಷಣದಲ್ಲಿನ ಘೋಷಣೆಯಂತೆ ಗ್ರಾಮೀಣ ಪ್ರದೇಶದಲ್ಲಿ ನರೇಗಾ ಯೋಜನೆಯಡಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗದಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ಕೂಲಿ ಕಾರ್ಮಿಕರ 3 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು "ಕೂಸಿನ ಮನೆ" ಶಿಶುವಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. “ಕೂಸಿನ ಮನೆ' ಕೆಂದ್ರಗಳು ಸ್ಥಳೀಯ ಕಾರ್ಮಿಕರ ಅನುಕೂಲಕ್ಕೆ ತಕ್ಕಂತೆ ದಿನದಲ್ಲಿ 6 ಗಂಟೆ 30 ನಿಮಿಷಗಳ ಕಾಲ ಕಾರ್ಯನಿರ್ವಹಿಸುತ್ತವೆ. ಗ್ರಾಮ ಪಂಚಾಯಿತಿಗಳೇ ಕೇಂದ್ರದ ಕಾರ್ಯನಿರ್ವಹಿಸುವ ಸಮಯವನ್ನು ನಿರ್ಧರಿಸಲಿದೆ.

**ಪ್ರತಿ ಕೇಂದ್ರದಲ್ಲಿ 10 ಜನ ಕೇರ್ ಟೇಕರ್ಸ್:** 4000 ಶಿಶು ಪಾಲನಾ ಕೇಂದ್ರಗಳಿಗೆ ಪ್ರತಿ ಕೇಂದ್ರಕ್ಕೆ ನರೇಗಾ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ 10 ಜನ ಕೇರ್ ಟೇಕರ್ಸ್‌ಗಳನ್ನು (ಮಕ್ಕಳ ಆರೈಕೆದಾರರು) ಇರಲಿದ್ದಾರೆ. ಇವರಿಗೆ ಮೊಬೈಲ್ ಕ್ರಶ್ ದೆಹಲಿ ಸಂಸ್ಥೆಯ ಸಹಕಾರದಿಂದ ತರಬೇತಿ ನೀಡಲಾಗುವುದು. ಇದರಿಂದ 40,000 ನರೇಗಾ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ ಮಹಿಳೆಯರಿಗೆ ಮಕ್ಕಳ ಆರೈಕೆಯ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಲಾಗುತ್ತಿದೆ.

ಪ್ರತಿ 'ಕೂಸಿನ ಮನೆ' ಕೇಂದ್ರದಲ್ಲಿ ನರೇಗಾ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ ಕುಟುಂಬದ 3 ವರ್ಷದೊಳಗಿನ ಗರಿಷ್ಠ 25 ಮಕ್ಕಳನ್ನು ದಾಖಲೆ ಮಾಡಿಕೊಳ್ಳಲು ಅವಕಾಶ ಇರಲಿದೆ. ಒಟ್ಟಿನಲ್ಲಿ ಈ ಕೂಸಿನ ಮನೆಗಳು ಪ್ರಾರಂಭವಾದರೆ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ತಮ್ಮ ಮೂರು ವರ್ಷದೊಳಗಿನ ಮಕ್ಕಳನ್ನು ಈ ಕೇಂದ್ರದಲ್ಲಿ ಬಿಟ್ಟು, ನೆಮ್ಮದಿಯಿಂದ ಕೆಲಸಕ್ಕೆ ಹೋಗಬಹುದಾಗಿದೆ.



Downloaded From:www.kpscvaani.com



# ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಚೇತೋಹಾರಿಯಾದ ಕ್ಷೀರಭಾಗ್ಯ

**ಕ್ಷೀರಭಾಗ್ಯ ಯೋಜನೆಯು ಜಾರಿಗೊಂಡು ಹತ್ತು ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಮಧುಗಿರಿಯಲ್ಲಿ ದಶಮಾನೋತ್ಸವವನ್ನು ಆಚರಿಸಲಾಯಿತು.**

ಸುಭಾಷಿಣಿ

ಸಾಕಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದನ್ನು ಮನಗಂಡು, ಅವರನ್ನು ಅಪೌಷ್ಟಿಕತೆಯಿಂದ ದೂರ ಮಾಡುವ ಉದ್ದೇಶದಿಂದ ಹತ್ತು ವರ್ಷಗಳ ಹಿಂದಯೇ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಸರ್ಕಾರಿ ಶಾಲಾ ಮತ್ತು ಅಂಗನವಾಡಿ ಮಕ್ಕಳಿಗೆ ಹಾಲು ನೀಡುವ ಕ್ಷೀರಭಾಗ್ಯ ಯೋಜನೆಗೆ ಚಾಲನೆ ನೀಡಿತ್ತು. ದೇಶದಲ್ಲಿಯೇ ಪ್ರಥಮ ಬಾರಿಗೆ ಶಾಲಾ ಮಕ್ಕಳಿಗೆ ಹಾಲು ನೀಡುವ ಯೋಜನೆಯನ್ನು 2013 ರ ಆಗಸ್ಟ್ 1 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದ್ದರು.

ಮಕ್ಕಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಿದ್ದರೆ ಮಾತ್ರ ಆರೋಗ್ಯವಂತರಾಗಿ ಉತ್ತಮ ಶಿಕ್ಷಣ ಪಡೆಯಲು ಸಾಧ್ಯ. ಎಲ್ಲಾ ಜಾತಿಯ ಎಲ್ಲಾ ಧರ್ಮದ ಬಡ ಮತ್ತು ಮಧ್ಯಮ ವರ್ಗದ ಮಕ್ಕಳ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅಂದು ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಕ್ಷೀರಭಾಗ್ಯ ಯೋಜನೆಯನ್ನು ಜಾರಿಗೊಳಿಸಿತ್ತು.

ಸದರಿ ಯೋಜನೆಯು ನೆರೆಹೊರೆಯ ಇತರೆ ರಾಜ್ಯಗಳಿಗೆ ಮಾದರಿಯಾಗಿರುವುದಲ್ಲದೆ, ಈ ಯೋಜನೆಯನ್ನು ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯವು ಪ್ರತಿ ವರ್ಷವು ಶಾಲಾ ಮಕ್ಕಳಿಗೆ ಒದಗಿಸುತ್ತಿರುವ ರಾಜ್ಯದ ಅತ್ಯುತ್ತಮ ಪೂರಕ ಪೌಷ್ಟಿಕ ಆಹಾರ ವಿತರಣೆಯ ಯೋಜನೆಯೆಂದು ಪ್ರಾರಂಭದಿಂದಲೂ ಇದುವರೆಗೂ ಗುರುತಿಸಿ ರಾಷ್ಟ್ರಮಟ್ಟದಲ್ಲಿ ಪ್ರಶಂಸೆಯನ್ನು ಮಾಡುತ್ತಾ ಬಂದಿದೆ.

'ಹಸಿವು ಮುಕ್ತ ಕರ್ನಾಟಕ' ಮತ್ತು 'ಅನೀಮಿಯಾ ಮುಕ್ತ ಕರ್ನಾಟಕ' ದಂತಹ ಕಾರ್ಯಕ್ರಮಗಳಿಗೆ ಪೂರಕವಾಗಿ ಶಾಲಾ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯು



Downloaded From:www.kpscvaani.com



ಕ್ಷೀರಭಾಗ್ಯ ಜಾರಿಯಾಗಿ ಹತ್ತು ವರ್ಷ ಪೂರ್ಣಗೊಂಡಿದೆ. ಶಾಲಾ ಮಕ್ಕಳು ಪೌಷ್ಟಿಕರವಾದ ಹಾಲನ್ನು ಸೇವಿಸುವ ಮೂಲಕ ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗುವ ಜೊತೆಗೆ ಉತ್ತಮ ಶಿಕ್ಷಣ ಪಡೆಯಲು ಸಾಧ್ಯವಾಗಿದೆ. ಈ ಯೋಜನೆಯು ಹಾಲು ಉತ್ಪಾದಿಸುವ ರೈತರು ಹಾಗೂ ಬಡವರ ಮಕ್ಕಳಿಗೆ ನೆರವಾಗುವ ಯೋಜನೆಯಾಗಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಯನ್ನು ಪಡೆದಿದೆ. 54.68 ಲಕ್ಷ ಮಕ್ಕಳಿಗೆ ಸರ್ಕಾರದ ವತಿಯಿಂದ ಹಾಲನ್ನು ಯಶಸ್ವಿಯಾಗಿ 10 ವರ್ಷಗಳಿಂದ ಪೂರೈಸಲಾಗುತ್ತಿದೆ.

–ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಅತ್ಯಂತ ಪರಿಣಾಮಕಾರಿಯಾಗಿದೆ ಮತ್ತು ಪ್ರಯೋಜನಕಾರಿಯಾಗಿದೆ. ಇಂತಹ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಿ ಒಂದು ದಶಕ ಕಳೆದ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಕೊಂಡವಾಡಿ ಮತ್ತು ಕೋಡಿಗೇನಹಳ್ಳಿ ಶಾಲೆಗಳಲ್ಲಿ ಕೆಎಂಎಫ್ ವತಿಯಿಂದ ಸೆಪ್ಟೆಂಬರ್ 7 ರಂದು 'ಕ್ಷೀರಭಾಗ್ಯ' ಯೋಜನೆಯ ದಶಮಾನೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಅವರು ನಾಡಿನ ಮಕ್ಕಳ ಮಾನಸಿಕ ಮತ್ತು ದೈಹಿಕ ಸದೃಢತೆಗಾಗಿ ಕ್ಷೀರ ಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿ ಸುಮಾರು 54 ಲಕ್ಷಕ್ಕೂ ಅಧಿಕ ಮಕ್ಕಳು ಪೌಷ್ಟಿಕ ಆಹಾರವನ್ನು ಪ್ರತಿ ದಿನ ಸೇವಿಸುವಂತಾಗಿದೆ. ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಪಾರ ಮೆಚ್ಚುಗೆ ಗಳಿಸಿದೆ ಎಂದರು.

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಪ್ರತಿ ವಿದ್ಯಾರ್ಥಿಗೆ 150 ಮಿ.ಲಿ ಪ್ರಮಾಣದಲ್ಲಿ ಬಿಸಿ ಹಾಲನ್ನು 18 ಗ್ರಾಂ ಕೆನೆಭರಿತ ಹಾಲಿನ ಪುಡಿಗೆ 10 ಗ್ರಾಂ ಸಕ್ಕರೆ ಬೆರೆಸಿ ಸಿದ್ಧಪಡಿಸಿ ವಾರದಲ್ಲಿ 5 ದಿನ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಮಕ್ಕಳಿಗೆ ನೀಡಲಾಗುತ್ತಿದೆ. ಈ ಯೋಜನೆಯಡಿ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಬಿಸಿಹಾಲಿನಲ್ಲಿ 60 ಕಿ.ಕ್ಯಾಲರಿ ಶಕ್ತಿ, 4.8 ಗ್ರಾಂ ಕಾರ್ಬೋಹೈಡ್ರೇಟ್, 33 ಗ್ರಾಂ ಪ್ರೋಟೀನ್, 3.1 ಗ್ರಾಂ ಕೊಬ್ಬಿನಾಂಶದೊಂದಿಗೆ ವಿಟಮಿನ್ ಎ, ಕ್ಯಾಲ್ಸಿಯಂ, ಮ್ಯಾಗ್ನಿಶಿಯಂ ಮತ್ತಿತರ ಖನಿಜಾಂಶಗಳು ಇರುತ್ತದೆ.

ಹಾಗಾಗಿ ಹೇರಳವಾಗಿ ಖನಿಜಾಂಶಗಳಿಂದ ಕೂಡಿರುವ ಹಾಲನ್ನು ಕುಡಿಯುತ್ತಿರುವ ಮಕ್ಕಳಲ್ಲಿ ಕಣ್ಣಿನ ಆರೋಗ್ಯ, ಮೂಳೆ ಗಡಸುತನ, ಹಲ್ಲುಗಳ ಆರೋಗ್ಯ, ಚರ್ಮದ ಕಾಂತಿ ವೃದ್ಧಿಸುತ್ತಿದೆಯಲ್ಲದೆ, ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯವು ಉತ್ತಮಗೊಳ್ಳುತ್ತಿದೆ.

ಪ್ರಸ್ತುತ ರಾಜ್ಯದ 2023–24 ನೇ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 53,882 ಶಾಲೆಗಳಲ್ಲಿ ಕ್ಷೀರಭಾಗ್ಯ ಯೋಜನೆಯಡಿ 1 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 58 ಲಕ್ಷ ಮಕ್ಕಳು ಫಲಾನುಭವಿಗಳಾಗಿದ್ದಾರೆ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಾಹಾಮಂಡಳಿ ಒಕ್ಕೂಟಗಳ ಸಂಸ್ಥೆಯು ರಾಜ್ಯ ಸರ್ಕಾರದ ಬೇಡಿಕೆಯಂತೆ ಎಲ್ಲಾ 31 ಜಿಲ್ಲೆಗಳ ಶಾಲೆಗಳಿಗೆ ಉತ್ತಮ ಗುಣಮಟ್ಟದ ಕೆನೆಭರಿತ ಹಾಲಿನ ಪುಡಿಯನ್ನು ನೇರವಾಗಿ ಮತ್ತು ಸುರಕ್ಷಿತವಾಗಿ ಸರಬರಾಜು ಮಾಡುತ್ತದೆ.

ಶಾಲೆಗೆ ಹಾಜರಾದ ಎಲ್ಲಾ ಮಕ್ಕಳಿಗೆ ಬಿಸಿ ಹಾಲನ್ನು ವಾರದಲ್ಲಿ 5 ದಿನಗಳಂದು ನೀಡಲಾಗುತ್ತದೆ. ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಕೇಂದ್ರಿತ ಅಡುಗೆ ಕೇಂದ್ರಗಳಲ್ಲಿ ಪ್ರತಿನಿತ್ಯ ಬಿಸಿ ಹಾಲನ್ನು ಸಿದ್ಧಪಡಿಸಿ ಶಾಲಾ ಪ್ರಾರ್ಥನಾ ಸಮಯದಲ್ಲಿ ವಿತರಿಸುತ್ತಾರೆ. ಶಾಲೆಗೆ ಬರುವ ಮಕ್ಕಳಿಗೆ ಪ್ರಾರ್ಥನಾ ಸಮಯದಲ್ಲಿ ಸಕ್ಕರೆ ಬೆರೆಸಿದ ಬಿಸಿ ಹಾಲು ನೀಡುತ್ತಿರುವುದು ಚೇತೋಹಾರಿಯಾಗಿದೆ ಹಾಗೂ ಶಾಲಾ ಕಲಿಕೆಯಲ್ಲಿ ಹೆಚ್ಚು ಆಸಕ್ತಿಯಿಂದ ಮತ್ತು ಲವಲವಿಕೆಯಿಂದ ಪಾಲ್ಗೊಳ್ಳುತ್ತಿರುವುದನ್ನು ಪೋಷಕರು ಮತ್ತು ಶಿಕ್ಷಕರು ಗುರುತಿಸಿದ್ದಾರೆ.

ಇನ್ನು ಕ್ಷೀರಭಾಗ್ಯ ಯೋಜನೆಯಿಂದ ಆದ ಶೈಕ್ಷಣಿಕ ಪರಿಣಾಮಗಳ ಕುರಿತು 2016–17 ನೇ ಸಾಲಿನಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಕೈಗೊಂಡ ಅಧ್ಯಯನದಿಂದ ರಾಜ್ಯದ ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ವಿಭಾಗಗಳ ವ್ಯಾಪ್ತಿಯಲ್ಲಿರುವ ಶಾಲೆಗಳಲ್ಲಿ ಕ್ಷೀರಭಾಗ್ಯ ಯೋಜನೆಯಡಿ ಪ್ರತಿಶತ ಶಾಲ ಮಕ್ಕಳು ಬಿಸಿ ಹಾಲು ಸ್ವೀಕರಿಸಿದ ನಂತರದಲ್ಲಿ ಶೇ. 95.60 ರಷ್ಟು ಶಾಲಾ ಮಕ್ಕಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ಲವಲವಿಕೆಯಿಂದ ಪಾಲ್ಗೊಳ್ಳಲು ಉತ್ತಮ ದೈಹಿಕಶಕ್ತಿಯನ್ನು ಪಡೆದಿದ್ದಾರೆ ಎಂಬುದು ತಿಳಿದುಬಂದಿದೆ. ಅಲ್ಲದೆ ಶೇ. 94.70 ರಷ್ಟು ಮಕ್ಕಳು ಕ್ರೀಡೆ ಮತ್ತು ಆಟೋಟಗಳಲ್ಲಿ ಆಸಕ್ತಿಯಿಂದ ಭಾಗವಹಿಸಲು ಸಾಧ್ಯವಾಗಿದೆ. ಶೇ. 93.50 ರಷ್ಟು ಮಕ್ಕಳಲ್ಲಿ ಉತ್ಸಾಹ ತಂದಿದೆ. ಶೇ. 95.70 ರಷ್ಟು ಮಕ್ಕಳಲ್ಲಿ ನಿರಂತರ ಶಾಲೆಗೆ ಹಾಜರಾಗಲು ಹಾಗೂ ಕಲಿಕೆಯಲ್ಲಿ ತೊಡಗಲು ಉತ್ತೇಜನ ನೀಡಿದೆ ಎಂದು ಅಧ್ಯಯನದ ವರದಿಯು ತಿಳಿಸಿದೆ.

ಕ್ಷೀರಭಾಗ್ಯ ಯೋಜನೆಯಡಿ ವಿತರಿಸಲಾಗುವ ಹಾಲಿನ ಗುಣಮಟ್ಟ ಮತ್ತು ಶುಚಿ–ರುಚಿಯ ಬಗ್ಗೆ ಮಕ್ಕಳು ಹಾಗೂ ಅವರ ಪೋಷಕರೊಂದಿಗೆ ರಾಜ್ಯದ ನಾಲ್ಕು ವಿಭಾಗಗಳ ವ್ಯಾಪ್ತಿಯಲ್ಲಿ ನಡೆಸಲಾದ ಸಮಾಲೋಚನೆಯಲ್ಲಿ ಶೇ. 81.50 ರಷ್ಟು ಮಕ್ಕಳು ಹಾಲಿನ ಗುಣಮಟ್ಟ ಅತ್ಯುತ್ತಮವಾಗಿದೆ ಎಂದು ತಿಳಿಸಿದ್ದಾರೆ. ಶೇ. 82.00 ರಷ್ಟು ಮಕ್ಕಳು ಹಾಲು ರುಚಿಯಾಗಿರುವುದಲ್ಲದೆ, ಸುವಾಸನೆ ಭರಿತವಾಗಿರುವುದರಿಂದ ಕುಡಿಯಲು ಇಷ್ಟವಾಗುತ್ತದೆ ಎಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ ಬಿಸಿ ಹಾಲು ಶಾಲಾ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರವಾಗಿದ್ದು, ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಮತ್ತು ಅನೀಮಿಯಾವನ್ನು ನಿವಾರಿಸಲು ವರದಾನವಾಗಿದೆ. ಸರ್ಕಾರದ ಸದರಿ ಪ್ರೋತ್ಸಾಹಕ ಕಾರ್ಯಕ್ರಮವು ಸಮುದಾಯದ ಮೆಚ್ಚುಗೆಗೆ ಪಾತ್ರವಾಗಿರುವುದಲ್ಲದೆ, ನೆರೆ ಹೊರೆಯ ಇತರೆ ರಾಜ್ಯಗಳಿಗೂ ಮಾದರಿಯಾಗಿದೆ.



Downloaded From:www.kpscvaani.com



## ಅಭಿವೃದ್ಧಿಯ ಪರಿಭಾಷೆ ಬದಲಿಸಿದ

# ಕರ್ನಾಟಕ ಮಾದರಿ

## 100 ನೂರು ದಿನ

**ಸರ್ಕಾರವು ಅಧಿಕಾರಕ್ಕೆ ಬಂದು ಆಗಸ್ಟ್ 27ಕ್ಕೆ ನೂರು ದಿನಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಸರ್ಕಾರದ ನೂರು ದಿನಗಳ ಸಾಧನೆಯನ್ನು ಈ ಲೇಖನದಲ್ಲಿ ಒರೆಗೆ ಹಚ್ಚಲಾಗಿದೆ.**

ನಟರಾಜು .ಎ

ಇಂದು ದೇಶಾದ್ಯಂತ ನಾಗರಿಕರಲ್ಲಿ ಚುನಾವಣಾ ಪ್ರಣಾಳಿಕೆಗಳ ವಿಚಾರವಾಗಿ ಒಂದು ಸಂಚಲನ ಮೂಡಿದೆ. ಜನಸಾಮಾನ್ಯರ ಚರ್ಚೆಗಳಲ್ಲಿ ಬಹುತೇಕ ಮರೆತೇ ಹೋದಂತಿದ್ದ 'ಚುನಾವಣಾ ಪ್ರಣಾಳಿಕೆ' ಎನ್ನುವ ವಿಷಯ ಮತ್ತೊಮ್ಮೆ ಸಾರ್ವಜನಿಕ ಚರ್ಚೆಗಳ ಕೇಂದ್ರದಲ್ಲಿ ಕಾಣಿಸಿಕೊಂಡಿದೆ. ರಾಜಕೀಯ ಪಕ್ಷಗಳ ಪ್ರಣಾಳಿಕೆ ಎನ್ನುವುದು 'ಹುಸಿ ಆಶ್ವಾಸನೆಗಳ ಕಂತೆ' ಎನ್ನುವ ಭಾವನೆ ಜನಸಾಮಾನ್ಯರಲ್ಲಿ ದಟ್ಟವಾಗಿದ್ದ ಸಂದರ್ಭದಲ್ಲಿಯೇ ಆ ಬಗ್ಗೆ ಅಗತ್ಯವಾಗಿ ಎಲ್ಲರೂ ಹೊಂದಬೇಕಾದ ಗಂಭೀರತೆಯನ್ನು ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಸಾಧಿಸಿ ತೋರಿಸಿದೆ.

ಸರ್ಕಾರವೊಂದು ಅಧಿಕಾರಕ್ಕೆ ಬಂದ ನೂರು ದಿನಗಳಲ್ಲಿಯೇ ದೇಶದ ರಾಜಕಾರಣದಲ್ಲಿ ಸಕಾರಾತ್ಮಕ ಚರ್ಚೆಯೊಂದರ ಹುಟ್ಟಿಗೆ ಕಾರಣವಾಗುತ್ತದೆ ಎನ್ನುವುದೇ ತನ್ನಷ್ಟಕ್ಕೆ ಒಂದು ದೊಡ್ಡ ಸಾಧನೆ. ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಚುನಾವಣೆಗೂ ಮುನ್ನ ನಾಡಿನ ಜನತೆಗೆ ನೀಡಿದ್ದ ಭರವಸೆಯಂತೆ, ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಯುವನಿಧಿ ಎನ್ನುವ 5 ಗ್ಯಾರಂಟಿ ಯೋಜನೆಗಳ ಜಾರಿಗೆ ಪ್ರಥಮ ಸಂಪುಟ ಸಭೆಯಲ್ಲಿಯೇ ತಾತ್ವಿಕ ಅನುಮೋದನೆ ನೀಡಿತು. ಆಗ ಈ ಕುರಿತು, "ಇದು ಕೇವಲ ತಾತ್ವಿಕ ಅನುಮೋದನೆಯಷ್ಟೇ, ಇದನ್ನು ಅನುಷ್ಠಾನಗೊಳಿಸಲು ಐದು ವರ್ಷ ಸಾಲದು" ಎನ್ನುವ ಕೊಂಕು ಮಾತು, ಸಿನಿಕತನ ರಾಜಕೀಯವಾಗಿ ಕೇಳಿ ಬಂದು ಸಾರ್ವಜನಿಕವಾಗಿಯೂ ಹಬ್ಬಿತ್ತು. ಆದರೆ, ಇದಕ್ಕೆಲ್ಲ ಮಾತಿನಲ್ಲಿ ಉತ್ತರ ನೀಡದೇ ತ್ವರಿತಗತಿಯಲ್ಲಿ ನಾಲ್ಕು ಯೋಜನೆಗಳನ್ನು ನೂರು ದಿನಗಳ ಅಲ್ಪ ಅವಧಿಯಲ್ಲಿಯೇ ಅನುಷ್ಠಾನಗೊಳಿಸುವ ಮೂಲಕ ತನ್ನ ಕೃತಿಯಿಂದ ರಾಜ್ಯ ಸರ್ಕಾರ ಉತ್ತರ ನೀಡಿದೆ. ಇದು ಇಡೀ ದೇಶವನ್ನೇ ಒಂದು ರೀತಿಯಲ್ಲಿ ಅಚ್ಚರಿಗೆ ಕಾರಣವಾಗಿದೆ.

ವರ್ಗಭೇದವಿಲ್ಲದೆ ನಾಡಿನ ಎಲ್ಲ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ನಾಡಿನೊಳಗೆ ಎಲ್ಲಿ ಬೇಕಾದರೂ ಸಂಚರಿಸಲು ನಿಗದಿತ ಸರ್ಕಾರಿ ಬಸ್‌ಗಳಲ್ಲಿ ಉಚಿತ ಸಾರಿಗೆಯ ಸೌಲಭ್ಯವನ್ನು ಶಕ್ತಿ ಯೋಜನೆ ಕಲ್ಪಿಸಿದೆ. ಅದೇ ರೀತಿ, ಇನ್ನೂರು ಯೂನಿಟ್ ಗಳವರೆಗೆ ಪ್ರತಿ ಮನೆಗೆ ಉಚಿತವಾಗಿ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆ, ಕುಟುಂಬದ ಯಜಮಾನಿಯರಿಗೆ ಮಾಸಿಕ ರೂ.



Downloaded From:www.kpscvaani.com




2000 ನೀಡುವ ಗೃಹಲಕ್ಷ್ಮಿ ಯೋಜನೆ ಹಾಗೂ ಬಿಪಿಎಲ್ ಕಾರ್ಡು ಹೊಂದಿರುವ ಪ್ರತಿ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ತಲಾ ಹತ್ತು ಕೆಜಿ ಅಕ್ಕಿ ವಿತರಣೆ ಮಾಡುವ ಅನ್ನಭಾಗ್ಯ ಯೋಜನೆಗಳನ್ನು ಸರ್ಕಾರ ಇದಾಗಲೇ ಜಾರಿಗೆ ತಂದಿದೆ. ಇದರಲ್ಲಿ ಅನ್ನಭಾಗ್ಯ ಯೋಜನೆಯಡಿ ನೀಡಲು ಅಕ್ಕಿಯ ಕೊರತೆ ಉದ್ಭವಿಸಿರುವುದರಿಂದ ಈ ಸಮಸ್ಯೆ ಪರಿಹಾರವಾಗುವವರೆಗೆ ನೀಡುತ್ತಿರುವ ಐದು ಕೆಜಿ ಅಕ್ಕಿಯ ಜೊತೆಗೆ, ಉಳಿದ ಐದು ಕೆಜಿ ಅಕ್ಕಿಗೆ ಪರ್ಯಾಯವಾಗಿ ಪ್ರತಿಯೊಬ್ಬ ಫಲಾನುಭವಿಗೂ ಐದು ಕೆಜಿ ಅಕ್ಕಿಗೆ ತತ್ಸಮಾನವಾಗಿ ರೂ.170 ಹಣವನ್ನು ಸರ್ಕಾರ ಪಾವತಿಸುತ್ತಿದೆ.

ಸರ್ಕಾರವೊಂದು ಸಮಾಜಮುಖಿಯಾಗಿ ಇಷ್ಟು ಕ್ಷಿಪ್ರ ಅವಧಿಯಲ್ಲಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಸಾಮಾಜಿಕ ರಕ್ಷಾ ಕವಚಗಳಂತಿರುವ ಈ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದು ದೇಶದಲ್ಲಿ ಮಾತ್ರವೇ ಅಲ್ಲದೆ ಜಾಗತಿಕವಾಗಿಯೂ ಜನಮನ್ನಣೆಗೆ ಕಾರಣವಾಗಿರುವುದು ಅತಿಶಯೋಕ್ತಿಯಲ್ಲ. ಈಗಾಗಲೇ ಅನುಷ್ಠಾನಗೊಂಡಿರುವ ನಾಲ್ಕು ಯೋಜನೆಗಳಡಿ ಬರುವ ಫಲಾನುಭವಿಗಳ ಬೃಹತ್ ಪ್ರಮಾಣವನ್ನು ಗಮನಿಸಿದಾಗ ಈ ಯೋಜನೆಗಳು ಹುಟ್ಟು ಹಾಕಿರುವ ಸಕಾರಾತ್ಮಕ ಚರ್ಚೆಗಳ ಮಹತ್ವ ತಿಳಿಯುತ್ತದೆ.

ರಾಷ್ಟ್ರ ರಾಜಕಾರಣದಲ್ಲಿ ಕಳೆದ ಕೆಲ ದಶಕಗಳಲ್ಲಿ ಮುಂಚೂಣಿಗೆ ಬಂದಿದ್ದ, ವಿಶೇಷವಾಗಿ ಕಳೆದೊಂದು ದಶಕದಲ್ಲಿ ವ್ಯಾಪಿಸಿಕೊಂಡಿದ್ದ ಕೋಮುವಾದ, ಮತೀಯ ದ್ವೇಷದ ರಾಜಕಾರಣವನ್ನು ಹಿನ್ನೆಲೆಗೆ ಸರಿಸಿ, ಸಮಾಜಿಕ–ಆರ್ಥಿಕ ಅಭಿವೃದ್ಧಿ ವಿಚಾರವನ್ನು ಮುನ್ನೆಲೆಗೆ ತರುವ ಮೂಲಕ ಕರ್ನಾಟಕ ಸರ್ಕಾರವು ಚುನಾವಣಾ ರಾಜಕಾರಣದಲ್ಲಿ ಮಹತ್ವದ ಪಲ್ಲಟಕ್ಕೆ ಕಾರಣವಾಗಿದೆ. ಮುಂಬರುವ ವಿವಿಧ ವಿಧಾನಸಭಾ ಚುನಾವಣೆಗಳು, ಲೋಕಸಭಾ ಚುನಾವಣೆಗಳ ರಾಜಕೀಯ ಪರಿಭಾಷೆಯ ಮೇಲೆ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಕಾರಾತ್ಮಕ ಪರಿಣಾಮವನ್ನು ಬೀರತೊಡಗಿವೆ. ಬರಲಿರುವ ದಿನಗಳಲ್ಲಿ ವಿಧಾನಸಭಾ ಚುನಾವಣೆಗಳಿಗೆ ಅಣಿಯಾಗುತ್ತಿರುವ ವಿವಿಧ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳು ಕೋಮು ರಾಜಕಾರಣದ ಪಟ್ಟುಗಳನ್ನು ಸಡಿಲಗೊಳಿಸಿ ಅಭಿವೃದ್ಧಿ ರಾಜಕಾರಣವನ್ನು, ವಿಶೇಷವಾಗಿ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ವಿಷಯಗಳತ್ತ ಗಮನಹರಿಸುತ್ತಿರುವುದು ಕಂಡುಬರುತ್ತಿದೆ. ಇದು ದೇಶದ ಭವಿಷ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯೇ ಸರಿ.

**ಬೆಲೆ ಏರಿಕೆ, ನಿರುದ್ಯೋಗ ಮತ್ತಿತರ ಸಮಸ್ಯೆಗಳ ಸರಮಾಲೆಯಿಂದ ತತ್ತರಿಸಿದ ನಾಡಿನ ಜನತೆಗೆ ನೇರವಾಗಿ ಹಣ ವರ್ಗಾವಣೆ ಮಾಡುವ Univarsal Basic Income ಎಂಬ ಹೊಸ ಪರಿಕಲ್ಪನೆಯಡಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಜನಸಾಮಾನ್ಯರ ಖರೀದಿಯ ಶಕ್ತಿ ಹೆಚ್ಚಾದರೆ ಆರ್ಥಿಕತೆಯು ಉತ್ತಮಗೊಳ್ಳುತ್ತದೆ. ಇದನ್ನು ಈಗಾಗಲೇ ಜಾರಿಗೊಂಡಿರುವ ಗ್ಯಾರಂಟಿ ಯೋಜನೆಗಳು ಸಾಬೀತುಪಡಿಸಿವೆ.**




ಕಳೆದ ಮೂರು ದಶಕದಲ್ಲಿ ದೇಶದಲ್ಲಿ ನವ ಉದಾರೀಕರಣ ಚಿಂತನೆಗಳು, ಬಂಡವಾಳಶಾಹಿ ಅರ್ಥ ವ್ಯವಸ್ಥೆಯ ಫಲವಾಗಿ ವಿಪುಲ ಸಂಪತ್ತು, ಉದ್ಯೋಗಾವಕಾಶಗಳೇನೋ ಸೃಷ್ಟಿಯಾಗಿವೆ. ಆದರೆ, ಇದೇ ವೇಳೆ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರವೂ ವ್ಯಾಪಕವಾಗಿ ಹೆಚ್ಚಳವಾಗಿದೆ. ಇದು ಭೌಗೋಳಿಕವಾಗಿ, ವರ್ಗಾಧಾರಿತವಾಗಿಯೂ ಪ್ರತಿಫಲನವಾಗಿದೆ. ಇಂದು ದೇಶದ ಆರ್ಥಿಕ ಬೆಳವಣಿಗೆಯು ಬೆರಳೆಣಿಕೆಯ ಮೆಟ್ರೋ ನಗರಗಳ ಆರ್ಥಿಕ ಚಟುವಟಿಕೆ, ಅಭಿವೃದ್ಧಿ ದರವನ್ನು ಆಧರಿಸಿದೆ. ಮೆಟ್ರೋ ನಗರಗಳನ್ನು ನವ ಆರ್ಥಿಕತೆಯ 'ಅಭಿವೃದ್ಧಿ ಎಂಜಿನ್‌ಗಳು' ಎನ್ನಲಾಗುತ್ತಿದೆ. ಆದರೆ, ಈ ಬೆಳವಣಿಗೆಯು ಭೌಗೋಳಿಕವಾಗಿ, ನಗರ ಕೇಂದ್ರಿತ ಹಾಗೂ ಗ್ರಾಮೀಣ ಕೇಂದ್ರಿತ ಅರ್ಥ ವ್ಯವಸ್ಥೆಯ ನಡುವೆ ವ್ಯಾಪಕ ಕಂದರ ನಿರ್ಮಾಣವಾಗಲು ಕಾರಣವಾಗಿದೆ. ಕೃಷಿ ಆಧಾರಿತ ಅರ್ಥ ವ್ಯವಸ್ಥೆಯೇ ಪ್ರಧಾನವಾದ ಗ್ರಾಮೀಣ ಭಾರತವು ಹಿಂದೆಂದೂ ಕಾಣದ ರೀತಿಯಲ್ಲಿ ತನ್ನ



Downloaded From:www.kpscvaani.com

ಮಾನವ ಸಂಪನ್ಮೂಲವು ನಗರಗಳೆಡೆಗೆ ವಲಸೆ ಹೋಗುತ್ತಿರುವುದನ್ನು ಕಾಣುತ್ತಿದೆ.

ಆದರೆ, ಈ ವಲಸೆ ಬಹುತೇಕ ಗ್ರಾಮೀಣ ಕುಟುಂಬಗಳ ಪಾಲಿಗೆ, ವಿಶೇಷವಾಗಿ ಶ್ರಮದ ದುಡಿಮೆಯನ್ನೇ ನೆಚ್ಚಿಕೊಂಡಿರುವ ಕುಟುಂಬಗಳ ಪಾಲಿಗೆ ಹಿತಕರವಾಗಿಯೇನೂ ಇಲ್ಲ. ನಗರಗಳು ಈ ಕುಟುಂಬಗಳಿಗೆ ಉದ್ಯೋಗಾವಕಾಶಗಳನ್ನೇನೋ ನೀಡುತ್ತಿವೆ. ಆದರೆ ಅವರ ಸುಸ್ಥಿರ ಬದುಕಿಗೆ ದಾರಿಯಾಗುತ್ತಿಲ್ಲ. ಗ್ರಾಮೀಣ ಮತ್ತು ನಗರಗಳ ನಡುವೆ ಜೀವನ ನಿರ್ವಹಣಾ ವೆಚ್ಚದಲ್ಲಿ ಇರುವ ಅಪಾರ ಅಂತರದಿಂದಾಗಿ ಈ ಶ್ರಮಿಕ ವರ್ಗಗಳ ದುಡಿಮೆಯ ಬಹುಪಾಲನ್ನು ನಗರಗಳು ತಿಂದು ಹಾಕುತ್ತಿವೆ. ಅಷ್ಟೇ ಅಲ್ಲ, ನಗರಗಳೆಡೆಗೆ ನಡೆಯುತ್ತಿರುವ ಈ ವಲಸೆಯ ವ್ಯಂಗ್ಯ ಹೇಗಿದೆಯೆಂದರೆ ಹಳ್ಳಿಗಾಡಿನ ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ದೊರೆಯುತ್ತಿದ್ದ ಉತ್ತಮ ಶಿಕ್ಷಣದಿಂದ ನಗರಪ್ರದೇಶಗಳಿಗೆ ವಲಸೆ ಬಂದ ಸಂದರ್ಭದಲ್ಲಿ ಈ ವಲಸೆ ಕುಟುಂಬಗಳ ಮಕ್ಕಳು ವಂಚಿತರಾಗುತ್ತಿದ್ದಾರೆ. ಅದರ ಬದಲಿಗೆ, ನಗರದ ಸಾಮಾಜಿಕ ಪ್ರತಿಷ್ಠೆಯನ್ನು ಅಳವಡಿಸಿಕೊಳ್ಳುವ ಭರದಲ್ಲಿ ದುಡ್ಡುತೆತ್ತು ಅರ್ಹ ಅಧ್ಯಾಪಕರು, ಸೂಕ್ತ ಮೂಲಸೌಕರ್ಯಗಳಿಲ್ಲದ ಖಾಸಗಿ ಶಾಲೆಗಳಲ್ಲಿ ಕಳಪೆ ಶಿಕ್ಷಣಕ್ಕೆ ತಮ್ಮ ಮಕ್ಕಳನ್ನು ಈ ಕುಟುಂಬಗಳು ಅರ್ಪಿಸುತ್ತಿವೆ. ಇದು ಮತ್ತೊಂದು ಸುತ್ತಿನ ಸಾಮಾಜಿಕ, ಶೈಕ್ಷಣಿಕ ಕಂದರಕ್ಕೆ ಆಸ್ಪದವೀಯುತ್ತಿದೆ. ಅದೇ ರೀತಿ, ಶ್ರಮದ ಉದ್ಯೋಗಗಳನ್ನರಸಿ ಬರುವ ಕೌಶಲ್ಯರಹಿತ ದುಡಿಮೆಯ ಈ ಕೈಗಳು ನಗರಗಳಲ್ಲಿ ದಿನ ಕಳೆದಂತೆ ಸೋಲತೊಡಗುತ್ತವೆ. ಕೌಶಲ್ಯವಿಲ್ಲದೆ, ಕೇವಲ ದೈಹಿಕ ಬಲವನ್ನೇ ನಂಬಿಕೊಂಡ ಪರಿಣಾಮ ಅದರಿಂದ ದೊರೆಯುವ ದುಡಿಮೆಯಿಂದ ಕುಟುಂಬದ ಖರ್ಚುವೆಚ್ಚವನ್ನು ಸರಿದೂಗಿಸಲಾಗದೆ ಅಸಹಾಯವಾಗತೊಡಗುತ್ತವೆ.

ಈ ಸಮಸ್ಯೆಗಳ ಮೂಲವನ್ನು ಗಮನಿಸಿದರೆ, ಗ್ರಾಮೀಣ ಭಾಗದಿಂದ ಉದ್ಯೋಗಗಳ ಕಾರಣಕ್ಕೆ ಉಂಟಾಗುವ ವಲಸೆ, ವಿಶೇಷವಾಗಿ ಕೌಶಲರಹಿತ ಕಾರ್ಮಿಕರ ವಲಸೆ ತಂದೊಡ್ಡುವ ಸಮಸ್ಯೆಗಳು ಕಾಣುತ್ತವೆ. ಇಂತಹದ್ದನ್ನು ಪರಿಹರಿಸಲು ಇರುವ ದಾರಿಯೆಂದರೆ,

**ಆಗಸ್ಟ್ ಅಂತ್ಯದವರೆಗೆ ಗ್ಯಾರಂಟಿ ಯೋಜನೆಯ ಪ್ರಗತಿ ವಿವರ:**

- ಶಕ್ತಿ ಯೋಜನೆಯಡಿ 38.54 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಿದ್ದಾರೆ.
- ಆಗಸ್ಟ್ 1 ರ ಬಿಲ್‌ನಿಂದ ಗ್ರಾಹಕರಿಗೆ ಗೃಹಜ್ಯೋತಿ ಸೌಲಭ್ಯ ದೊರೆಯುತ್ತಿದ್ದು, ಸುಮಾರು 2 ಕೋಟಿ ಗ್ರಾಹಕರಿಗೆ ಈ ಯೋಜನೆಯಿಂದ ಅನುಕೂಲವಾಗಲಿದ್ದು, ಇದುವರೆವಿಗೆ 1.49 ಕೋಟಿ ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ.
- ಅನ್ನಭಾಗ್ಯ ಯೋಜನೆಯಡಿ 1.04 ಕೋಟಿ ಕುಟುಂಬಗಳ 3.70 ಕೋಟಿ ಸದಸ್ಯರಿಗೆ ಐದು ಕೆ.ಜಿ ಅಕ್ಕಿ ಬದಲಿಗೆ ತಲಾ 170 ರೂಗಳಂತೆ 606 ಕೋಟಿ ರೂ. ಗಳನ್ನು ನೇರ ನಗದು ವ್ಯವಸ್ಥೆಯ ಮೂಲಕ ವರ್ಗಾವಣೆ ಮಾಡಲಾಗಿದೆ.
- ಗೃಹಲಕ್ಷ್ಮಿ ಯೋಜನೆಗೆ 1.08 ಕೋಟಿ ಕುಟುಂಬಗಳ ಯಜಮಾನಿಯರು ನೋಂದಾಯಿಸಿಕೊಂಡಿದ್ದು, ಆಗಸ್ಟ್ 30 ರಿಂದ ಅಷ್ಟೂ ಜನರಿಗೆ ಏಕಕಾಲದಲ್ಲಿ ತಲಾ 2000 ರೂ. ಜಮೆ ಆಗಿದೆ.

ಶ್ರಮವನ್ನೇ ನಂಬಿಕೊಂಡಿರುವ ಈ ವರ್ಗಗಳಿಗೆ ಅವು ಮೂಲತಃ ವಾಸವಾಗಿರುವ ಸ್ಥಳಗಳಲ್ಲಿಯೇ ಸುಸ್ಥಿರ ಬದುಕಿಗೆ ಅಗತ್ಯವಾದ ಆಧಾರಗಳನ್ನು ಒದಗಿಸುವುದು. ಗ್ಯಾರಂಟಿ ಯೋಜನೆಗಳ ಭಾಗವಾಗಿರುವ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯದಂತಹ ಯೋಜನೆಗಳು, ಗ್ರಾಮೀಣ ಉದ್ಯೋಗ ಖಾತರಿಯಂತಹ ಯೋಜನೆಗಳು ಈ ಕಾರ್ಯವನ್ನು ಸಮರ್ಥವಾಗಿ ಮಾಡಬಲ್ಲವಾಗಿವೆ.

ಹೀಗೆ ಗ್ರಾಮೀಣ ಪ್ರದೇಶಗಳಲ್ಲಿ ಸುಸ್ಥಿರ ಬದುಕಿಗೆ ನೆರವಾಗುವ ಸಾಮರ್ಥ್ಯವಿರುವ ಈ ಯೋಜನೆಗಳು ನಗರ ಪ್ರದೇಶಗಳ ಕೆಳವರ್ಗಗಳ ಬದುಕಿನಲ್ಲಿಯೂ ಸಹ ಸ್ಥಿರತೆಯನ್ನು ಒದಗಿಸಿಕೊಡಲಿವೆ. ಇಂದು ಬೆಂಗಳೂರಿನಂತಹ ಮೆಟ್ರೋ ನಗರವೇ ಇರಲಿ, ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿಗಳಂತಹ ತ್ವರಿತಗತಿಯ ಬೆಳವಣಿಗೆ ಕಾಣುತ್ತಿರುವ ನಗರಗಳೇ ಆಗಲಿ ಇಲ್ಲೆಲ್ಲಾ, ಮಧ್ಯಮ ಹಾಗೂ ಕೆಳ ವರ್ಗಗಳು ಸದಾಕಾಲ ಜೀವನಶೈಲಿ ಹಾಗೂ ಬೆಲೆ ಏರಿಕೆ ನಡುವೆ ಅಡಕತ್ತರಿಯಲ್ಲಿ ಸಿಲುಕಿ ತತ್ತರಿಸುತ್ತಿರುತ್ತವೆ. ವಾರ್ಷಿಕ ಆದಾಯ ರೂ. 3 ಲಕ್ಷ ಹಾಗೂ ಅದಕ್ಕಿಂತ ಕೆಳಗಿರುವ ಈ ಕುಟುಂಬಗಳ ಪಾಲಿಗೆ ಅದನ್ನು ಮೀರಿ ಗಳಿಸುವ ಅಥವಾ ಅದರಲ್ಲಿಯೇ ಉಳಿಸುವ ಪ್ರತಿಯೊಂದು ರೂಪಾಯಿ ಹಣವೂ ಬಹುಮುಖ್ಯವಾಗುತ್ತದೆ. ಭವಿಷ್ಯದ ಹೊಂಗನಸಿಗೆ, ಕೌಟುಂಬಿಕ ಭದ್ರತೆಗೆ ಆಸರೆಯಾಗುತ್ತದೆ. ಗ್ಯಾರಂಟಿ ಯೋಜನೆಗಳ ಫಲವಾಗಿ ಇಂದು ಇಂತಹ ಪ್ರತಿಯೊಂದು ಕುಟುಂಬದಲ್ಲಿಯೂ ಮಾಸಿಕ 3–4 ಸಾವಿರ ರೂ ಹಣ ಉಳಿತಾಯವಾಗುತ್ತಿದೆ. ಇದಕ್ಕಿಂತಲೂ ಕೆಳಗಿನ ಆದಾಯವಿರುವ ಬಡತನ ರೇಖೆಗಿಂತ ಕೆಳಗಿರುವ ಕಟುಂಬಗಳಿಗಂತೂ ಗೃಹಜ್ಯೋತಿ, ಶಕ್ತಿ ಯೋಜನೆಗಳ ಪ್ರಯೋಜನ ಮಾತ್ರವೇ ಅಲ್ಲದೆ, ಗೃಹಲಕ್ಷ್ಮಿ, ಅನ್ನಭಾಗ್ಯದಂತಹ ಯೋಜನೆಗಳ ಲಾಭವೂ ದೊರೆಯುತ್ತಿದ್ದು ಮಾಸಿಕ 4–5 ಸಾವಿರ ರೂಪಾಯಿ ಹಣದ ಪೂರಕ ಬೆಂಬಲ ದೊರೆಯುತ್ತಿದೆ. ಇದು ಈ ವರ್ಗಗಳ ಬದುಕಿನಲ್ಲಿ ಗಣನೀಯ ಸುಧಾರಣೆಗೆ ಕಾರಣವಾಗುತ್ತಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲವಾಗಿ ಉಂಟಾಗುತ್ತಿರುವ ಉಳಿಕೆ, ಗಳಿಕೆಗಳೆರಡೂ ಈ ವರ್ಗಗಳಿಗೆ ಸಾಮಾಜಿಕ ಭದ್ರತೆಯನ್ನು, ಸುಸ್ಥಿರತೆಯನ್ನು ತಂದುಕೊಡುವಲ್ಲಿ ಸಫಲವಾಗಿವೆ. ಇದರ ಪರಿಣಾಮ ಉತ್ತಮ ಶಿಕ್ಷಣ, ಆರೋಗ್ಯ ಸೇವೆಗಳನ್ನು ಪಡೆಯಲು, ವಿವಿಧ ಕೌಟುಂಬಿಕ ಜವಾಬ್ದಾರಿಗಳನ್ನು ನಿಭಾಯಿಸಲು ಈ ವರ್ಗಗಳಿಗೆ ಸಾಧ್ಯವಾಗುತ್ತಿದೆ.

ಮೇಲಿನ ಈ ಅಂಶಗಳನ್ನು ಗಮನಿಸಿದರೆ ಗ್ಯಾರಂಟಿ ಯೋಜನೆಗಳು ದೇಶದ ಮುಂದೆ ಮಾನವಿಕ ಅಭಿವೃದ್ಧಿ ಕೇಂದ್ರಿತವಾದ ಹೊಸದೊಂದು ಅಭಿವೃದ್ಧಿ ಮಾದರಿಯನ್ನು ಇರಿಸಿವೆ. ಭವಿಷ್ಯದಲ್ಲಿ ಸಮಾಜದಲ್ಲಿರುವ ಆರ್ಥಿಕ ಕಂದರವನ್ನು ತಗ್ಗಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾಣಿಸತೊಡಗಿವೆ. ■



Downloaded From:www.kpscvaani.com



# ದೈತ್ಯನ ಅರಿಯಲು ಇನ್ನೊಬ್ಬ ಆದಿತ್ಯ

**ಸೂರ್ಯನ ಅಧ್ಯಯನಕ್ಕಾಗಿ ಬಾಹ್ಯಾಕಾಶಕ್ಕೆ ಆದಿತ್ಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ.**

ಗುರುರಾಜ್ ಎಸ್ ದಾವಣಗೆರೆ

ಗ್ರಹಣವಿರಲಿ, ಇಲ್ಲದಿರಲಿ ಸೌರಮಂಡಲದ ಯಜಮಾನನಾದ ಸೂರ್ಯನನ್ನು ಹತ್ತಿರದಿಂದ ಬರಿ ಕಣ್ಣಿನಿಂದ ಬಹಳ ಹೊತ್ತು ಗಮನಿಸುವುದಾಗಲೀ, ಛಾಯಾ ಚಿತ್ರ ತೆಗೆಯುವುದಾಗಲೀ, ಯಾವುದೇ ಗಗನ ನೌಕೆ ಬಳಸಿ ತೀರಾ ಹತ್ತಿರ ಸುಳಿಯುವುದಾಗಲೀ ಆಗದ ಮಾತು. ಆದರೆ ಸೂರ್ಯನ ವಾತಾವರಣದ ಸಮಗ್ರ ಅಧ್ಯಯನಕ್ಕೆಂದೇ ನಮ್ಮ ಹೆಮ್ಮೆಯ ಇಸ್ರೋ ಪ್ರಾರಂಭಿಸಿರುವ ಆದಿತ್ಯ-ಎಲ್ 1 ( ADITYA - L1) ಎಂಬ ಮಹಾತ್ವಾಕಾಂಕ್ಷಿ ಯೋಜನೆಯಿಂದಾಗಿ ಸೂರ್ಯನನ್ನು ಇಪ್ಪತ್ತನಾಲ್ಕು ಗಂಟೆಯೂ ಹತ್ತಿರದಿಂದ ನೋಡುವುದು, ಸೂರ್ಯನ ಕೊರೋನಾ, ಅಯಸ್ಕಾಂತೀಯ ಗುಣ, ಚಿಮ್ಮುವ ಜ್ವಾಲಾ ಬುಗ್ಗೆ, ಬೀಸಿಬರುವ ಸೌರಮಾರುತ, ಭೂಮಿಯ ಕಡೆಗೆ ಚಿಮ್ಮುವ ಸೌರ ಬಿರುಗಾಳಿಗಳ ತೀವ್ರತೆಗಳನ್ನು ವಿವಿಧ ತರಂಗಾಂತರಗಳಲ್ಲಿ ವಿವರವಾಗಿ ಅಭ್ಯಸಿಸುವುದು ಸಾಧ್ಯವಾಗಲಿದೆ.

**ಸೂರ್ಯಾಧ್ಯಯನ ಏಕೆ ಮುಖ್ಯ ?**

ಬಾಯಲ್ಲಿ ಪೆಟ್ರೋಲ್ ತುಂಬಿಕೊಂಡು ಪುರ್ ಅಂತ ಮೇಲಕ್ಕೆ ಉಗುಳಿ ಅದಕ್ಕೆ ಬೆಂಕಿ ತಗುಲಿಸಿ ಭುಗ್ಗೆಂದು ಜ್ವಾಲೆ ಹೊಮ್ಮಿಸುವವರನ್ನು ನಾವು ನೋಡಿರುತ್ತೇವೆ. ಹಾಗೆಯೇ ಸೂರ್ಯನೂ ಆಗಾಗ ಜ್ವಾಲೆಯನ್ನು ಕಕ್ಕುತ್ತಾನೆ. ಇದನ್ನು ಸೋಲಾರ್ ಸೈಕಲ್ ಎನ್ನುತ್ತೇವೆ. ಹನ್ನೊಂದು ವರ್ಷಗಳಿಗೊಮ್ಮೆ ಸೂರ್ಯ ರೊಚ್ಚಿಗೇಳುತ್ತಾನೆ. ಆಗ ಅತಿ ಶಕ್ತಿಶಾಲಿ ಪ್ರೋಟಾನ್ ಪ್ರವಾಹ ಹೊಮ್ಮುತ್ತದೆ. ಅದಕ್ಕೆ ಕಾಂತಶಕ್ತಿಯೂ ಹೆಚ್ಚೇ ಇರುತ್ತದೆ. ಚಂಡಮಾರುತದಂತೆ ಚಿಮ್ಮಿ ಬರುವ ಜ್ವಾಲಾ ಬುಗ್ಗೆಗಳನ್ನು ಸೋಲಾರ್ ಫ್ಲೇರ್ ಎನ್ನುತ್ತಾರೆ. ಈ ಬುಗ್ಗೆ ಸೂರ್ಯನಿಂದ ಚಿಮ್ಮಿ ಯಾವ ದಿಕ್ಕಿಗಾದರೂ ಸಾಗಿ ಹೋಗಿ ಅಲ್ಲಿನ ಆಕಾಶ ಕಾಯಗಳ ಮೇಲೆ ಅಪ್ಪಳಿಸಬಹುದು. ಭೂಮಿಗೂ ಬೀಸಿ ಬರಬಹುದು. ಭೂಮಿಗೆ ರಕ್ಷಾ ಕವಚವಿರುವುದರಿಂದ ಜೀವಿಗಳಿಗೆ ಏನೂ ಆಗದು. ಆದರೆ ಭೂಮಿಗೆ ಹೊದೆಸಿದಂತಿರುವ ಕಾಂತಶಕ್ತಿ ಏರುಪೇರಾಗಬಹುದು. ಭೂಮಿಯ ಹಗಲಿನ ಭಾಗದಲ್ಲಿರುವ ವಿದ್ಯುತ್ ಗ್ರಿಡ್‌ಗಳು ಕುಸಿಯಬಹುದು. ಇಲೆಕ್ಟ್ರಿಕ್ ವಸ್ತುಗಳು ಹಾಳಾಗಬಹುದು. ಇರುಳಿನ ಭಾಗದ ಪ್ರದೇಶಗಳಿಗೆ ತಾತ್ಕಾಲಿಕ ರಕ್ಷಣೆ ಇರುತ್ತದೆ. ಭೂಮಿಯನ್ನು ಸುತ್ತುತ್ತಿರುವ



Downloaded From:www.kpscvaani.com

ಉಪಗ್ರಹಗಳು ನಾಶವಾಗಬಹುದು. ಜಿಪಿಎಸ್ ವ್ಯವಸ್ಥೆ ಏರುಪೇರಾಗಬಹುದು. 1859 ಮತ್ತು 1921 ರಲ್ಲಿ ಸೂರ್ಯನಿಂದ ಬೀಸಿಬಂದ ಸೌರ ಮಾರುತದ ಶಕ್ತಿ ಅದೆಷ್ಟಿತ್ತೆಂದರೆ ಅಮೆರಿಕ ಕೆನಡಾಗಳಲ್ಲಿ ಟೆಲಿಗ್ರಾಫ್ ಕಛೇರಿಗಳು ಹೊತ್ತಿ ಉರಿದಿದ್ದವು.

**ಸೂರ್ಯ ಪ್ರತಾಪ**

ಸೂರ್ಯನ ಪ್ರಭೆ ಮತ್ತು ಶಾಖ ಸದಾಕಾಲ ಒಂದೇ ರೀತಿ ಇರುವುದಿಲ್ಲ. ಸೂರ್ಯನೊಳಗಿನ ವಾತಾವರಣದ ಬದಲಾವಣೆಯಿಂದ ಸೌರವ್ಯೂಹದ ಅನೇಕ ಚಟುವಟಿಕೆಗಳಲ್ಲಿ ಏರಿಳಿತ ಕಂಡು ಬರುತ್ತದೆ. ಭೂಮಿಗೊಂದು ವಾತಾವರಣವಿದ್ದಂತೆ ಸೂರ್ಯನ ನಿಯಂತ್ರಣದಲ್ಲಿರುವ 'ಬಾಹ್ಯಾಕಾಶ'ಕ್ಕೂ ತನ್ನದೇ ಆದ ವಾತಾವರಣವಿದೆ. ಸೂರ್ಯ ತನ್ನ ವಿಕಿರಣ ಮತ್ತು ಬೆಳಕನ್ನು ನಮಗೆ ಗೊತ್ತಿರುವ ಎಲ್ಲ ತರಂಗಾಂತರಗಳಲ್ಲಿ ಹೊಮ್ಮಿಸುತ್ತಲೇ ಇರುತ್ತಾನೆ. ಹಲವು ಕಣ ಪ್ರವಾಹಗಳು ಭೂಮಿಯ ಕಡೆ ನಿರಂತರವಾಗಿ ಹರಿಯುತ್ತವೆ. ಕಾಂತ ಶಕ್ತಿಯೂ ಧುಮ್ಮಿಕ್ಕಿ ನುಗ್ಗುತ್ತದೆ. ಭೂಮಿಯನ್ನು ಆವರಿಸಿರುವ ವಾತಾವರಣವು ಭೂಮಿಗೆ ಇವು ಅಪ್ಪಳಿಸುವುದನ್ನು ತಡೆಯುತ್ತದೆ. ಭೂಮಿಗೆ ತಲುಪದಿರುವ ಇವುಗಳ ಅಧ್ಯಯನ ಸರಿಯಾಗಿ ಆಗಿಲ್ಲ. ಭೂಮಿಯ ಮೇಲಿರುವ ಉಪಕರಣಗಳಿಂದ ಅದು ಸಾಧ್ಯವೂ ಇಲ್ಲ. ಭೂಮಿಯ ಗುರುತ್ವಾಕರ್ಷಣೆಯಿಂದ ದೂರವಿರುವ ಬಾಹ್ಯಾಕಾಶದಿಂದ ಮಾತ್ರ ಇವುಗಳನ್ನು ಸರಿಯಾಗಿ ಅಭ್ಯಸಿಸಬಹುದು. ಆದ್ದರಿಂದ ಭೂಮಿಯಿಂದ ಹದಿನೈದು ಲಕ್ಷ ಕಿಲೋಮೀಟರುಗಳಷ್ಟು ದೂರದಲ್ಲಿ ನಿಂತು



ಸೂರ್ಯನನ್ನು ದಿಟ್ಟಿಸಿ ನೋಡುತ್ತಾ ಅಧ್ಯಯನ ಮಾಡಲೆಂದೇ ಆದಿತ್ಯ ಎಲ್ 1 ಯೋಜನೆ ಯಶಸ್ವಿಯಾಗಿ ಪ್ರಾರಂಭವಾಗಿದೆ.

ಚಂದ್ರಯಾನ – 3 ರ ಯಶಸ್ಸಿನ ಬೆನ್ನಲ್ಲೇ ನಮ್ಮ ಹೆಮ್ಮೆಯ ಇಸ್ರೋ ಈಗ ಸೂರ್ಯನತ್ತ ಮುಖ ಮಾಡಿದೆ. 1500 ಕಿಲೋ ಗ್ರಾಂ ತೂಕದ ಸೂರ್ಯ ವೀಕ್ಷಣಾಲಯ ಆದಿತ್ಯ ಎಲ್ 1 1, ಪಿಎಸ್‌ಎಲ್‌ವಿ– ಎಕ್ಸ್‌ಟ್ರಾಲಾರ್ಜ್ ರಾಕೆಟ್‌ನಲ್ಲಿ ಕೂತು ಭೂಮಿಯಿಂದ ಹದಿನೈದು ಲಕ್ಷ ಕಿ.ಮೀ ದೂರದಲ್ಲಿರುವ ಜಾಗಕ್ಕೆ (ಲಗ್ರಾಂಜಿಯನ್ ಬಿಂದು 1) ನೂರಿಪ್ಪತ್ತು ದಿನಗಳ ಪಯಣವನ್ನು ಈಗಾಗಲೇ ಪ್ರಾರಂಭಿಸಿದೆ. ಅಲ್ಲಿಗೆ ತಲುಪಿದ ಮೇಲೆ ಸೂರ್ಯನ ಎದುರಿಗೆ ಕೆಳ ಎತ್ತರದ ಕಕ್ಷೆ (ಹ್ಯಾಲೊ ಆರ್ಬಿಟ್) ಯಲ್ಲಿ ಸುಮಾರು 5 ವರ್ಷ ಸುತ್ತುವ ಆದಿತ್ಯ ಭೂಮಿಗೆ ಸಮೀಪದ ಬಾಹ್ಯಾಕಾಶದ ವಾಯುಗುಣ, ಕೊರೋನಾದಿಂದ ಚಿಮ್ಮಿ ಬರುವ ಜ್ವಾಲಾ ಬುಗ್ಗೆಗಳ ಉಗಮದ ಬಗ್ಗೆ ಖಚಿತ ಮಾಹಿತಿ ನೀಡಲಿದೆ.



**ಆದಿತ್ಯನ ತಂಗುದಾಣ ಲಗ್ರಾಂಜಿಯನ್ ಬಿಂದು**

ಬಾಹ್ಯಾಕಾಶದಲ್ಲಿ ಸೂರ್ಯ ಮತ್ತು ಭೂಮಿಯ ನಡುವೆ ಸಮತಲದಲ್ಲಿ ನಿಂತು ಸೂರ್ಯನನ್ನು ನೋಡಲು ಇರುವ ಅನುಕೂಲಕರ ಬಿಂದುಗಳನ್ನು ಲಗ್ರಾಂಜಿಯನ್ ಬಿಂದು ಎನ್ನುತ್ತಾರೆ. ಬಾಹ್ಯಾಕಾಶದಲ್ಲಿ ಎಲ್–1 ನಿಂದ ಹಿಡಿದು ಎಲ್–5 ವರೆಗೆ ಒಟ್ಟು ಐದು ಲಗ್ರಾಂಜಿಯನ್ ಪಾಯಿಂಟ್‌ಗಳಿವೆ. ಎಲ್ – 1, ಎಲ್ –2 ಮತ್ತು ಎಲ್ – 3 ಒಂದೇ ಸರಳರೇಖೆಯಲ್ಲಿವೆ. ಇವುಗಳಲ್ಲಿ ಎಲ್ – 1 ಭೂಮಿ ಮತ್ತು ಸೂರ್ಯನ ನಡುವೆ ಒಂದೇ ಸರಳರೇಖೆಯಲ್ಲಿದೆ. ಲಗ್ರಾಂಜಿಯನ್ ಬಿಂದುವಿನಲ್ಲಿ ಸೂರ್ಯ ಮತ್ತು ಭೂಮಿಯ ಗುರುತ್ವಾಕರ್ಷಣ ಬಲಗಳು ಅಲ್ಲಿಗೆ ತೆರಳುವ ಯಾವುದೇ ಉಪಗ್ರಹ ಅಥವಾ ಸಣ್ಣ ನೌಕೆಯನ್ನು ಸಮತೋಲನದಲ್ಲಿರಿಸುತ್ತವೆ. ಎರಡೂ ಬೃಹತ್ ಆಕಾಶಕಾಯಗಳ ಗುರುತ್ವ ಶಕ್ತಿಗಳಿಂದ ಉತ್ಪತ್ತಿಯಾಗುವ ಸಂಘಟಿತ (resultant) ಬಲವು ಅಲ್ಲಿನ ಯಾವುದೇ ವಾಸ್ತವನ್ನು ಕಡಿಮೆ ಎತ್ತರದ ಕಕ್ಷೆಯಲ್ಲಿ ಸುತ್ತುವಂತೆ ಮಾಡುತ್ತದೆ. ಇಲ್ಲಿ ವೀಕ್ಷಣಾಸಾಧನ ನಿಲ್ಲಿಸಿದರೆ ಇಂಧನದ ಬಳಕೆ ಕಡಿಮೆ ಇರುತ್ತದೆ. ಸದ್ಯಕ್ಕೆ ಲಗ್ರಾಂಜಿಯನ್ ಬಿಂದು –2 ರಲ್ಲಿ ಜೇಮ್ಸ್ ವೆಬ್ ಟೆಲಿಸ್ಕೋಪ್ ಠಿಕಾಣಿ ಹೂಡಿದೆ.

**ಆದಿತ್ಯನ ಒಡಲಲ್ಲಿ ಏನೇನಿದೆ?**

ಸೂರ್ಯಾಧ್ಯಯನದ ಭಾರತದ ಪ್ರಥಮ ಬಾಹ್ಯಾಕಾಶ ಯೋಜನೆ ಆದಿತ್ಯ ಎಲ್–1 ವೀಕ್ಷಣಾಲಯದಲ್ಲಿ ಏಳು ಪೇಲೋಡ್ (ಸಂಶೋಧನಾ ಸಾಧನ)ಗಳಿವೆ. ನಾಲ್ಕು ನೇರವಾಗಿ ಸೂರ್ಯನನ್ನು ದಿಟ್ಟಿಸಿದರೆ ಉಳಿದವು ಲಗ್ರಾಂಜಿಯನ್ ಬಿಂದುವಿನತ್ತ



Downloaded From:www.kpscvaani.com

ಸೂರ್ಯನಿಂದ ಹರಿದು ಬರುವ ಕಣ ಮತ್ತು ಕ್ಷೇತ್ರಗಳನ್ನು ಆಯಾಕ್ಷಣ (In-situ) ದಲ್ಲೇ ಅಭ್ಯಸಿಸಿ ವರದಿ ನೀಡುತ್ತವೆ. ಸೂರ್ಯನ ಕೊರೋನಾ ವೀಕ್ಷಿಸಲು ವಿಸಿಬಲ್ ಎಮಿಶನ್ ಲೈನ್ ಕೊರೋನಾಗ್ರಾಫ್' ಸೂರ್ಯನ ಕಾಂತಶಕ್ತಿಯನ್ನಳೆಯಲು ಶಕ್ತಿಶಾಲಿ ಮ್ಯಾಗ್ನೆಟೊಮೀಟರ್, ಪ್ರಖರ ಪ್ರತಿಫಲನ ನೀಡುವ ವಿಶಾಲ ಕನ್ನಡಿಗಳ ಶಕ್ತಿಶಾಲಿ ಟೆಲಿಸ್ಕೋಪ್, ಪ್ಲಾಸ್ಮಾ ಅಧ್ಯಯನ ಸಾಧನ, ಎಕ್ಸರೇ ಸ್ಪೆಕ್ಟ್ರೋಮೀಟರ್‌ಗಳು ಕೊರೋನಾ, ಬಿಸಿ ಮಾರುತ ಮತ್ತು ಜ್ವಾಲೆಗಳ ಸ್ಪಷ್ಟ ವಿವರಗಳನ್ನು ಭೂಮಿಗೆ ರವಾನಿಸಲಿವೆ. ಇಲ್ಲಿಯವರೆಗೆ ಸಂಪೂರ್ಣ ಸೂರ್ಯಗ್ರಹಣದ ಕಾಲದಲ್ಲಿ ಮಾತ್ರ ಕೊರೋನಾದ ಅಧ್ಯಯನ ಸಾಧ್ಯವಿತ್ತು. ಈಗ ಆದಿತ್ಯನಲ್ಲಿರುವ ಕೊರೋನಾಗ್ರಾಫ್ ಬಳಸಿ ಕೃತಕ ಸಂಪೂರ್ಣ ಸೂರ್ಯ ಗ್ರಹಣ ಉಂಟು ಮಾಡಿ ಕೊರೋನಾವನ್ನು ಇನ್ನಷ್ಟು ಸ್ಪಷ್ಟವಾಗಿ ಅರಿಯಬಹುದು ಎನ್ನುತ್ತಾರೆ ನೈನಿತಾಲ್‌ನ ಆರ್ಯಭಟ ಸಂಶೋಧನಾ ಕೇಂದ್ರದ ವಿಜ್ಞಾನಿ ದೀಪಂಕರ್ ಬ್ಯಾನರ್ಜಿ. ಬೇಕಾದ ಸಲಕರಣೆ ಮತ್ತು ತಂತ್ರಜ್ಞಾನಗಳನ್ನು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಮತ್ತು ಪುಣೆಯ ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರೊನಮಿ ಅಂಡ್ ಆಸ್ಟ್ರೋಫಿಸಿಕ್ಸ್ ಸಂಸ್ಥೆಗಳ ನಮ್ಮ ವಿಜ್ಞಾನಿಗಳೇ ಒದಗಿಸಿದ್ದಾರೆ.

**ಆದಿತ್ಯನ ಪೂರ್ವಜರು**

ಆದಿತ್ಯ ಹೋಗುವ ಜಾಗಕ್ಕೆ ಈಗಾಗಲೇ ತೆರಳಿರುವ ಅಮೆರಿಕ ಮತ್ತು ಜರ್ಮನಿ ಅನೇಕ ಮಹತ್ವದ ಸೌರ ಯೋಜನೆಗಳನ್ನು ಕಾರ್ಯರೂಪಗೊಳಿಸಿವೆ. ಭೂಮಿ ಮತ್ತು ಸೂರ್ಯನ ನಡುವಿನ ಸರಾಸರಿ ದೂರ 14 ಕೋಟಿ ಕಿ.ಮೀ.ಗಳು. ನಾಸಾದ 'ಪಾರ್ಕರ್ ಸೋಲಾರ್ ಪ್ರೋಬ್ ಮಿಶನ್' 2021 ರ ಏಪ್ರಿಲ್ 25 ರಂದು ಸೂರ್ಯನ ಬಳಿ ಹೋಗುವ ತನ್ನ ಎಂಟನೇ ಪ್ರಯತ್ನದಲ್ಲಿ ಅತಿ ಸಮೀಪ ಅಂದರೆ 1.86 ಕೋಟಿ ಕಿ.ಮೀ. ಹತ್ತಿರ ಹೋಗಿ ಬರೋಬ್ಬರಿ 5 ತಾಸುಗಳವರೆಗೆ ಕೊರೋನಾವನ್ನೇ ಇಣುಕಿ ನೋಡಿತ್ತು. ಇದನ್ನು ಖಗೋಳ ಭಾಷೆಯಲ್ಲಿ ಪೆರಿಹೆಲಿಯನ್ ಎನ್ನುತ್ತಾರೆ. ಮರು ವರ್ಷ ಜನವರಿಯಲ್ಲಿ ಸೂರ್ಯನ ಪ್ರತಾಪಕ್ಕೆದುರಾದ ನೌಕೆಯ ಹೊರಕವಚ 612 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಯಾಗಿತ್ತು. ಆದರೆ ನೌಕೆಯ ಒಳಗಿನ ಉಷ್ಣಾಂಶ 32 ಡಿಗ್ರಿ ಸೆಲ್ಸಿಯಸ್ ದಾಟಿರಲಿಲ್ಲ. ನಾಸಾದ ಉನ್ನತ ತಂತ್ರಜ್ಞಾನ ನೌಕೆಯ ಕೈಹಿಡಿದಿತ್ತು.

ಆದಿತ್ಯ ನೆಲೆಗೊಳ್ಳುವ ಜಾಗದಲ್ಲಿ ನಾಸಾ ಮತ್ತು ಯುರೋಪಿಯನ್ ಸ್ಪೇಸ್ ಏಜೆನ್ಸಿ ಜಂಟಿಯಾಗಿ ಸೋಹೊ (ಸೋಲಾರ್ ಅಂಡ್ ಹೆಲಿಯೊಸ್ಫೆರಿಕ್ ಅಬ್ಸರ್ವೇಟರಿ) ವೀಕ್ಷಣಾಲಯವನ್ನು 1995 ರಷ್ಟು ಹಿಂದೆಯೇ ಸ್ಥಾಪಿಸಿವೆ. ಕೇವಲ ಮೂರು ವರ್ಷಗಳಿಗಾಗಿ ಅಲ್ಲಿಗೆ ತೆರಳಿದ್ದ ಸೋಹೊ ಇಂದಿನವರೆಗೂ ಕೆಲಸ ಮಾಡುತ್ತಿದೆ. ಅಂಥ ಸುಧಾರಿತ ವ್ಯವಸ್ಥೆ ಮತ್ತು ನೌಕೆಗಳು ಅಲ್ಲಿವೆ ಎಂದ ಮೇಲೆ ನಾವೇಕೆ ಮತ್ತೆ ನಮ್ಮ ಆದಿತ್ಯನನ್ನು ಅಲ್ಲಿಗೆ ಕಳಿಸುತ್ತಿದ್ದೇವೆ ಎಂಬ ಪ್ರಶ್ನೆ ಸಹಜ. ಅದಕ್ಕೆ ಕಾರಣಗಳಿವೆ. ಸೂರ್ಯನ ಕುರಿತಾದ ಹೆಚ್ಚಿನ ಮಾಹಿತಿ ಮುಂಚೂಣಿ ರಾಷ್ಟ್ರಗಳ ಬಳಿ ಮಾತ್ರ ಇದೆ. ಏನೇ ಬೇಕಾದರೂ ಅವರನ್ನೇ ಕೇಳಬೇಕು. ನಮಗೆ ಬೇಕಾದಂತೆ ಅವರ ನೌಕೆಯನ್ನು ತಿರುಗಿಸುವ ಅಧಿಕಾರ ನಮಗೆಲ್ಲಿದೆ? ನಾಸಾದ ಪಾರ್ಕರ್ ಸೋಲಾರ್ ಯೋಜನೆಯವರು ಡೇಟಾ ಕೊಟ್ಟರೆ ಮಾತ್ರ ವಿಶ್ಲೇಷಣೆ ಸಾಧ್ಯವಿತ್ತು.

ಈಗ ಹಾಗಲ್ಲ. ಸೂರ್ಯ ನಮಗೂ ಎಟುಕಲಿದ್ದಾನೆ. ಸೂರ್ಯನಿಂದ ಹೊರಹೊಮ್ಮುವ ರಾಶಿ ರಾಶಿ ಮೂಲಕಣ ಪ್ರವಾಹವನ್ನು ಅಭ್ಯಸಿಸಲು ನಮಗೆ ಬೇಕಾದ ಕೋನದಲ್ಲಿ ಆದಿತ್ಯನನ್ನು ತಿರುಗಿಸಿ ನೋಡಬಹುದು. ಅಷ್ಟೇ ಅಲ್ಲ, ಇತರ ದೇಶಗಳಿಗೂ ನಮ್ಮ ಆದಿತ್ಯಪೀಠದಲ್ಲಿ ಜಾಗ ಕೊಡಬಹುದು. ಸೂರ್ಯನಿಂದ ಹೊಮ್ಮುವ ಜ್ವಾಲಾಬುಗ್ಗೆಯನ್ನು ಅಧ್ಯಯನ ಮಾಡುವುದು ಆದಿತ್ಯನ ಮುಖ್ಯ ಉದ್ದೇಶಗಳಲ್ಲೊಂದು. ಅಂಥ ಜ್ವಾಲೆ ಭೂಮಿಯೆಡೆಗೆ ಬರುವುದೇ ಆದರೆ ಅದು ಆದಿತ್ಯ ಇರುವ ಕಕ್ಷೆಯನ್ನು ದಾಟಿ ನಮ್ಮೆಡೆಗೆ ಬರಬೇಕು. ಅದಕ್ಕೆ ಅರವತ್ತು ನಿಮಿಷಗಳು ಬೇಕು. ಅಂದರೆ ಭೂಮಿಗೆ ಅಪಾಯ ತರುವ ವಿಚಾರವಿದ್ದರೆ ಅದರಿಂದ ಜಾಗೃತರಾಗಲು ನಮಗೆ ಒಂದು ತಾಸಿನ ಸಮಯವಿರುತ್ತದೆ. ಹಾಗಾದಲ್ಲಿ ಮೊದಲ ಮುನ್ಸೂಚನೆ ಆದಿತ್ಯನಿಗೆ ದೊರೆತು ನಾವು ಹುಷಾರಾಗಬಹುದು.

ರಿಯಲ್ ಆದಿತ್ಯನ ಸೌರಜ್ವಾಲೆ ನಮ್ಮ ಕೃತಕ ಆದಿತ್ಯನ್ನೇ ಸುಟ್ಟು ಕರಕಲಾಗಿಸಬಹುದಲ್ಲವೆ? ಇಡೀ ಯೋಜನೆಯೇ ಹಳಿ ತಪ್ಪಬಹುದಲ್ಲವೇ? ಎಂಬ ಆತಂಕ ಬೇಕಿಲ್ಲ. ಅಂಥ ಅಪಾಯಗಳೆನ್ನೆದುರಿಸಲು ಸುರಕ್ಷಾ ಕ್ರಮ ಮತ್ತು ಆದಿತ್ಯನ ಉಪಕರಣಗಳಿಗೆ ತ್ವರಿತವಾಗಿ ಸುರಕ್ಷಾ ಹೊದಿಕೆ ತೊಡಿಸುವ ಇಲ್ಲವೆ ಇಡೀ ಉಪಗ್ರಹವನ್ನೇ ರಕ್ಷೆಯಿಂದ ಕೆಲಕಾಲ ದೂರಸರಿಸುವ ವ್ಯವಸ್ಥೆ ಇದ್ದೇ ಇರುತ್ತದೆ.

**ಆದಿತ್ಯನಿಂದ ಸಂಪೂರ್ಣ ಅಧ್ಯಯನ ಸಾಧ್ಯವೇ?**

ಖಂಡಿತ ಇಲ್ಲ. ನಾವು ಕಳುಹಿಸುತ್ತಿರುವ ಆದಿತ್ಯ ಎಲ್ 1 ಕೇವಲ ಸೂರ್ಯನ ಒಂದು ದಿಕ್ಕಿನಿಂದ ಹರಿದು ಬರುವ ಕಣ ಪ್ರವಾಹ. ಇದು ಬಿಸಿ ಜ್ವಾಲೆಗಳನ್ನೂ ಗ್ರಹಿಸುತ್ತದೆ. ಸದಾ ಉರಿಯುವ ಸೂರ್ಯ ಹಲವಾರು ಚಟುವಟಿಕೆ ವಿದ್ಯಮಾನಗಳು ಹಲವು ದಿಕ್ಕುಗಳಲ್ಲಿ ಘಟಿಸುತ್ತವೆ. ಸೂರ್ಯನಿಗೆ ಎದುರಾಗಿರುವ ಎಲ್ 5 ಲಗ್ರಾಂಜಿಯನ್ ಬಿಂದು ಸೂರ್ಯನ ಕುರಿತು ಮತ್ತಷ್ಟು ಮಾಹಿತಿ ನೀಡುವ ಅನುಕೂಲಕರ ತಾಣವಾಗಿದೆ. ಮುಂದಿನ ದಿನಗಳಲ್ಲಿ ಅಲ್ಲಿಗೆ ಉಪಗ್ರಹ ಕಳಿಸುವ ಆಶಯ ಅನೇಕ ದೇಶಗಳಿಗಿದೆ. ಅಲ್ಲದೆ ಆದಿತ್ಯನ ಒಡಲಿನಲ್ಲಿರುವ ಸಂಶೋಧನಾ ಸಾಧನಗಳ ಕಾರ್ಯಕ್ಷಮತೆಗೆ ಮಿತಿ ಇದೆ. ಇದರ ಜೊತೆಗೆ ಸೂರ್ಯನ ಧ್ರುವ ಪ್ರದೇಶಗಳ ಅಧ್ಯಯನವೂ ಬಾಕಿ ಇದೆ. ಅಲ್ಲಿಗೆ ನೌಕೆ ಕಳಿಸಲು ಸಾಧ್ಯವೇ ಎಂಬ ಬಗ್ಗೆ ಇನ್ನೂ ನಿಖರವಾಗಿ ತಿಳಿದಿಲ್ಲ.

ನಮ್ಮೆಲ್ಲರ ಬದುಕಿಗೆ ಸೂರ್ಯ ಅದೆಷ್ಟು ಮುಖ್ಯ ಎಂಬುದನ್ನು ನಮ್ಮ ಕಲೆ, ಸಂಸ್ಕೃತಿ ಆಚರಣೆಗಳು ಹೇಳುತ್ತವೆ. ಒಡಿಶಾದ ಕೊನಾರ್ಕದಲ್ಲಿ ಸೂರ್ಯನಿಗಾಗಿ ದೇವಾಲಯವನ್ನೇ ನಿರ್ಮಿಸಿದ್ದೇವೆ. ಎಲ್ಲರಿಗಿಂತ ಮೊದಲು ಗಾಯತ್ರಿ ಮಂತ್ರದ ಮೂಲಕ ಸೂರ್ಯನನ್ನು ಇನ್ನಿಲ್ಲದಂತೆ ಆರಾಧಿಸುತ್ತೇವೆ. ವೈವಸ್ವತ, ರವಿ, ದಿವಾಕರ, ಗ್ರಹಾರಾಜ, ಗ್ರಹಪತಿ, ಪುಷ, ಅರ್ಕ, ಭಾನು, ಭಾಸ್ಕರ ಎಂದೆಲ್ಲ ಕರೆಯಿಸಿಕೊಳ್ಳುವ ಸೂರ್ಯ ನಮಗೆ ಮಿತ್ರನೇ ಆಗಿದ್ದ. ಆದರೆ ಈ ಅತಿ ಮಾನವ ಯುಗದಲ್ಲಿ ಪ್ರಚಂಡ ವಿದ್ಯುತ್ ಹಾಗೂ ಸರಕು ಜಾಲಗಳನ್ನು ಹೆಣೆದುಕೊಂಡಿರುವ ನಮಗೆ ಸೂರ್ಯ ಶತ್ರುವಾದರೂ ಅಚ್ಚರಿ ಇಲ್ಲ. ಅದೇನೇ ಇದ್ದರೂ ಆದಿತ್ಯನ ಅಂತರಂಗ ಅರಿಯಲು ಇಸ್ರೋದ ಆದಿತ್ಯನ ನಾಲ್ಕು ತಿಂಗಳ ಪಯಣ ಪ್ರಾರಂಭವಾಗಿದೆ.

■



Downloaded From:www.kpscvaani.com













# ದಸರೆಯಲ್ಲಿ ಆನೆಗಳ ದರ್ಬಾರು



ಪಿ. ಮಮತಾ

ಮೈಸೂರು ದಸರೆಯ ಜೀವಾಳವೇ ಜಂಬೂಸವಾರಿ. ದಸರೆಯಲ್ಲಿ ಹಿಂದೆ ರಾಜರ ದರ್ಬಾರು ಇದ್ದರೆ ಈಗ ಆನೆಗಳದ್ದೇ ದರ್ಬಾರು. ಆನೆಗಳು ಇಲ್ಲದ ಮೈಸೂರು ದಸರೆಯನ್ನು ನಿಜಕ್ಕೂ ಊಹಿಸಲು ಸಾಧ್ಯವಿಲ್ಲ. ದೇಶದ ಅನೇಕ ಕಡೆ ದಸರೆಗಳು ನಡೆಯುತ್ತವೆ. ಆದರೆ ಮೈಸೂರು ದಸರೆ ಮಾತ್ರ ವಿಶ್ವ ವಿಖ್ಯಾತಿ ಹೊಂದಬೇಕಾದರೆ ಅದಕ್ಕೆ ಮುಖ್ಯ ಕಾರಣ ಈ ಗಜಪಡೆ.

ದಸರೆಯಲ್ಲಿ ಆನೆಗಳನ್ನು ಬಳಕೆ ಮಾಡುವ ಪರಿಪಾಠ ಇಂದು ನೆನ್ನೆಯದಲ್ಲ. ದಸರೆಯ ಮೂಲವಾದ ವಿಜಯನಗರದಲ್ಲಿ ನಡೆಯುತ್ತಿದ್ದ ಮಹಾನವಮಿ ಉತ್ಸವದಲ್ಲಿಯೂ ಈ ಅನೆಗಳು ಭಾಗವಹಿಸುತ್ತಿದ್ದವು. ದಸರೆ ಮೈಸೂರಿಗೆ ಬಂದ ನಂತರ ಜಂಬೂಸವಾರಿ ವಿಜೃಂಭಣೆಯಿಂದ ನಡೆಯುತ್ತಿದ್ದುದ್ದಕ್ಕೆ ದಾಖಲೆಗಳು ಸಿಗುತ್ತವೆ. ಈಗಲೂ ಜಂಬೂಸವಾರಿಯೇ ದಸರೆಯ ಪರಾಕಾಷ್ಠೆ ಎಂದರೆ ತಪ್ಪಾಗಲಾರದು. ದಸರೆ ಆರಂಭವಾದಾಗಿನಿಂದಲೂ ಗಜಪಡೆ ಈ ಉತ್ಸವದ ಅವಿಭಾಜ್ಯ ಅಂಗಳೆನಿಸಿವೆ.

ಮೊದಲ ಬಾರಿಗೆ ದಸರೆಯಲ್ಲಿ ಅಂಬಾರಿ ಹೊತ್ತ ಆನೆ ಎಂಬ ಖ್ಯಾತಿ ಜಯಮಾರ್ತಾಂಡ ಆನೆಗಿದೆ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಸಮೀಪ ಸೆರೆ ಸಿಕ್ಕ ಈ ಆನೆ ಬರೋಬರಿ 45 ವರ್ಷಗಳ ಕಾಲ ಅಂಬಾರಿ ಹೊತ್ತಿತ್ತು. ನಂತರ, ವಿಜಯಬಹದ್ದೂರ್, ನಂಜುಂಡ, ರಾಮಪ್ರಸಾದ್, ಮೋತಿಲಾಲ್, ಸುಂದರ್ ರಾಜ್, ಐರಾವತ, ಗಜೇಂದ್ರ, ಬಿಳಿಗಿರಿ ಆನೆಗಳು ಕ್ರಮವಾಗಿ ಅಂಬಾರಿ ಹೊತ್ತವು. ನಂತರ, ರಾಜೇಂದ್ರ ಎಂಬ ಆನೆ ಹಲವು ವರ್ಷಗಳ ಕಾಲ ಅಂಬಾರಿ ಹೊತ್ತಿತ್ತು. ನಂತರ 18 ವರ್ಷಗಳ ಕಾಲ ಸತತವಾಗಿ ಅಂಬಾರಿ ಹೊತ್ತಿದ್ದು ದ್ರೋಣ. ನಂತರ ಒಮ್ಮೆ ಅರ್ಜುನ ಆನೆ ಅಂಬಾರಿ ಹೊತ್ತಿತು. ಮರುವರ್ಷ ಇದರ ಹೊಣೆಯನ್ನು ಬಲರಾಮ ಆನೆಗೆ ವಹಿಸಲಾಯಿತು.

ಹನ್ನೊಂದು ವರ್ಷಗಳ ಕಾಲ ಸತತವಾಗಿ ಅಂಬಾರಿ ಹೊತ್ತ ಬಲರಾಮ ಆನೆ ನಿವೃತ್ತಿಯಾದ ನಂತರ ಮತ್ತೆ ಅರ್ಜುನ ಆನೆ ಅಂಬಾರಿ ಹೊತ್ತಿತು. ನಂತರ, ಈಗ ಅಭಿಮನ್ಯು ಆನೆ ಅಂಬಾರಿಯನ್ನು ಯಶಸ್ವಿಯಾಗಿ ಹೊರುತ್ತಿದೆ. ದಸರೆಗೆ ಇನ್ನೂ ಎರಡು ತಿಂಗಳು ಇರುವಂತೆಯೇ ಆನೆಗಳ ಆಯ್ಕೆ ಪ್ರಕ್ರಿಯೆಯನ್ನು ಅರಣ್ಯ ಇಲಾಖೆ ಆರಂಭಿಸುತ್ತದೆ. ಕೊಡಗಿನ ದುಬಾರೆ, ಮತ್ತಿಗೋಡು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿನ ಆನೆ ಶಿಬಿರಗಳಿಂದ ಆನೆಗಳನ್ನು ಹುಣಸೂರಿನ ವೀರನಹೊಸಹಳ್ಳಿಗೆ ಕರೆಸಿ ಕೊಳ್ಳಲಾಗುತ್ತದೆ. ನಂತರ, ಪೂಜೆ ಸಲ್ಲಿಸಿ ಗಜಪಯಣ ಆರಂಭಿಸಲಾಗುತ್ತದೆ. ವೀರನಹೊಸಹಳ್ಳಿಯಿಂದ ಮೈಸೂರಿನ ಅರಣ್ಯ ಭವನಕ್ಕೆ ತಲುಪಿದ ಆನೆಗಳನ್ನು ಕಣ್ತುಂಬಿಕೊಳ್ಳಲು ಅಲ್ಲಿ ಜನಸಾಗರವೇ ಸೇರುತ್ತದೆ. ನಂತರ ಅಲ್ಲಿಂದ ಮೈಸೂರು ನಗರದಲ್ಲಿ ಮೆರವಣಿಗೆ ಮೂಲಕ ಅರಮನೆಗೆ ಕರೆತರಲಾಗುತ್ತದೆ.

**ಅರಮನೆಯಲ್ಲಿ ತೆರೆದುಕೊಳ್ಳುವ ಹೊಸ ಪ್ರಪಂಚ**

ಗಜಪಡೆ ಅರಮನೆ ತಲುಪುವಷ್ಟರಲ್ಲಿ ಜಿಲ್ಲಾಡಳಿತವು ಆನೆಗಳಿಗಾಗಿ ವಿಶೇಷ



Downloaded From:www.kpscvaani.com

ಶೆಡ್, ಮಾವುತ ಹಾಗೂ ಕಾವಾಡಿಗರಿಗಾಗಿ ವಿಶೇಷ ಶೆಡ್‌ಗಳನ್ನು ನಿರ್ಮಿಸುತ್ತದೆ. ಅಲ್ಲಿ ಹೊಸದೊಂದು ಪ್ರಪಂಚವೇ ತೆರೆದುಕೊಳ್ಳುತ್ತದೆ. ಮಾವುತ, ಕಾವಾಡಿಗಳ ಮಕ್ಕಳಿಗೆ ವಿಶೇಷ ಶಾಲೆ, ವಿಶೇಷ ಆರೋಗ್ಯ ತಪಾಸಣೆ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಕೇವಲ ಮಾವುತ ಕಾವಾಡಿಗಳಿಗೆ ಮಾತ್ರವಲ್ಲ ಆನೆಗಳಿಗೂ ಭೂರಿ ಭೋಜನವನ್ನು ನೀಡಲಾಗುತ್ತದೆ. ಹಳೆಯ ಮಾಯಾ ಬಜಾರ್ ಚಿತ್ರದ 'ಅಹಹ ಅಹಾ.. ವಿವಾಹ ಭೋಜನವಿದು, ವಿಚಿತ್ರ ಭಕ್ಷ್ಯಗಳಿವು...ಬೀಗರಿಗೆ ಔತಣವಿದು ದೊರೆಗೊಂಡಿತೆನಗೆ ಬಂದು ಅಹಹ ಹ್ಹ ಹಹಾ'... ಎಂಬ ಹಾಡು ನೆನಪಾಗುತ್ತದೆ. ಗಜಪಡೆಗೆ ವಿವಿಧ ತರಕಾರಿ, ಧಾನ್ಯಗಳು, ಬೆಣ್ಣೆ, ಗ್ಲುಕೋಸ್ ಹೀಗೆ ವಿವಿಧ ಆಹಾರಗಳನ್ನು ನೀಡಲಾಗುತ್ತದೆ. ನಂತರ ಮಧ್ಯಾಹ್ನ ಆನೆಗಳಿಗೆ ಆಲದ ಸೊಪ್ಪು, ಹಸಿರು ಹುಲ್ಲು ನೀಡುತ್ತಾರೆ.

ಭತ್ತದ ಹುಲಿನಲ್ಲಿ ಕುಸುರೆಯ ಸುತ್ತಿ ಭತ್ತವನ್ನು ಬೇಯಿಸಿ ಅದಕ್ಕೆ ಬೆಲ್ಲ, ಇಂಡಿ, ತೆಂಗಿನಕಾಯಿ, ಈರುಳ್ಳಿ, ಉಪ್ಪು, ಎಲ್ಲವನ್ನು ಒಟ್ಟಿಗೆ ಸೇರಿಸಿ ಭತ್ತದ ಹುಲ್ಲಿನಿಂದ ತಿಂಡಿಗಳನ್ನು ಪಿಂಡಿ ಕಟ್ಟಿ ಆನೆಗಳಿಗೆ ಕೊಡಲಾಗುತ್ತದೆ. ಪ್ರತಿ ಆನೆಗೆ ಏನಿಲ್ಲವೆಂದರೂ 12 ಕೆಜಿ ಭತ್ತ, 500 ಗ್ರಾಂ ಬೆಲ್ಲ, ಎರಡು ತೆಂಗಿನ ಕಾಯಿ, ಅರ್ಧ ಕೆಜಿ ಬೆಣ್ಣೆಯನ್ನು ನೀಡಲಾಗುತ್ತದೆ. ಈ ರೀತಿ ವಿವಿಧ ಬಗೆಯ ವಿಶೇಷ ಆಹಾರಗಳಿಂದ ಆನೆಗಳು ದಷ್ಟಪುಷ್ಟವಾಗುತ್ತವೆ. ಈ ಆಹಾರಗಳಿಂದಾಗಿ ಆನೆಗಳು ತೂಕವನ್ನು ಗಮನಾರ್ಹವಾಗಿ ಹೆಚ್ಚಿಸಿಕೊಳ್ಳುತ್ತವೆ. ಹಾಗೆಯೇ ಪ್ರತಿ ನಿತ್ಯವೂ ಪಶುವೈದ್ಯರು ಈ ಆನೆಗಳ ಆರೋಗ್ಯವನ್ನು ತಪಾಸಣೆ ಮಾಡುತ್ತಿರುತ್ತಾರೆ.

ಅರಮನೆಗೆ ಆನೆಗಳು ಬಂದ ನಂತರ ಅರಮನೆಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ಆನೆಗಳು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಅರಮನೆಯನ್ನು ನೋಡುವುದಕ್ಕಿಂತ ಹೆಚ್ಚು ಆನೆಗಳನ್ನೇ ಪ್ರವಾಸಿಗರು ದಿಟ್ಟಿಸುತ್ತಾರೆ. ಅವುಗಳ ಚಲನವಲನಗಳನ್ನು ಕೌತುಕ ತುಂಬಿದ ಕಂಗಳಿಂದ ಮಕ್ಕಳು ವೀಕ್ಷಿಸುತ್ತಾರೆ. ಆನೆಗಳ ಸುತ್ತ ಜನರು ಸದಾ ಗಿಜಿಗುಡುತ್ತಿರುತ್ತಾರೆ. ಸೆಲ್ಫೀಗಾಗಿ ಮುಗಿಬೀಳುತ್ತಾರೆ. ಕೆಲವೊಮ್ಮೆ ಜನರನ್ನು ನಿಯಂತ್ರಿಸಲು ಮಾವುತರು, ಕಾವಾಡಿಗರು ಹೈರಾಣಾಗುತ್ತಾರೆ.

**ಆನೆಗಳ ವಾಕಿಂಗ್**

ದಸರೆಯಲ್ಲಿ ಆನೆಗಳು ನಡೆಯಬೇಕಾದ ಹಾದಿ ತನಕ ಅವುಗಳನ್ನು ಪ್ರತಿ ದಿನವೂ ವಾಕಿಂಗ್‌ಗೆ ಕರೆದುಕೊಂಡು ಹೋಗಲು ಆರಂಭಿಸುವುದೂ ಮೈಸೂರಿನ ಜನಸಾಮಾನ್ಯರಿಗೆ ದೊಡ್ಡ ಪುಳಕದ ಕ್ಷಣಗಳು. ನಿತ್ಯ ಬೆಳಿಗ್ಗೆ ಮತ್ತು ಸಂಜೆ ಜಂಬೂಸವಾರಿ ತಲುಪಬೇಕಾದ ಗಮ್ಯ ಸ್ಥಾನ ಬನ್ನಿಮಂಟಪದವರೆಗೂ ಆನೆಗಳನ್ನು ವಾಕಿಂಗ್ ಮಾಡಿಸಲಾಗುತ್ತದೆ. ನಂತರ ಮರಳಿನ ಮೂಟೆಗಳನ್ನು ಇಡುವ ಮೂಲಕ ಅವುಗಳಿಗೆ ಭಾರ ಹೊರುವ ತಾಲೀಮೂ ಕೂಡ ನಡೆಸಲಾಗುತ್ತದೆ. ಮರಳಿನ ಮೂಟೆಯ ಭಾರವನ್ನು ಹಂತಹಂತವಾಗಿ ಹೆಚ್ಚಿಸಲಾಗುತ್ತದೆ. ಕೊನೆಗೆ, ಮರದ ಅಂಬಾರಿ ಹೊರಿಸುವ ಮೂಲಕ ಈ ತಾಲೀಮಿಗೆ ಮಂಗಳ ಹಾಡಲಾಗುತ್ತದೆ.

**ಮೈನವಿರೇಳಿಸುವ ಸಿಡಿಮದ್ದು ತಾಲೀಮು**

ಆನೆಗಳ ತಾಲೀಮಿನಲ್ಲಿ ಕಂಡು ಬರುವ ಮೈನವಿರೇಳಿಸುವ ತಾಲೀಮು ಎಂದರೆ ಅದು ಸಿಡಿಮದ್ದು ತಾಲೀಮು. ಜಂಬೂಸವಾರಿ ವೇಳೆ ಅರಮನೆಯ ಹೊರಾಂಗಣದಲ್ಲಿ ನಡೆಯುವ ಸಿಡಿಮದ್ದುಗಳ ಸದ್ದಿಗೆ ಹೊಂದಿಕೊಳ್ಳುವುದಕ್ಕೆ ಈ ತಾಲೀಮು ನಡೆಸಲಾಗುತ್ತದೆ. ಕನಿಷ್ಠ ಎಂದರೂ ಮೂರು ಬಾರಿ ನಡೆಯುವ ಈ ತಾಲೀಮು ನೋಡುಗರಿಗೆ ಅದ್ಭುತವಾದ ಅನುಭವ ತರುತ್ತದೆ. ಕಿವಿಗಡಚಿಕ್ಕುವ ಫಿರಂಗಿ ಸದ್ದಿಗೆ ಕೆಲವು ಆನೆಗಳು ಬೆದರುತ್ತವೆ. ಅವುಗಳನ್ನು ನಿಯಂತ್ರಿಸುವುದೇ ದೊಡ್ಡ ಸಾಹಸ. ಈ ಅದ್ಭುತವಾದ ಕ್ಷಣಗಳನ್ನು ಕಣ್ತುಂಬಿಕೊಳ್ಳುವ ಅಪರೂಪದ ಅವಕಾಶ ಮೈಸೂರಿನ ದಸರೆಯಲ್ಲಿ ಜನರಿಗೆ ಲಭ್ಯವಾಗುತ್ತದೆ.

**ಆನೆಗಳಿಗೆ ಕೆಲಸ ಹಂಚಿಕೆ**

ಮನುಷ್ಯರಿಗೆ ಕೆಲಸ ಹಂಚಿಕೆ ಮಾಡುವಂತೆ ಕೆಲಸಕಾರ್ಯಗಳನ್ನು ಜಂಬೂಸವಾರಿಯಂದು ಆನೆಗಳಿಗೆ ಹಂಚಿಕೆ ಮಾಡುವುದು ವಿಶೇಷ. ಅಂಬಾರಿ ಹೊರುವ ಆನೆ ಗಜಪಡೆಯ ಕ್ಯಾಪ್ಟನ್ ಆಗಿ ನಿಯುಕ್ತಿಯಾದರೆ ಅದರ ಅಕ್ಕಪಕ್ಕ ಹೆಜ್ಜೆ ಹಾಕಲು ಹೆಣ್ಣಾನೆಗಳನ್ನು ನಿಯುಕ್ತಿಗೊಳಿಸಲಾಗುತ್ತದೆ. ಇವುಗಳನ್ನು ಕುಮ್ಕಿ ಆನೆಗಳು ಎಂದು ಕರೆಯಲಾಗುತ್ತದೆ. ಇದರೊಂದಿಗೆ ನೌಪತ್, ನಿಶಾನೆ ಎಂಬ ಆನೆಗಳನ್ನು ನಿಯೋಜಿಸಲಾಗುತ್ತದೆ. ಪಟ್ಟದ ಆನೆ ವಿಶೇಷ ಪೂಜಾ ಕಾರ್ಯಕ್ರಮಗಳಿಗೆ ಪಾತ್ರವಾಗುತ್ತದೆ. ಜಂಬೂಸವಾರಿಯಲ್ಲಿ ಈ ಎಲ್ಲ ಆನೆಗಳು ತಮಗೆ ವಹಿಸಿದ ಕೆಲಸಗಳನ್ನು ಚಾಚೂತಪ್ಪದೇ ನಿರ್ವಹಿಸಿ ದಸರೆಯ ಯಶಸ್ವಿಗೆ ಷರಾ ಬರೆಯುತ್ತವೆ.

**ಹೋಗಲೊಲ್ಲೆ ಎಂಬ ಹಠ**

ದಸರಾ ಆನೆಗಳು ಜಂಬೂಸವಾರಿ ಮುಗಿದ ಬಳಿಕ ವಾಪಸ್ ಶಿಬಿರಗಳಿಗೆ ತೆರಳಲೇಬೇಕು. ಆದರೆ ಅದನ್ನು ವಾಪಸ್ ಕರೆದುಕೊಂಡು ಹೋಗಲು ಮಾವುತರು ಹಾಗೂ ಕಾವಾಡಿಗಳು ಪಡಬಾರದ ಯಾತನೆ ಪಡುತ್ತಾರೆ. ಕೆಲವೊಂದು ಆನೆಗಳಂತೂ ತಾನು ಹೋಗಲಾರೆ ಎಂದು ಹಠ ಹಿಡಿಯುತ್ತವೆ. ಅಂತಹ ಆನೆಗಳನ್ನು ಲಾರಿಗೆ ಹತ್ತಿಸಲು ಇನ್ನಿತರೆ ಪಳಗಿದ ಆನೆಗಳ ನೆರವು ಪಡೆಯಲಾಗುತ್ತದೆ. ಒಲ್ಲದ ಮನಸ್ಸಿನಿಂದ ಲಾರಿ ಹತ್ತಿ ಹೊರಡುವ ಈ ಆನೆಗಳಿರುವ ಸಾಲು ಸಾಲು ವಾಹನವನ್ನು ನೋಡುವ ಯಾರಲ್ಲೇ ಆದರೂ ಭಾವುಕ ಸೆಳೆಯನ್ನು ಸೃಷ್ಟಿಸದೇ ಇರಲಾರದು. ಕಳೆದ ಬಾರಿ ದಸರೆಗೆ ಬಂದಿದ್ದ ಒಂದು ಲಕ್ಷ್ಮಿ ಎಂಬ ಆನೆಯು ಅರಮನೆ ಆವರಣದಲ್ಲೇ ಗಂಡು ಮರಿಗೆ ಜನ್ಮ ನೀಡಿದ್ದು ಮೈಸೂರಿನ ಜನತೆಗೆ ಹೆಚ್ಚು ಸಂತಸವನ್ನು ಉಂಟುಮಾಡಿತ್ತು. ಅಮ್ಮ ಮತ್ತು ಮಗನ್ನು ದಸರೆಯ ನಂತರ ಕಳಿಸಿಕೊಡುವಾಗ ಇಡೀ ನಾಡಿನ ಜನತೆ ಅತ್ಯಂತ ಭಾವುಕರಾಗಿದ್ದರು.

**ಶಿಬಿರದಲ್ಲಿ ಮತ್ತದೇ ಕೆಲಸ**

ಜಂಬೂಸವಾರಿಯ ನಂತರ ಮರಳಿ ಶಿಬಿರ ಸೇರುವ ಆನೆಗಳಿಗೆ ಯಾವುದೇ ವಿಶೇಷ ಗೌರವ ಸಿಕ್ಕುವುದಿಲ್ಲ. ವಿಶೇಷ ಆಹಾರಗಳನ್ನು ಉಂಡು ತೂಕ ಹೆಚ್ಚಿಸಿಕೊಂಡಿದ್ದು ಬಿಟ್ಟರೆ ಬೇರೇನೂ ಲಾಭವಾಗದು. ಇತರೆ ಆನೆಗಳಂತೆ ಶಿಬಿರದಲ್ಲಿ ಕೆಲಸ ಮಾಡಬೇಕು. ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಸಾಗಿಸುವುದು, ಹುಲಿಗಳನ್ನು ಸೆರೆ ಹಿಡಿಯುವುದು, ಪುಂಡಾನೆಗಳನ್ನು ಮರಳಿ ಕಾಡಿಗಟ್ಟುವುದು, ಅವುಗಳನ್ನು ಸೆರೆ ಹಿಡಿಯುವುದು ಇವೇ ಮೊದಲಾದ ಕೆಲಸಗಳನ್ನು ವಹಿಸಲಾಗುತ್ತದೆ. ಆದರೆ ಮತ್ತೆ ಈ ಆನೆಗಳ ನೆನಪಾಗುವುದು ಮತ್ತೊಂದು ದಸರೆಗೆ ಮಾತ್ರ...!

■



Downloaded From:www.kpscvaani.com







# ರಫ್ತು ಉತ್ತೇಜನಕ್ಕಾಗಿ ಡಾಕ್ ಘರ್ ನಿರ್ಯಾತ್ ಕೇಂದ್ರ

**ಅಂಚೆ ಇಲಾಖೆಯ ಡಾಕ್ ಘರ್ ನಿರ್ಯಾತ್ ಸೇವೆ ಮುಖಾಂತರ ರೈತರ ತೋಟಗಾರಿಕೆ ಉತ್ಪನ್ನಗಳ ರಫ್ತು.**

ಡಾ. ವರ ಪ್ರಸಾದ್ ರಾವ್ ಪಿ.ವಿ

**ಕ**ರ್ನಾಟಕದಲ್ಲಿ ಅಂಚೆ ಇಲಾಖೆಯ ಢಾಕ್ ಘರ್ ನಿರ್ಯಾತ್ ಸೇವೆ ಚಾಲನೆಯಿಂದಾಗಿ ಕುಶಲಕರ್ಮಿಗಳು, ಕೃಷಿ, ತೋಟಗಾರಿಕೆ ಬೆಳೆಗಾರರು, ನೇಕಾರರು ಮತ್ತು ಉತ್ಪಾದಕರ ಉತ್ಪನ್ನಗಳಿಗೆ ಉತ್ತಮವಾದ ಬೆಲೆಯನ್ನು ಒದಗಿಸಲು ಸಹಾಯಕವಾಗಿದೆ.

ಉತ್ಪನ್ನಗಳು ಅಂಚೆ ಇಲಾಖೆಯ ಢಾಕ್ ನಿರ್ಯಾತ್ ಸೇವೆ ಮುಖಾಂತರ ನೇರವಾಗಿ ವಿದೇಶಕ್ಕೆ ತ್ವರಿತವಾಗಿ ತಲುಪುತ್ತಿರುವುದರಿಂದ ರಾಜ್ಯದ ಹಲವು ಜಿಲ್ಲೆಗಳ ರೈತರಿಗೆ ಬಹಳ ಅನುಕೂಲ ಆಗಿದೆ. ಇದರ ಬಗ್ಗೆ ರೈತರಿಗೆ ಹೆಚ್ಚಿನ ಮಾಹಿತಿ ನೀಡಲು ತೋಟಗಾರಿಕೆ ಇಲಾಖೆಯಿಂದ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ಇಂದು ನಾವು ಮೊಬೈಲ್ ಫೋನ್‌ಗಳು, ಇ-ಮೇಲ್‌ಗಳು ಮತ್ತು ಫ್ಯಾಕ್ಸ್‌ಗಳ ಯುಗದಲ್ಲಿ ವಾಸಿಸುತ್ತಿದ್ದೇವೆ. ಇಂಟರ್ನೆಟ್ ಮತ್ತು ತ್ವರಿತ ಸಂದೇಶ ಸೇವೆಗಳ ಯುಗದೊಂದಿಗೆ ಅಂಚೆ ಸೇವೆಗಳು ಸಹ ಇಂದು ತ್ವರಿತಗತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ದಿನೇ ದಿನೇ ಜನರ ಹತ್ತಿರವಾಗುತ್ತಿದೆ. ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರಿಗೆ ಉತ್ತೇಜನ ನೀಡಲು ಮತ್ತು ರಫ್ತು ಹೆಚ್ಚಿಸಲು ಕರ್ನಾಟಕ ರಾಜ್ಯ ಸೇರಿದಂತೆ ದೇಶದ ಹಲವು ಕಡೆಗಳಲ್ಲಿ ಢಾಕ್ ಘರ್ ನಿರ್ಯಾತ್ ಕೇಂದ್ರಗಳಿಗೆ ಚಾಲನೆ ನೀಡಲಾಗಿದೆ. ಪ್ರತಿ ವರ್ಷ ಅಕ್ಟೋಬರ್ 9 ರಂದು ವಿಶ್ವ ಅಂಚೆ ದಿನವನ್ನು ಆಚರಣೆ ಮಾಡಲಾಗುತ್ತದೆ. ಈ ಹಿನ್ನಲೆಯಲ್ಲಿ ಢಾಕ್ ಘರ್ ನಿರ್ಯಾತ್ ಕೇಂದ್ರಗಳ ಬಗ್ಗೆ ವಿಶೇಷ ವರದಿ ಇಲ್ಲಿದೆ.

ಭಾರತೀಯ ಅಂಚೆ ಸೇವೆ ವಿಶ್ವದಲ್ಲೇ ಅತಿ ದೊಡ್ಡದಾದ ಸಂಪರ್ಕ ಜಾಲವನ್ನು ಹೊಂದಿದೆ. ದೇಶಾದ್ಯಂತ 1,55,000 ಅಂಚೆ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಭಾರತ ದೇಶದ ಯಾವುದೇ ಊರಿಗೆ ಹೋದರೂ ನಮಗೆ ಅಂಚೆ ಕಛೇರಿ ಕಾಣಸಿಗುತ್ತದೆ. ಇದರಿಂದಾಗಿಯೇ ಸಾರ್ವಜನಿಕರು ದೇಶದ ಎಲ್ಲಾ ಪ್ರದೇಶಗಳೊಂದಿಗೆ ಸಂಪರ್ಕವನ್ನು ಸಾಧಿಸಲು ಸಾಧ್ಯವಾಗಿದೆ.



Downloaded From:www.kpscvaani.com



ದಶಕಗಳ ಹಿಂದೆ ಸಂದೇಶಗಳನ್ನು, ಪತ್ರಗಳನ್ನು, ಡ್ರಾಫ್ಟ್‌ಗಳನ್ನು, ಚೆಕ್ ಇವೇ ಮುಂತಾದವುಗಳನ್ನು ಕಳುಹಿಸಲು ಜನರು ಅಂಚೆಯನ್ನು ಹೆಚ್ಚಾಗಿ ಅವಲಂಬಿಸಿದ್ದರು. ಆದರೀಗ ಅದರ ಬಳಕೆ ಹೆಚ್ಚಾಗಿದೆ. ಅಂಚೆ ಕಚೇರಿಗಳ ಮೂಲಕ ಇ-ಕಾಮರ್ಸ್ ಅನ್ನು ಉತ್ತೇಜಿಸಲು, ಅಂಚೆ ಇಲಾಖೆಯು ಢಾಕ್ ಘರ್ ನಿರ್ಯಾತ್ ಕೇಂದ್ರಗಳಲ್ಲಿ ಸುಲಭವಾಗಿ ಬುಕಿಂಗ್ ಮತ್ತು ಪ್ರಸರಣ, ರಫ್ತು ಅಂಚೆ ಬಿಲ್‌ನ ಎಲೆಕ್ಟ್ರಾನಿಕ್ ಫೈಲಿಂಗ್ ಮತ್ತು ಕಸ್ಟಮ್ಸ್ ಕ್ಲಿಯರೆನ್ಸ್ ಅನ್ನು ಸ್ಥಾಪಿಸಲು ಉಪಕ್ರಮವನ್ನು ಪ್ರಾರಂಭಿಸಿದೆ.

ದೇಶದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಢಾಕ್ ಘರ್ ನಿರ್ಯಾತ್ ಕೇಂದ್ರ ಇರಬೇಕು ಎಂಬ ಗುರಿಯನ್ನು ಅಂಚೆ ಇಲಾಖೆ ಹೊಂದಿದೆ. ಹೀಗಾಗಿ ಪ್ರಾಥಮಿಕವಾಗಿ ದೇಶದಲ್ಲಿ 1,000ಕ್ಕೂ ಅಧಿಕ ಢಾಕ್ ಘರ್ ನಿರ್ಯಾತ್ ಕೇಂದ್ರ ಆರಂಭಗೊಂಡಿದೆ.

**ಆನ್‌ಲೈನ್‌ನಲ್ಲಿ ದಾಖಲೆ ಅಪ್‌ಲೋಡ್**

ರಫ್ತು ಮಾಡಲು ಪರವಾನಗಿ, ಪ್ರಮಾಣಪತ್ರ, ವಸ್ತು ವಿವರ, ರಫ್ತುದಾರರ ವಿವಿರ ಹೀಗೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಲು ಕೂಡ ಬೆಂಗಳೂರಿಗೆ ಬರಬೇಕಿತ್ತು. ಈಗ ರಫ್ತುದಾರರು ತಾವು ಇರುವಲ್ಲಿಂದಲೇ ಡಾಕ್ ನಿರ್ಯಾತ್ ಕೇಂದ್ರದ ಪೋರ್ಟಲ್‌ನಲ್ಲಿ (https://dnk.cept.gov.in/customers.web/) ಭರ್ತಿ ಮಾಡಲು ಅವಕಾಶ ನೀಡಲಾಗಿದೆ.

ರಫ್ತು ಮಾಡುವ ಉತ್ಪನ್ನವು ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ, ಸ್ಥಳಕ್ಕೆ ಬಂದು ಸಂಗ್ರಹಿಸುವ ವ್ಯವಸ್ಥೆಯೂ ಇದೆ. ಉತ್ಪನ್ನವು ಕಡಿಮೆ ಪ್ರಮಾಣದಲ್ಲಿದ್ದರೆ ಢಾಕ್ ಘರ್ ನಿರ್ಯಾತ್ ಕೇಂದ್ರ ಇರುವ ಅಂಚೆ ಕಚೇರಿಗೆ ಬರಬೇಕು. ಈ ಕೇಂದ್ರದ ಸೇವೆಗಳು ರಫ್ತುದಾರರಿಗೆ ಒಂದು-ನಿಲುಗಡೆ ತಾಣವಾಗಿ ಸಮಗ್ರ ನೆರವು ಮತ್ತು ರಫ್ತಿಗೆ ಸುವ್ಯವಸ್ಥಿತ ಪ್ರಕ್ರಿಯೆಗಳನ್ನು ಒದಗಿಸುತ್ತದೆ.

ಸಂಬಂಧಿತ ದಾಖಲಾತಿಗಳು, ಲಾಜಿಸ್ಟಿಕ್ಸ್, ಕಸ್ಟಮ್ಸ್ ಕಾರ್ಯವಿಧಾನಗಳು ಮತ್ತು ಪ್ಯಾಕಿಂಗ್ ಕೇಂದ್ರಗಳು ರಫ್ತು ವ್ಯವಹಾರಗಳಿಗೆ ಅಮೂಲ್ಯವಾದ ಬೆಂಬಲವನ್ನು ನೀಡುತ್ತವೆ. ಅಲ್ಲದೆ ಅಂತಾರಾಷ್ಟ್ರೀಯ ವ್ಯಾಪಾರದ ಸಂಕೀರ್ಣತೆಗಳನ್ನು ಸುಲಭವಾಗಿ ನ್ಯಾವಿಗೇಟ್ ಮಾಡಲು ಅವರಿಗೆ ಅಧಿಕಾರ ನೀಡುತ್ತವೆ.

**ತೋಟಗಾರಿಕೆಯಿಂದ ರೈತರಿಗೆ ಢಾಕ್ ನಿರ್ಯಾತ್ ಕೇಂದ್ರ ಸಂಪೂರ್ಣ ಮಾಹಿತಿ:**

ಅಂಚೆ ಮೂಲಕವು ಹೊರ ಜಿಲ್ಲೆ, ಹೊರ ರಾಜ್ಯ, ಹೊರ ದೇಶಗಳಿಗೆ ರೈತರು ತಾವು ಬೆಳೆದ ಹಣ್ಣು & ತರಕಾರಿ ಹಾಗೂ ಇತರೆ ಬೆಳೆಗಳನ್ನು ತಮ್ಮ ಆಪ್ತರಿಗೆ ಮತ್ತು ಗ್ರಾಹಕರ ಮನೆ ಬಾಗಿಲಿಗೆ ನೇರವಾಗಿ ತಲುಪಿಸಿ ಹೆಚ್ಚಿನ ಆದಾಯವನ್ನು ಪಡೆಯಬಹುದು. ಇದೊಂದು ರೈತರಿಗೆ ಒಳ್ಳೆಯ ಅವಕಾಶವಾಗಿದೆ. ಏಕೆಂದರೆ ರೈತರು ನಿರ್ದಿಷ್ಟ ತೂಕದ ಹಣ್ಣುಗಳನ್ನು ದೂರದ ಗ್ರಾಹಕರಿಗೆ ಅಥವಾ ಆಪ್ತರಿಗೆ ಸುರಕ್ಷಿತವಾಗಿ ತಲುಪಿಸುವುದು ಕಷ್ಟಕರವಾಗಿತ್ತು. ಆದರೆ ಇಂದು ಅಂಚೆ ಮೂಲಕ ರೈತರು ತಾವು ಬೆಳೆದ ಯಾವುದೇ ತೋಟಗಾರಿಕೆ ಮತ್ತು ಕೃಷಿ ಬೆಳೆಗಳನ್ನು ಗ್ರಾಹಕರಿಗೆ ತಲುಪಿಸಬಹುದಾಗಿದೆ.

ಈ ಅಂಚೆ ಇಲಾಖೆಯ ಢಾಕ್ ನಿರ್ಯಾತ್ ಕೇಂದ್ರಗಳ ಬಗ್ಗೆ ರೈತರಿಗೆ, ಬೆಳೆಗಾರರಿಗೆ ಇದರ ಉಪಯೋಗ ಸೇರಿದಂತೆ ಸಮಗ್ರ ಮಾಹಿತಿಯನ್ನು ರಾಜ್ಯ ಸರಕಾರದ ತೋಟಗಾರಿಕೆ ಇಲಾಖೆ ನೀಡುತ್ತಿದೆ.

ಕರ್ನಾಟಕದಲ್ಲಿ ಮಾವು, ದ್ರಾಕ್ಷಿ, ಹಲಸು ಸೇರಿದಂತೆ ಹಲವು ಕೃಷಿ ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹಿಂದೆ ವಿದೇಶಗಳಿಗೆ ರಫ್ತು ಮಾಡಲು ಖಾಸಗಿ ಕೋರಿಯರ್ ಸೇವೆಗಳನ್ನು ಬಳಸಿಕೊಳ್ಳಲಾಗುತಿತ್ತು. ಆದರೀಗ ಅಂಚೆ ಇಲಾಖೆಯ ಢಾಕ್ ನಿರ್ಯಾತ್ ಕೇಂದ್ರಗಳಿಗೆ ಚಾಲನೆ ನೀಡಿರುವುದರಿಂದ ಜನರಿಗೆ ಹೆಚ್ಚಿನ ಅನುಕೂಲವಾಗಿದೆ.

ಈ ಬಗ್ಗೆ ಕೊಪ್ಪಳ ಜಿಲ್ಲೆಯ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ್ ಅವರು ಢಾಕ್ ಘರ್ ನಿರ್ಯಾತ್ ಕೇಂದ್ರಗಳ ಬಗ್ಗೆ ಮಾಹಿತಿ ನೀಡುತ್ತಾ, ಅಂಚೆ ಇಲಾಖೆಯಿಂದ ತೋಟಗಾರಿಕೆ ಮತ್ತು ಕೃಷಿ ಬೆಳೆಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ಯೋಜನೆಯನ್ನು ಪ್ರಾರಂಭಿಸಿರುವುದು ರೈತರಿಗೆ ಅತ್ಯಂತ ಉಪಯುಕ್ತವಾಗಿದೆ ಎಂದು ಅಭಿಪ್ರಾಯಪಡುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿ ಬೆಳೆಯುವ ಕೇಸರ್ ಮಾವಿನ ಹಣ್ಣುಗಳಿಗೆ ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳಲ್ಲಿ ಸಾಕಷ್ಟು ಬೇಡಿಕೆ ಇದ್ದು, ಗ್ರಾಹಕರಿಗೆ ಕೇಸರ್ ಮಾವಿನ ಹಣ್ಣುಗಳನ್ನು ಮನೆ ಬಾಗಿಲಿಗೆ ತಲುಪಿಸುವುದು ಕಷ್ಟಕರವಾಗಿತ್ತು. ಈಗ ಅಂಚೆ ಮೂಲಕ ತೋಟಗಾರಿಕೆ ಬೆಳೆಗಳ ರಫ್ತಿನಿಂದ ರೈತರಿಗೆ ಅನುಕೂಲವಾಗಿದೆ. ಸಣ್ಣ ರೈತರು ಸಹ ತಾವು ಬೆಳೆದ ದಾಳಿಂಬೆ, ದ್ರಾಕ್ಷಿ, ಬಾಳೆ, ಪಪ್ಪಾಯ ಸೀತಾಫಲ, ಡ್ರಾಗನ್, ಮೋಸಂಬಿ ಮುಂತಾದ ಹಣ್ಣುಗಳನ್ನು ಹಾಗೂ ಇತರೇ ಕೃಷಿ ಧಾನ್ಯಗಳನ್ನು ಸಹ ರೈತರು ಅಂಚೆ ಮೂಲಕ ನೇರವಾಗಿ ಗ್ರಾಹಕರಿಗೆ ತಲುಪಿಸಬಹುದು.

ರೈತರು ತಾವು ಬೆಳೆದ ಹಣ್ಣು, ಹೂ, ತರಕಾರಿಗಳನ್ನು ನಿರ್ದಿಷ್ಟ ತೂಕದಲ್ಲಿ ಪ್ಯಾಕ್ ಮಾಡಿ ಬೇರೆ ಬೇರೆ ಜಿಲ್ಲೆ, ರಾಜ್ಯ, ದೇಶಗಳ ಗ್ರಾಹಕರನ್ನು ಪರಿಚಯಿಸಿಕೊಂಡು ನಿರಂತರವಾಗಿ ಅಂಚೆ ಮೂಲಕ ಸುರಕ್ಷಿತವಾಗಿ ನಿಗದಿತ ಸಮಯದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ನೇರವಾಗಿ ತಲುಪಿಸಿ ಉತ್ತಮ ಆದಾಯವನ್ನು ಗಳಿಸಬಹುದು.

ಅಂಚೆ ಮೂಲಕ ರೈತರು ತಮ್ಮ ಗುಣಮಟ್ಟದ ಉತ್ಪನ್ನಗಳನ್ನು ಹೇಗೆ ಕಳುಹಿಸಬೇಕು ? ಯಾವ ರೀತಿ ಪ್ಯಾಕ್ ಮಾಡಬೇಕು ?, ಎಲ್ಲಿ ನೋಂದಾಯಿಸಬೇಕು ? ಹಾಗೂ ತೋಟಗಾರಿಕೆ ಉತ್ಪನ್ನಗಳನ್ನು ಹೊರ ರಾಜ್ಯ, ಹೊರ ದೇಶಗಳಿಗೆ ಕಳುಹಿಸುವ ಬಗ್ಗೆ ಇರುವ ನಿಯಮ ಮತ್ತು ನಿರ್ಬಂಧನೆಗಳು ಯಾವುದು ?, ಈ ಬಗ್ಗೆ ಜಿಲ್ಲೆಯ ರೈತರಿಗೆ ಸೂಕ್ತ ಮಾಹಿತಿ ನೀಡುವುದರ ಜೊತೆಗೆ ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದೆ.



Downloaded From:www.kpscvaani.com



## ಅಪ್ಪಟ ಗಾಂಧಿವಾದಿ

# ಬೆಳಗಾವಿಯ ಶಿವಾಜಿ ಕಾಗ್ನೇಕರ್

**ಗಾಂಧಿ ಜಯಂತಿ ನಿಮಿತ್ತ ಗ್ರಾಮೀಣ ಜನರ ಒಳಿತಿಗಾಗಿ ಶ್ರಮಿಸುತ್ತಿರುವ ಅಪ್ಪಟ ಗಾಂಧಿವಾದಿ ಶಿವಾಜಿ ಕಾಗ್ನೇಕರ್ ಅವರ ಕುರಿತ ಲೇಖನವನ್ನು ಪ್ರಸ್ತುತ ಪಡಿಸಲಾಗಿದೆ.**

ಡಾ. ಎಸ್.ಬಿ. ಬಸೆಟ್ಟಿ

ಶಿವಾಜಿ ಛತ್ರಪ್ಪ ಕಾಗ್ನೇಕರ್ ಅವರು ಹುಟ್ಟಿನಿಂದ ಗಾಂಧಿವಾದಿ, ಪೂರ್ವನಿಯೋಜಿತವಾಗಿ ಅತ್ಯಂತ ಸಂವೇದನಾಶೀಲ ಶಿಕ್ಷಣ ತಜ್ಞ ಮತ್ತು ಆನುವಂಶಿಕ ಬಲವಂತದಿಂದ ನ್ಯಾಯವನ್ನು ಹುಡುಕುವ ಶಿವಾಜಿ ಕಾಗ್ನೇಕರ್ ಅವರು ಸಾಕ್ಷರತೆಯನ್ನು ಹರಡುತ್ತಿರುವ ವ್ಯಕ್ತಿಯಾಗಿದ್ದು, ಬೆಳಗಾವಿ ಸಮೀಪದ ಕಟ್ಟನಭಾವಿ ಗ್ರಾಮದ ನಾಗರಿಕರಿಗೆ ಪರಿಸರ ಸ್ನೇಹಿಯಾಗಿ ಬದುಕಲು ಶಕ್ತಿ ತುಂಬುತ್ತಿದ್ದಾರೆ.

ಮಹಾತ್ಮಗಾಂಧೀಜಿಯವರ ತತ್ವ ಚಿಂತನೆಯನ್ನು ಪ್ರತಿಪಾದಿಸುವವರು ಇದ್ದರೆ ಮತ್ತೆ ಕೆಲವರು ಅವರಂತೆ ಬದುಕು ನಡೆಸುತ್ತಾರೆ. ಶಿವಾಜಿ ಕಾಗ್ನೇಕರ್‌ರವರು ಗಾಂಧಿ ಅವರಂತೆ ಬದುಕು ನಡೆಸುವವರು. ಕರ್ನಾಟಕದ ಬೆಳಗಾವಿ ಜಿಲ್ಲೆಯ ಖಾನಾಪುರ, ಬೆಳಗಾವಿ ಮತ್ತು ಹುಕ್ಕೇರಿ ತಾಲ್ಲೂಕುಗಳಲ್ಲಿ ಅರಣ್ಯದ ಅಂಚಿನಲ್ಲಿರುವ ಹಳ್ಳಿಗಳ ಜೀವನವು ಉತ್ತಮವಾಗಿ ಬದಲಾಗಿದೆ.



Downloaded From:www.kpscvaani.com





**ಯಾರು ಈ ಶಿವಾಜಿ ಕಾಗ್ನೇಕರ್?**

ಶಿವಾಜಿ ಛತ್ರಪ್ಪ ಕಾಗ್ನೇಕರ್ ಅವರು ಹುಟ್ಟೂರು ಬೆಳಗಾವಿಯಿಂದ 22 ಕಿಮೀ ದೂರದಲ್ಲಿರುವ ಕಟ್ಟಣಭಾವಿ. ಈಗಲೂ ಶಿವಾಜಿ ಕಾಗ್ನೇಕರ್ ಅವರು ಖಾದಿ ಶರ್ಟ್, ಖಾದಿ ಚಡ್ಡಿ ಮತ್ತು ಗಾಂಧಿ ಟೋಪಿ ಧರಿಸಿ ಸೈಕಲ್‌ನಲ್ಲಿ ಹೋಗುವುದನ್ನು ಕಾಣಬಹುದು. ಸದಾ ಕಾಡಂಚಿನ ಗ್ರಾಮಗಳಲ್ಲಿ ಸಂಚರಿಸುವ ಶಿವಾಜಿ ಅವರು ಯಾವುದೇ ಸ್ವಾರ್ಥವಿಲ್ಲದೇ ಪರಿಸರ ಸೇವೆಯಲ್ಲಿ ತಮ್ಮನ್ನು ತೊಡಗಿಕೊಂಡಿದ್ದಾರೆ.

ಅವರು ಬೆಳಗಾವಿ ಜಿಲ್ಲೆಯ ಕಟ್ಟಣಭಾವಿಯಲ್ಲಿನ ಕುರುಬ ಜನಾಂಗದ ಬಡ ಭೂರಹಿತ ಕುಟುಂಬವೊಂದರಲ್ಲಿ ಮಾರ್ಚ್ 1, 1974 ರಂದು ಜನಿಸಿದರು. ಶಿವಾಜಿ ಕಾಗ್ನೇಕರ್ ಅವರ ಬಾಲ್ಯವು ಕಷ್ಟಕರವಾಗಿತ್ತು. ಬಾಲ್ಯದಿಂದಲೂ ತಾರತಮ್ಯವನ್ನು ಅನುಭವಿಸಿದವರು. ಏಕೆಂದರೆ ಅವರು ಕೆಳಜಾತಿಯವರಾಗಿದ್ದರು. ಅವರು ತಮ್ಮ ಕುಟುಂಬವನ್ನು ಪೋಷಿಸಲು ಶಾಲೆ ಮತ್ತು ಕಾಲೇಜು ದಿನಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿದರು.

ಬಿಎಸ್‌ಸಿ ವಿದ್ಯಾರ್ಥಿಯಾಗಿದ್ದಾಗಲೇ ಶಿವಾಜಿ ಕಾಗ್ನೇಕರ್‌ರವರು ತಳಮಟ್ಟದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಶಿವಾಜಿ ಅವರಿಗೆ ಮಹಾತ್ಮ ಗಾಂಧೀಜಿ ಮತ್ತು ವಿನೋಬಾ ಭಾವೆ ರೋಲ್ ಮಾಡೆಲ್ ಆಗಿದ್ದರು. ಬಿಎಸ್‌ಸಿ ಮುಗಿಸಿದ ನಂತರ ಪವರ್ ಸಪ್ಲೇ ಯೂನಿಟ್‌ನಲ್ಲಿ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಆದರೆ ಅವರ ಕರೆ ಬೇರೆಯೇ ಆಗಿತ್ತು. ಪುಣೆ ಮೂಲದ ಗಾಂಧಿವಾದಿ ಮತ್ತು ಸರ್ವೋದಯ ಕಾರ್ಯಕರ್ತ ಸಾನೆ ಗುರೂಜಿಯಿಂದ ಪ್ರಭಾವಿತರಾದ ಅವರು ಗುರೂಜಿ ಮತ್ತು ವಿನೋಬಾ ಭಾವೆ ಅವರನ್ನು ಭೇಟಿ ಮಾಡಲು ಮಹಾರಾಷ್ಟ್ರಕ್ಕೆ ಪ್ರಯಾಣ ಬೆಳೆಸಿದರು. ಮತ್ತೆ ಬೆಳಗಾವಿಯಲ್ಲಿ ಶ್ರೀರಂಗ್ ಕಾಮತ್, ಸದಾಶಿವರಾವ್ ಭೋಸ್ಲೆ ಮತ್ತು ರಾಮ್ ಆಪ್ಟೆ ಸೇರಿದಂತೆ ಸಮಾಜ ಸೇವಕರ ಗುಂಪನ್ನು ಸೇರಿಕೊಂಡು ಕೆಲಸಕ್ಕೆ ಇಳಿದರು. ಸಾನೆ ಗೂರುಜಿ, ಜಯಪ್ರಕಾಶ್ ನಾರಾಯಣ, ಅಣ್ಣಾ ಹಜಾರೆಯಂಥವರಿಂದ ಪ್ರೇರಣೆಗೊಂಡು, ವಿವಾಹ ಬಂಧನದಲ್ಲಿ ಸಿಲುಕಿಕೊಳ್ಳದೆ ತಮ್ಮ ಜೀವನವನ್ನು ಕೇವಲ ಸಮಾಜ ಸೇವೆಗೆ ಮುಡಿಪಾಗಿಟ್ಟಿದ್ದಾರೆ.

ಮಹಾತ್ಮಾ ಗಾಂಧಿ ಮತ್ತು ವಿನೋಬಾ ಭಾವೆ ಅವರಿಂದ ಪ್ರೇರಿತರಾದ ಶಿವಾಜಿ ಕಾಗ್ನೇಕರ್ ಅವರು ತಾವು ಕೆಲಸ ಮಾಡುತ್ತಿದ್ದ ಹಳ್ಳಿಯ ಭಾಗವಾಗಲು ಮತ್ತು ಅದನ್ನು ತಮ್ಮ ಮನೆ ಎಂದು ಪರಿಗಣಿಸಲು ಪ್ರಾರಂಭಿಸಿದರು. ಆ ದಿನಗಳಲ್ಲಿ, ಈ ಹಳ್ಳಿಗಳು ಬಡತನ, ಅನಕ್ಷರತೆ ಮತ್ತು ಇತರ ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಂದ ಕೂಡಿದ್ದವು. ಕೆಲವೇ ಜನರು ಜಮೀನು ಹೊಂದಿದ್ದರೆ, ಇತರರು ಕೂಲಿ ಕೆಲಸ ಮಾಡುತ್ತಿದ್ದರು. ಕೃಷಿ ವಿಧಾನಗಳು ಅಲ್ಪಾವಧಿಯ ಲಾಭವನ್ನು ಮಾತ್ರ ಗುರಿಯಾಗಿಸಿಕೊಂಡಿದ್ದವು. ಹಾಗಾಗಿ ಅರಣ್ಯ ಉತ್ಪನ್ನಗಳ ಮೇಲಿನ ಅತಿಯಾದ ಅವಲಂಬನೆಯು ಅರಣ್ಯದ ಅವನತಿಗೆ ಕಾರಣವಾಯಿತು. ಅರಣ್ಯ ನಾಶವು ಹಳ್ಳಿಗಳಲ್ಲಿ ನೀರಿನ ಲಭ್ಯತೆ ಮತ್ತು ಮಣ್ಣಿನ ಗುಣಮಟ್ಟದ ಮೇಲೆ ಪರಿಣಾಮ ಬೀರಲಾರಂಭಿಸಿತು. ಶಿವಾಜಿ



Downloaded From:www.kpscvaani.com

ಕಾಗ್ನೇಕರ್‌ರವರು ಹಳ್ಳಿಯಿಂದ ಹಳ್ಳಿಗೆ ತೆರಳಿ ನೈಸರ್ಗಿಕ ಸಂಪನ್ಮೂಲಗಳ ಸರಿಯಾದ ನಿರ್ವಹಣೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಬೆಳಗಾವಿ ಜಿಲ್ಲಾ ಖಾದಿ ಸಂಘದ ನೇತೃತ್ವ ವಹಿಸಿದ್ದ ಕಾಮತ್ ಅವರು ಗೋಬರ್ ಗ್ಯಾಸ್ ಟೆಕ್ನೀಷಿಯನ್ ಕೆಲಸ ಕೊಡಿಸಿದರು. ಶಿವಾಜಿ ಕಾಗ್ನೇಕರ್‌ರವರು ಎಷ್ಟು ಚನ್ನಾಗಿ ಕೆಲಸ ಮಾಡಿದರು ಎಂದರೆ ಐದು ವರ್ಷದೊಳಗೆ ಕಟ್ಟಣಭಾವಿ ಮತ್ತು ನಾಗೇನಹಟ್ಟಿ ಕಡೋಲಿ ಸುತ್ತಮುತ್ತಲಿನ ಹಲವಾರು ಮನೆಗಳಲ್ಲಿ ಈಗ ಕಂಡುಬರುವ ಗೋಬರ್-ಬಯೋ ಗ್ಯಾಸ್ ಪ್ಲಾಂಟ್‌ಗಳನ್ನು ಪರಿಚಯಿಸುವಲ್ಲಿ ಅವರು ವೇಗವರ್ಧಕ ಪಾತ್ರವನ್ನು ವಹಿಸಿದರು. ಆರಂಭದ ದಿನಗಳಲ್ಲಿ ಗೋಬರ್ ಗ್ಯಾಸ್ ಬಳಕೆ ಬಗ್ಗೆ ತಿಳಿಸಲು ಹೋದಾಗ ಜನರು ಇವರ ಮೇಲೆಯೇ ಸಗಣಿ ನೀರು ಎರಚಿದ್ದರಂತೆ. ಯಾವುದನ್ನು ಲೆಕ್ಕಿಸದೇ ಇಂದು ಸಹ ಜಾಗೃತಿ ಮೂಡಿಸುತ್ತಿದ್ದಾರೆ. ಗ್ರಾಮಗಳಲ್ಲಿ ಅರ್ಧದಷ್ಟು ಕುಟುಂಬಗಳು ಗೋಬರ್ ಗ್ಯಾಸ್ ಪ್ಲಾಂಟ್‌ಗಳನ್ನು ದತ್ತು ಪಡೆದಿವೆ.

ಇದಲ್ಲದೆ, ಇವರ ಮದ್ಯಪಾನದ ವಿರುದ್ಧದ ಅಭಿಯಾನಗಳು, ಜೀವವೈವಿಧ್ಯದ ಸಂರಕ್ಷಣೆ, ಅಭಿವೃದ್ಧಿ ಮತ್ತು ಗ್ರಾಮಸ್ಥರಲ್ಲಿ ಸ್ವಯಂಸೇವಾ ಭಾವನೆಯನ್ನು ಪ್ರಚೋದಿಸಿತು. ಎಲ್ಲಕ್ಕಿಂತ ಹೆಚ್ಚಾಗಿ, ಭೋಸ್ಲಾಲೆಯವರೊಂದಿಗೆ, ಅವರು ಈಗಲೂ ಕೆಲವು ಹಳ್ಳಿಗಳಲ್ಲಿ ಕನಿಷ್ಠ ಗಾಂಧಿ ಮೌಲ್ಯಗಳನ್ನು ಉಳಿಸಿಕೊಂಡಿದ್ದಾರೆ.

ಗ್ರಾಮಗಳ ಬಾವಿಯು ಬೇಸಿಗೆಯಲ್ಲಿ ಬತ್ತಿ ಹೋಗುತ್ತಿತ್ತು. ಆಗ ಜನರು ಪಡಿತರ ಆಧಾರದ ಮೇಲೆ ನೀರು ಪಡೆಯುತ್ತಿದ್ದರು. ಏಣಿ ಬಳಸಿ ಬಾವಿಗೆ ಇಳಿದು ಕೈಯಿಂದ ನೀರು ತುಂಬುತ್ತಿದ್ದರು. ಗ್ರಾಮದಲ್ಲಿ ಯಾವುದೇ ಉದ್ಯೋಗ ಮತ್ತು ಕೃಷಿ ಚಟುವಟಿಕೆಯಿಲ್ಲದೆ ಪ್ರತಿಯೊಬ್ಬರೂ ಲೇವಾದೇವಿದಾರರ ಮೇಲೆ ಅವಲಂಬಿತರಾಗಿದ್ದರಲ್ಲದೆ ಅನೇಕರು ಮದ್ಯದ ವ್ಯಸನಿಯಾಗಿದ್ದರು. ಅನೇಕರು ತಮ್ಮ ಸಾಲವನ್ನು ತೀರಿಸಲು ಬಂಧಿತ ಕಾರ್ಮಿಕರಾಗಿಯೂ ಕೆಲಸ ಮಾಡುತ್ತಿದ್ದರು. ಕಳೆದ ಮೂವತ್ತು ವರ್ಷಗಳ ಬದ್ಧತೆ ಮತ್ತು ದೃಢತೆಯಿಂದಾಗಿಯೇ ಕಟ್ಟನಬಾವಿ, ಬಾಂಬರ್ಗೆ ಸುತ್ತಮುತ್ತಲಿನ ಗ್ರಾಮಗಳು ಈಗ ನೀರು ಮತ್ತು ಇತರ ಸಂಪನ್ಮೂಲಗಳ ವಿಷಯದಲ್ಲಿ ಸ್ವಾವಲಂಬಿಯಾಗಿವೆ.

ಈ ವೇಳೆ ಶಿವಾಜಿ ಕಾಗ್ನೇಕರ್ ಅವರು ರಾಮ್ ಆಪ್ಟೆ, ಸದಾಶಿವರಾವ್ ಭೋಸಲೆ ಅವರೊಂದಿಗೆ ಸಭೆ ನಡೆಸಿ, ನೀರು ಕೊಯ್ಲಿನ ಮಹತ್ವದೊಂದಿಗೆ ಗ್ರಾಮಸ್ಥರನ್ನು ಈ ಅಪಾಯದಿಂದ ಹೊರಬರಲು ಏನು ಮಾಡಬಹುದು ಮತ್ತು ನೀರಿನ ನಿರ್ವಹಣೆಯು ಒಂದು ದಿನ ಅವರ ಎಲ್ಲಾ ಕನಸುಗಳನ್ನು ಹೇಗೆ ಈಡೇರಿಸುತ್ತದೆ ಎಂಬುದನ್ನು ವಿವರಿಸಿದರು.


ಈ ಚಟುವಟಿಕೆಯಲ್ಲಿ ಅವರಿಗೆ ಸಹಾಯ ಮಾಡುತಿದ್ದ ಜನ ಜಾಗರಣ ಸ್ವಯಂ ಸೇವಾಸಂಸ್ಥೆಯವರು ಕೆಲವು ಗ್ರಾಮಸ್ಥರನ್ನು ಅಹ್ಮದನಗರದ ಅಣ್ಣಾ ಹಜಾರೆ ಅವರ ಗ್ರಾಮ ರಾಲೇಗಾನ್ ಸಿದ್ಧಿಗೆ ಕರೆದೊಯ್ದರು. ರಾಲೇಗಾನ್ ಸಿದ್ಧಿಯ ಪರಿಸ್ಥಿತಿಯು ಕಟ್ಟಣಭಾವಿಯಂತೆಯೇ ಇತ್ತು. ರಾಲೇಗಾನ್ ಸಿದ್ಧಿ ಗ್ರಾಮವನ್ನು ಮಾದರಿಯಾಗಿಟ್ಟುಕೊಂಡು ಇಲ್ಲಿಯೂ ಕೆಲಸ ಮಾಡಬೇಕು ಎಂಬ ಚಿಂತನೆ ನಡೆಸಲಾಯಿತು. ಹಾಗಾಗಿ ಸರ್ಕಾರಿ ಭೂಮಿಯಲ್ಲಿ ಬೃಹತ್ ತೋಟವನ್ನು ಕೈಗೆತ್ತಿಕೊಳ್ಳಲಾಯಿತು. ಸ್ಥಳೀಯ ವಿಧಾನಗಳನ್ನು ಬಳಸಿಕೊಂಡು ಹಳ್ಳಿಯ ಪಕ್ಕದಲ್ಲಿ ಕಂದಕಗಳನ್ನು ಅಗೆಯಲಾಯಿತು. ಜನ ಜಾಗರಣ್ ಸೇವಾಸಂಸ್ಥೆಯ ಆರ್ಥಿಕ ಸಹಾಯದಲ್ಲಿ ಸುಮಾರು 1 ಲಕ್ಷ ಮರಗಳನ್ನು ಕಂದಕಗಳಲ್ಲಿ ಬೆಳೆಸಲಾಯಿತು. ಕಾಲಕ್ರಮೇಣ ಗ್ರಾಮದಲ್ಲಿದ್ದ ಏಕೈಕ ಬಾವಿಯಲ್ಲಿ ನೀರನ್ನು ಮರಳಿ ಪಡೆಯಲು ಸಾಧ್ಯವಾಯಿತಲ್ಲದೆ, ಸುತ್ತಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟವು ಹೆಚ್ಚಾಯಿತು.







Downloaded From:www.kpscvaani.com



ನೀರನ್ನು ಸಂಗ್ರಹಿಸಲು ಸಣ್ಣ-ಸಣ್ಣ ಚೆಕ್ ಡ್ಯಾಂಮ್‌ಗಳನ್ನು ನಿರ್ಮಿಸಲಾಗಿದೆ. ಇದು ಅಂತರ್ಜಲ ಮಟ್ಟವನ್ನು ಮರುಪಡೆಯಲು ಸಹಾಯ ಮಾಡುತ್ತಿದೆ. ಬಾವಿಯ ಸಮೀಪವಿರುವ ಒಂದು ಕೊಳದಲ್ಲಿ ಈಗ ವರ್ಷವಿಡೀ ನೀರಿರುವುದರಿಂದ ಜಾನುವಾರುಗಳ ಬಾಯಾರಿಕೆಯನ್ನು ತಣಿಸುತ್ತಿದೆ. ಮರ-ಗಿಡಗಳು ಹೆಚ್ಚಾದ್ದರಿಂದ ಅನೇಕ ಜಾತಿಯ ಪಕ್ಷಿಗಳಿಗೆ ಇಲ್ಲಿ ಆಸರೆ ಸಿಕ್ಕಂತಾಗಿದೆ. ಉತ್ತಮವಾದ ಹುಲ್ಲುಗಾವಲುಗಳು ಮತ್ತು ನೀರಿನ ಲಭ್ಯತೆಯಿಂದಾಗಿ ಉತ್ತಮ ಕೃಷಿ ಚಟುವಟಿಕೆಯೊಂದಿಗೆ ಗ್ರಾಮಸ್ಥರು ಲೇವಾದೇವಿದಾರರ ಕೈಯಿಂದ ಹೊರಬರುವಂತಾಯಿತು. ಪ್ರತಿಯೊಂದು ಕುಟುಂಬವು ದನ-ಹಸುಗಳನ್ನು ಹೊಂದಿರುವುದರಿಂದ ಹಾಲಿನ ಸಹಕಾರ ಸಂಘಗಳು ಕಾರ್ಯಾರಂಭಗೊಂಡಿವೆ.

ಶಿವಾಜಿ ಕಾಗ್ನೇಕರ್ ಅವರು ನಂತರ ನಿಂಗೇನಹಟ್ಟಿ ಗ್ರಾಮವನ್ನು ಮೇಲ್ದರ್ಜೆಗೇರಿಸಲು ಇದೇ ಮಾರ್ಗದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಈಗಾಗಲೇ ಅಲ್ಲಿ 3 ಕೆರೆಗಳ ಹೂಳೆತ್ತಲಾಗಿದ್ದು, 1 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ದಶಕದ ಹಿಂದೆ ಬಂಜರು ಭೂಮಿಯಾಗಿದ್ದ ನಿಗೇನಹಟ್ಟಿ ಈಗ ಸಂಪೂರ್ಣ ವಿವಿಧ ಹಣ್ಣುಗಳ ಮರಗಳಿಂದ ತುಂಬಿದ್ದು, ಕೃಷಿ ಚಟುವಟಿಕೆಯೂ ಸಂವೃದ್ಧಿಯಾಗಿ ನಡೆದಿದೆ.

ಶಿವಾಜಿ ಕಾಗ್ನೇಕರ್ ಅವರು ತಮ್ಮ ಸರಳ ಚಿಂತನೆಗಳು ಮತ್ತು ಆಚರಣೆಗಳೊಂದಿಗೆ ಈ ಎಲ್ಲಾ ಗ್ರಾಮಗಳ ಭವಿಷ್ಯವನ್ನು ಬದಲಾಯಿಸಿದ್ದಾರೆ. ಮತ್ತು ಇಂದಿಗೂ ಅವರು ಅದೇ ಧ್ಯೇಯದಲ್ಲಿ ಪರಿಸರ ಸಂರಕ್ಷಣೆ ಏಕೆ ಬಹಳ ಮುಖ್ಯ ಎಂದು ಯುವಜನರಿಗೆ ತಿಳಿಸುತ್ತಿದ್ದಾರೆ. ಅವರು ಕಾರ್ಮಿಕರ ಉನ್ನತಿಗಾಗಿ ಶ್ರಮಿಸಿದ್ದಾರೆ ಮತ್ತು ಸಾವಯವ ಕೃಷಿಯ ಮಹತ್ವವನ್ನು ಹರಡಿದ್ದಾರೆ. ಅವರು ವಿವಿಧ ಸ್ಥಳಗಳಲ್ಲಿ ಜಲಾನಯನ ಅಭಿವೃದ್ಧಿಗೆ ಉತ್ತೇಜನ ನೀಡಲಾಗಿ, ನೀರಿನ ಕೊರತೆಯ ಗ್ರಾಮವಾಗಿದ್ದ ಕಟ್ಟಣಭಾವಿಯಲ್ಲಿ ಈಗ ಮೂರು ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹನ್ನೆರಡು ವರ್ಷಗಳ ಕಾಲ 'ಹೋಲ್ಡ್ ವಾಟರ್ ಅಂಡ್ ಸಿಂಕ್ ವಾಟರ್' ಕಾರ್ಯಕ್ರಮವನ್ನು ಕೈಗೆತ್ತಿಕೊಂಡು ಅನೇಕ ಬಾವಿಗಳಿಗೆ ಜೀವ ತುಂಬಿದ್ದಾರೆ.

ಶಿವಾಜಿ ಕಾಗ್ನೇಕರ್ ಅವರು ಗ್ರಾಮಸ್ಥರನ್ನು ತೊಡಗಿಸಿಕೊಂಡು ಶ್ರಮದಾನದ ಮೂಲಕ ಲಕ್ಷಾಂತರ ಮರಗಳನ್ನು ನೆಡಿಸಿದ್ದಾರಲ್ಲದೆ, ನೀರಿನ ಮಟ್ಟ ಕ್ಷೀಣಿಸಿದ ಕೆರೆಗಳನ್ನು ನೀರು ಕೊಯ್ಲು ಮೂಲಕ ಪುನರುಜ್ಜೀವನಗೊಳಿಸಿದರು. ರಸ್ತೆಗಳ ಶುಚಿಗೊಳಿಸುವಿಕೆ, ಗೋಬರ್ ಗ್ಯಾಸ್ ಸ್ಥಾವರಗಳ ನಿರ್ಮಾಣ, ಡೈರಿ ಚಟುವಟಿಕೆ ಮತ್ತು ಮೈಕ್ರೋ ಫೈನಾನ್ಸ್ ವ್ಯವಸ್ಥೆ ಇತ್ಯಾದಿಗಳನ್ನು ಸ್ಥಾಪಿಸಲು ಸಹಾಯ ಮಾಡಿದರು.

ವಯಸ್ಕ ಶಿಕ್ಷಣ ಕಾರ್ಯಕ್ರಮದ ಸ್ವಯಂಸೇವಕರಾಗಿ, ಅವರು ಮಹಿಳೆಯರು ಮತ್ತು ಕೃಷಿ ಕಾರ್ಮಿಕರಿಗಾಗಿ ನೂರಾರು ಸಾಕ್ಷರತಾ ಕೇಂದ್ರಗಳು ಮತ್ತು ಸಂಜೆ ಶಾಲೆಗಳನ್ನು ತೆರೆದರು. ಒಂದು ಕಾಲದಲ್ಲಿ ಕಟ್ಟಣಭಾವಿ ಗ್ರಾಮವು ಹೆಚ್ಚಿನ ಅನಕ್ಷರತೆಯನ್ನು ಹೊಂದಿತ್ತು ಆದರೆ ಈಗ ಇಲ್ಲಿ ಅಂಗನವಾಡಿಯಿಂದ 7 ನೇ ತರಗತಿಯವರೆಗೆ ಪ್ರಾಥಮಿಕ ಶಾಲೆಯನ್ನು ಮತ್ತು ರಾತ್ರಿ ಶಾಲೆಯನ್ನು ಸಹ ಹೊಂದಿದೆ.

ಭೂಮಿ, ಜಲ, ವಾಯು ಮಲಿನದಿಂದಾಗಿ ನಾವೆಲ್ಲರೂ ವಿಷಾಹಾರ ಸೇವನೆ ಮಾಡುತ್ತಿದ್ದೇವೆ. ಹಾಗಾಗಿ ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಪರಿಸರ ವಿಚಾರದಲ್ಲಿ ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಶಿವಾಜಿ ಅವರು ಸಲಹೆ ನೀಡುತ್ತಾರೆ.

**'ಶಾಶ್ವತ ವಿಳಾಸವಿಲ್ಲ, ಸ್ವಂತ ಮನೆ, ವಾಹನ, ಫೋನ್ ಇಲ್ಲ:**

ಬೆಳಗಾವಿ ಜಿಲ್ಲೆಯ ಕಟ್ಟಣಭಾವಿಯ ನಿವಾಸಿಯಾಗಿರುವ ಶಿವಾಜಿ ಛತ್ರಪ್ಪ ಕಾಗ್ನೇಕರ್ ಅವರಿಗೆ ಸ್ವಂತ ಮನೆ ಇಲ್ಲ. ಅವರು ಮೊಬೈಲ್ ಸಹ ಬಳಸಲ್ಲ. ಅವರಿಗೆ ಫೋನ್ ಅಥವಾ ಶಾಶ್ವತ ವಿಳಾಸವಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಯಾರನ್ನಾದರು ಸಂಪರ್ಕಿಸಬೇಕಿದ್ದಲ್ಲಿ ಅವರು ಇತರರ ಫೋನ್ ಅನ್ನು ಬಳಸುತ್ತಾರೆ. ಅವರು ಒಂದು ಊರಿನಿಂದ ಮತ್ತೊಂದು ಊರಿಗೆ ಚಲಿಸುತ್ತಲೇ ಇರುವುದರಿಂದ ಅವರನ್ನು ಹುಡುಕುವುದು ಕಷ್ಟ. ಏಕೆಂದರೆ ಪ್ರತಿ ಹಳ್ಳಿಯಲ್ಲೂ ಅವರಿಗೆ ಕೆಲಸವಿರುತ್ತದೆ ಎಂದು ಜಾಗೃತ ಮಹಿಳಾ ಒಕ್ಕೂಟದ ಶರದ್ ಗೋಪಾಲ್ ಹೇಳುತ್ತಾರೆ.

ಆದರೆ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು ಐದು ದಶಕಗಳಿಂದ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಈ ಸಮಾಜ ಸೇವಕರಿಗೆ ಪ್ರತಿ ಸ್ಥಳವೂ ನೆಲೆಯಾಗಿದೆ. ಅವರು ತಮ್ಮ ಜೀವನ ಶಿಕ್ಷಣ ಪ್ರತಿಷ್ಠಾನದ ಮೂಲಕ 14 ಕಲಿಕಾ ಕೇಂದ್ರಗಳನ್ನು (ಶಿಕ್ಷಣ ಕೇಂದ್ರಗಳು) ನಡೆಸುತ್ತಿದ್ದಾರೆ. 1 ರಿಂದ 7 ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಜೆ 5.30 ರಿಂದ 8 ರವರೆಗೆ ಹೆಚ್ಚುವರಿ ಕೋಚಿಂಗ್ ತರಗತಿಗಳನ್ನು ನಡೆಸುತ್ತಿದ್ದು, ಗ್ರಾಮೀಣ ಭಾಗದ ಎಲ್ಲಾ ಸಮುದಾಯದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ಶಿಕ್ಷಣವನ್ನು ಪಡೆಯುತ್ತಾರೆ.

ಎಪ್ಪತ್ತನಾಲ್ಕನೇ ವರ್ಷಕ್ಕೆ ಕಾಲಿಟ್ಟಿರುವ ಶಿವಾಜಿ ಕಾಗ್ನೇಕರ್ ಅವರು ಈಗಲೂ ಪ್ರಸ್ತುತ MNREGA ಕಾರ್ಯಕರ್ತರನ್ನು ಸಂಘಟಿಸಲು ಹೆಚ್ಚಿನ ಸಮಯವನ್ನು ಕಳೆಯುತ್ತಾರೆ. ಮಹಾತ್ಮಾ ಗಾಂಧಿಯವರ "ನೀವು ನೋಡಬಯಸುವ ಬದಲಾವಣೆ ನೀನೆ ಆಗು" ಎಂಬ ಧ್ಯೇಯವಾಕ್ಯದಿಂದ ಪ್ರೇರಿತರಾದ ಅಣ್ಣಾ ಹಜಾರೆಯವರು ಮಹಾರಾಷ್ಟ್ರದ ರಾಲೇಗಾನ್ ಸಿದ್ಧಿಯನ್ನು ಬದಲಿಸಿದ ಪ್ರಯತ್ನಗಳಿಂದ ಶಿವಾಜಿ ಕಾಗ್ನೇಕರ್ ಹಿಂತಿರುಗಿ ನೋಡಲಿಲ್ಲ. ಅವರ ಪ್ರಯತ್ನಗಳು ಸಾವಿರಾರು ಹಳ್ಳಿಗರನ್ನು ಸಬಲೀಕರಣಗೊಳಿಸಲು ಸಹಾಯ ಮಾಡಿದೆ. ಅವರು ಮಿತವ್ಯಯದ ಜೀವನ ಮತ್ತು ಸರಳತೆಯ ಗಾಂಧಿ ತತ್ವಗಳನ್ನು ನಂಬುತ್ತಾರೆ ಮತ್ತು ಅದರಂತೆ ನಡೆಯುತ್ತಿದ್ದಾರೆ. ■



Downloaded From:www.kpscvaani.com

# ಮುಖ್ಯಮಂತ್ರಿಗಳ ಅಧಿಕೃತ
# ವಾಟ್ಸಾಪ್ ಚಾನೆಲ್



ನಮ್ಮ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಟ್ಸಾಪ್ ಚಾನೆಲ್ ಅನ್ನು ಆರಂಭಿಸುವ ಮೂಲಕ ಜನಸಂಪರ್ಕ ಸಾಧನೆಯ ನಿಟ್ಟಿನಲ್ಲಿ ಮುಂದಡಿಯಿಟ್ಟಿದ್ದಾರೆ.

ಇತ್ತೀಚೆಗಷ್ಟೇ ವಾಟ್ಸಾಪ್ ಚಾನೆಲ್ ಎಂಬ ಹೊಸ ಫೀಚರ್ ಅನ್ನು ವಾಟ್ಸಾಪ್ ಪರಿಚಯಿಸಿದ್ದು, ಸೆಪ್ಟೆಂಬರ್ 12 ರಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಟ್ಸಾಪ್ ಚಾನೆಲ್ ಆರಂಭಿಸಿದ್ದಾರೆ. ಅಕ್ಟೋಬರ್ 24 ರ ತನಕ ಅವರು 90,000 ಕ್ಕೂ ಅಧಿಕ Subscribers ಅನ್ನು ಹೊಂದಿದ್ದಾರೆ. ಇಡೀ ದೇಶದ ಇತರೆ ರಾಜ್ಯಗಳ ಮುಖ್ಯಮಂತ್ರಿಗಳ ಪೈಕಿ ವಾಟ್ಸಾಪ್ ಚಾನೆಲ್ ಆರಂಭಿಸಿದವರಲ್ಲಿ ಸಿದ್ದರಾಮಯ್ಯ ಅವರು ಮೊದಲಿಗರಾಗಿದ್ದಾರೆ.

ಈ ಹೊಸ ಫೀಚರ್‌ನಲ್ಲಿ ಎಲ್ಲರಿಗೂ ಚಾನೆಲ್ ಅನ್ನು ಆರಂಭಿಸಲು ಅವಕಾಶ ಕಲ್ಪಿಸಲಾಗಿಲ್ಲ. ಕೇವಲ ಸೆಲೆಬ್ರಿಟಿಗಳು, ರಾಜಕಾರಣಿಗಳು, ಪ್ರತಿಷ್ಠಿತ ಕಂಪನಿಗಳು, ಕ್ರೀಡಾ ತಂಡಗಳು ಇವೇ ಮುಂತಾದವರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಈ ಚಾನಲ್‌ಗೆ ಕೋಟಿಯಷ್ಟು ಜನರು Subscribe ಆಗಬಹುದು. ಇಷ್ಟು ದಿನ ಜನರು ಫೇಸ್ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್‌ನಲ್ಲಿ ಸೆಲೆಬ್ರಿಟಿಗಳ ಅಪ್‌ಡೇಟ್ಸ್ ತಿಳಿದುಕೊಳ್ಳಲು ಅವರನ್ನು ಫಾಲೋ ಮಾಡುತಿದ್ದರು. ಆದರೆ ಈಗ ಇನ್ನು ಮುಂದೆ ಈ ವಾಟ್ಸಾಪ್ ಚಾನೆಲ್ ಮೂಲಕ ತಮ್ಮ ನೆಚ್ಚಿನ ಸೆಲೆಬ್ರಿಟಿಗಳ ಅಪ್‌ಡೇಟ್‌ಗಳನ್ನು ತಿಳಿದುಕೊಳ್ಳಬಹುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಅವಕಾಶವನ್ನು ಬಳಸಿಕೊಂಡು ಜನರಿಗೆ ಬೆರಳ ತುದಿಯಲ್ಲಿ ಸರ್ಕಾರದ ದೈನಂದಿನ ಆಗುಹೋಗುಗಳ ಮಾಹಿತಿ ಒದಗಿಸಿ, ಆಡಳಿತವನ್ನು ಮತ್ತಷ್ಟು ಪಾರದರ್ಶಕವಾಗಿಸಲು Chief Minister of Karnataka ಎಂಬ ಹೆಸರಿನ ವಾಟ್ಸಾಪ್ ಚಾನೆಲ್ ಅನ್ನು ಕಾರ್ಯಾರಂಭ ಮಾಡಿದ್ದಾರೆ.

ವಾಟ್ಸಾಪ್‌ನ ಚಾನೆಲ್ ಸೆಕ್ಷನ್‌ನಲ್ಲಿ Chief Minister of Karnataka ಎಂದು ಸರ್ಚ್ ಮಾಡುವ ಮೂಲಕ ಮುಖ್ಯಮಂತ್ರಿಗಳ ಅಧಿಕೃತ ಈ ಚಾನೆಲ್ ಅನ್ನು Subscribe ಮಾಡಬಹುದಾಗಿದೆ. ಆ ಮೂಲಕ ಸರ್ಕಾರದ ದೈನಂದಿನ ಕಾರ್ಯ ಚಟುವಟಿಕೆಗಳು, ಸರ್ಕಾರದ ಸಾಧನೆಗಳು, ಹಾಗೂ ನೂತನ ಕಾರ್ಯಕ್ರಮಗಳ ಬಗ್ಗೆ ನಿರಂತರವಾಗಿ ಮಾಹಿತಿಯನ್ನು ಪಡೆಯಬಹುದು. ಹಾಗಾಗಿ ಎಲ್ಲರೂ ಮುಖ್ಯಮಂತ್ರಿಗಳ ಅಧಿಕೃತ ಈ ವಾಟ್ಸಾಪ್ ಚಾನೆಲ್‌ಗೆ ಖಣಛಭಿಡಿಉಭಜ ಆಗುವ ಮೂಲಕ ಮುಖ್ಯಮಂತ್ರಿ ಅವರೊಂದಿಗೆ ನೇರವಾಗಿ ಸಂಪರ್ಕದಲ್ಲಿರಬಹುದು.



Downloaded From:www.kpscvaani.com




# ದೇಶದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿ

**ಅಂಚೆ ಇಲಾಖೆಯು ಬೆಂಗಳೂರಿನಲ್ಲಿ ಭಾರತದ ಮೊದಲ 3ಡಿ ಮುದ್ರಿತ ಸರ್ಕಾರಿ ಕಟ್ಟಡವನ್ನು ನಿರ್ಮಿಸಿ ದಾಖಲೆಗೆ ಪಾತ್ರವಾಗಿದೆ**

ಮುನಿರಾಜ. ಎಂ

ಹಲಸೂರು ಸಮೀಪದ ಕೇಂಬ್ರಿಡ್ಜ್ ಲೇಔಟ್‌ನಲ್ಲಿ ನಿರ್ಮಿಸಲಾಗಿರುವ ದೇಶದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿಯನ್ನು ಆಗಸ್ಟ್ 18 ರಂದು ಕೇಂದ್ರ ರೈಲ್ವೆ ಸಂವಹನ–ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರಾದ ಅಶ್ವಿನಿ ವೈಷ್ಣವ್ ಅವರು ಲೋಕಾರ್ಪಣೆ ಮಾಡಿದರು.

ಕಟ್ಟಡ ಕಟ್ಟಲು ಸಿಮೆಂಟು, ಇಟ್ಟಿಗೆ, ಕಬ್ಬಿಣ, ಮರಳು ಮುಂತಾದ ಸಾಮಗ್ರಿಗಳು ಬೇಕೇ ಬೇಕು. ಆದರೆ ಈ 3ಡಿ ಪ್ರಿಂಟರ್ ತಂತ್ರಜ್ಞಾನದಲ್ಲಿ ಇದ್ಯಾವುದು ಇಲ್ಲದೆಯೂ ಕಟ್ಟಡವನ್ನು ನಿರ್ಮಾಣ ಮಾಡಬಹುದಾಗಿದೆ. ಇನ್ನು ಈ ತಂತ್ರಜ್ಞಾನ ಬಳಕೆಯಿಂದ ಕಟ್ಟಡ ನಿರ್ಮಾಣ ಮಾಡಿದರೆ ನಿರ್ಮಾಣ ವೆಚ್ಚ ಮತ್ತು ಸಮಯ ಎರಡೂ ಉಳಿತಾಯವಾಗಲಿದೆ. ಅದರಲ್ಲೂ ನಿರ್ಮಾಣದ ವೆಚ್ಚ ಶೇಕಡ 30 ರಿಂದ 40 ರಷ್ಟು ಉಳಿತಾಯವಾಗಲಿದೆ.

ಇದೇ ತಂತ್ರಜ್ಞಾನ ಮೂಲಕ ಈ ಅಂಚೆ ಕಚೇರಿಯನ್ನು ನಿರ್ಮಾಣ ಮಾಡಲಾಗಿದೆ. ಹಾಗಾಗಿ ಇದು ಭಾರತದ ಮೊದಲ 3ಡಿ ಮುದ್ರಿತ ಸರ್ಕಾರಿ ಕಟ್ಟಡ ಎಂಬ ಗೌರವಕ್ಕೆ ಪಾತ್ರವಾಗಿದೆ. ಈ ಕಟ್ಟಡದ ಎಲ್ಲಾ ನಿರ್ಮಾಣ ಕಾರ್ಯವು ಸಂಪೂರ್ಣವಾಗಿ ಕಂಪ್ಯೂಟರ್ ನಿಯಂತ್ರಿತವಾಗಿರುತ್ತದೆ. ಕಟ್ಟಡದ ನಕ್ಷೆಯನ್ನು ಕಂಪ್ಯೂಟರ್‌ಗೆ ಒದಗಿಸಿದರೆ ಸಾಕು, ಅನುಮೋದಿತ ನಕ್ಷೆಯ ಪ್ರಕಾರ ಕಂಪ್ಯೂಟರ್ ರೋಬೋಟಿಂಗ್ ಯಂತ್ರಕ್ಕೆ ನಿರ್ದೇಶನವನ್ನು ನೀಡುತ್ತದೆ. ಕಂಪ್ಯೂಟರ್ ನಿರ್ದೇಶನದಂತೆ ರೋಬೋಟಿಂಗ್ ಯಂತ್ರವೇ ಸ್ವತಃ ವಿಶೇಷ ಕಾಂಕ್ರಿಟ್ ವಸ್ತುವನ್ನು ಪದರದ ಮೇಲೆ ಪದರದಂತೆ ಸುರಿದು ಕಟ್ಟಡವನ್ನು ನಿರ್ಮಾಣ ಮಾಡುತ್ತದೆ. ಈ ತಂತ್ರಜ್ಞಾನದಲ್ಲಿ ಸಾಮಾನ್ಯ ಕಾಂಕ್ರಿಟ್‌ಗಿಂತ ಹೆಚ್ಚಿನ ಮೌಲ್ಯ ಹೊಂದಿರುವ ಕಾಂಕ್ರಿಟ್ ಅನ್ನು ಬಳಸಲಾಗುವುದರಿಂದ ಕಟ್ಟಡವು ಹೆಚ್ಚು ಸಧೃಡವಾಗಿರುತ್ತದೆ.

ಕೈಯಿಂದ ನಿರ್ಮಿಸಲು ಕಷ್ಟ ಸಾಧ್ಯವಾದ ಎಂಥಹ ಸಂಕೀರ್ಣ ವಿನ್ಯಾಸದ ಕಟ್ಟಡವನ್ನು ಈ ತಂತ್ರಜ್ಞಾನದ ಮೂಲಕ ನಿರ್ಮಿಸಲು ಸಾಧ್ಯ. ಕ್ಯಾಡ್



Downloaded From:www.kpscvaani.com



ಮಾಡಲ್ ಅಥವಾ ಡಿಜಿಟಲ್ 3ಡಿ ಮಾಡಲ್ ರೂಪಿಸಿದ ನಂತರ ಕಂಪ್ಯೂಟರ್ ನಿರ್ದೇಶನದಲ್ಲಿ ಕಾಂಕ್ರೀಟ್ ಪದರವನ್ನು ಹಂತ ಹಂತವಾಗಿ ನಿರ್ಮಿಸಲಾಗುತ್ತದೆ. ಈ ತಂತ್ರಜ್ಞಾನವು ಒಂದು ರೀತಿಯಲ್ಲಿ ಸಂಪೂರ್ಣ ಸ್ವಯಂ ಚಾಲಿತ ಕಟ್ಟಡ ನಿರ್ಮಾಣ ತಂತ್ರಜ್ಞಾನವಾಗಿದೆ.

**ಎಲ್ ಅಂಡ್ ಟಿ ಸಂಸ್ಥೆ:**

ತಮಿಳುನಾಡಿನ ಕಾಂಚಿಪುರಂನಲ್ಲಿರುವ ಎಲ್ ಅಂಡ್ ಟಿ ಸಂಸ್ಥೆಯು ಮುದ್ರಿತ ಕಟ್ಟಡ ನಿರ್ಮಾಣ ಘಟಕವನ್ನು ಹೊಂದಿದೆ. ಪೋಸ್ಟ್ ಆಫೀಸ್ ಕಟ್ಟಡದ ವಿವಿಧ ಭಾಗಗಳನ್ನು ಕಾಂಚಿಪುರಂನಲ್ಲೇ ತಯಾರಿಸಿ, ಬಳಿಕ ಅವುಗಳನ್ನು ಬೆಂಗಳೂರಿಗೆ ತಂದು ಜೋಡಿಸಿ ಅಂತಿಮವಾಗಿ ಕಟ್ಟಡ ನಿರ್ಮಿಸಲಾಗಿದೆ. ಬೇರೆ ಬೇರೆ ದೇಶಗಳಲ್ಲಿ ಈ ರೀತಿ 3ಡಿ ಮುದ್ರಿತ ಹಲವು ಕಟ್ಟಡಗಳ ನಿರ್ಮಾಣವಾಗಿದೆ. ಮಂಗಳ ಇತ್ಯಾದಿ ಅನ್ಯ ಗ್ರಹಗಳಲ್ಲಿ ಮನುಷ್ಯ ವಸಾಹತು ಸ್ಥಾಪಿಸುವುದಾದರೆ ಅಲ್ಲಿ ವಾಸಸ್ಥಳ ನಿರ್ಮಾಣಕ್ಕೆ 3ಡಿ ಪ್ರಿಂಟೆಡ್ ಟೆಕ್ನಾಲಜಿ ಬಳಕೆ ಮಾಡುವ ಆಲೋಚನೆ ಇದೆ.

3ಡಿ ಮುದ್ರಿಕೆ ಅಂಚೆ ಕಚೇರಿಯನ್ನು ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಅವರು ಉದ್ಘಾಟಿಸಿದ ಬಳಿಕ ವಿಶೇಷ ಅಂಚೆ ಲಕೋಟೆ ಮತ್ತು ಅಂಚೆ ಕಚೇರಿಯ ಮಾದರಿಯನ್ನು ಬಿಡುಗಡೆ ಮಾಡಿದರು.

ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಬೆಂಗಳೂರು ನಗರವು ಸಾಕಷ್ಟು ಶಕ್ತಿಯನ್ನು ಹೊಂದಿದೆ. ಇಲ್ಲಿ ಸಕಾರಾತ್ಮಕ ಚಿಂತನೆ ಅಧಿಕವಾಗಿದೆ. ಬೆಂಗಳೂರು ಯಾವಾಗಲೂ ಭಾರತಕ್ಕೆ ಹೊಸ ಚಿತ್ರಣವನ್ನು ನೀಡುತಿರುತ್ತದೆ. 3ಡಿ ಮುದ್ರಿತ ಅಂಚೆ ಕಚೇರಿ ಕಟ್ಟಡ ನೀವು ನೋಡಿದ ಹೊಸ ಚಿತ್ರ, ಭಾರತವು ಇಂದು ಅಭಿವೃದ್ಧಿಯಾಗುತ್ತಿದೆ. ಇದು ನಮ್ಮ ದೇಶದ ಆವಿಷ್ಕಾರ ಮತ್ತು ಪ್ರಗತಿಗೆ ಸಾಕ್ಷಿಯಾಗಿದೆ ಹಾಗೂ ಸ್ವಾವಲಂಬಿ ಭಾರತದ ಆತ್ಮವನ್ನು ಸಾಕಾರಗೊಳಿಸುತ್ತದೆ ಎಂದರು.

ಈ ಅಂಚೆ ಕಚೇರಿಗೆ "ಕೇಂಬ್ರಿಡ್ಜ್ ಲೇಔಟ್ ಪೋಸ್ಟ್ ಆಫೀಸ್" ಎಂದು ಹೆಸರಿಸಲಾಗಿದೆ. ಇದೇ ವರ್ಷ ಮಾರ್ಚ್ 21 ರಿಂದ ಆರಂಭವಾದ ಈ ವಿನೂತನ ತಂತ್ರಜ್ಞಾನದ ಕಟ್ಟಡ ನಿರ್ಮಾಣದ ಕಾರ್ಯವನ್ನು ಕೇವಲ 44 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಯಿತಾದರೂ, ಒಳಚರಂಡಿ ಮತ್ತು ನೀರಿನ ಸಂಪರ್ಕ ಸಂಬಂಧದ ಕಾಮಗಾರಿಗೆ ಎರಡು ತಿಂಗಳು ಸಮಯ ತೆಗೆದುಕೊಂಡಿತು. ಇನ್ನು ಉದ್ಘಾಟನೆಗೆ ಸಚಿವರ ಲಭ್ಯತೆಗಾಗಿ ಒಂದು ತಿಂಗಳು ಹಿಡಿದಿತ್ತು. ಈ ಕಚೇರಿ ಆರಂಭವಾದ ನಂತರ ಹಲಸೂರು ಬಜಾರ್‌ನಲ್ಲಿರುವ ಪ್ರಸ್ತುತ ಅಂಚೆ ಕಚೇರಿಯನ್ನು ಮುಚ್ಚಲಾಗುವುದು ಮತ್ತು ಅಲ್ಲಿಯ ಸಿಬ್ಬಂದಿ ಮತ್ತು ಸಾಮಗ್ರಿಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಗುವುದು. ಎಲ್ ಅಂಡ್ ಟಿ (ಲಾರ್ಸೆನ್ ಮತ್ತು ಟೂಬ್ರೊ) ನಿರ್ಮಿಸಿರುವ ಕಟ್ಟಡವು ಸುಮಾರು 1,100 ಚದರ ಅಡಿ ವಿಸ್ತೀರ್ಣದಲ್ಲಿದೆ. 3ಡಿ ತಂತ್ರಜ್ಞಾನ ಅಳವಡಿಸಲು ತೆರಿಗೆ ಸೇರಿ ಸುಮಾರು 26 ಲಕ್ಷ ರೂ. ವೆಚ್ಚವಾಗಿದೆ.

ಡ್ರೈನೇಜ್ ಸಂಪರ್ಕ ಮತ್ತು ನೀರಿನ ಸಂಪರ್ಕದಂತಹ ಇತರ ವೆಚ್ಚಗಳು ಸೇರಿ ಸುಮಾರು 40 ಲಕ್ಷ ರೂ. ವೆಚ್ಚವಾಗಿದೆ. ಸಾಂಪ್ರದಾಯಿಕವಾಗಿ ಅಂಚೆ ಕಚೇರಿ ನಿರ್ಮಿಸಿದರೆ ಎಷ್ಟು ಖರ್ಚಾಗುತಿತ್ತೋ ಅದಕ್ಕೆ ಹೋಲಿಸಿದರೆ, ಈ ಅಂಚೆ ಕಚೇರಿಯ ನಿರ್ಮಾಣ ವೆಚ್ಚದಲ್ಲಿ ಶೇ. 30 ರಿಂದ 40 ರಷ್ಟು ಹಣ ಇಳಿಕೆಯಾಗಿದೆ. ದೇಶದ ಮೊಟ್ಟಮೊದಲ ಈ 3ಡಿ ಮುದ್ರಿತ ಅಂಚೆ ಕಚೇರಿಯು ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ನಿರ್ಮಾಣವಾಗಿರುವುದಕ್ಕೆ ನಾವೆಲ್ಲರು ಹೆಮ್ಮೆ ಪಡಬೇಕು.




Downloaded From:www.kpscvaani.com



# ಕೆರೆಗಳ ಪುನಶ್ಚೇತನಕ್ಕೆ ಮಿಷನ್ ಅಮೃತ ಸರೋವರ "ಸಂಜೀವಿನಿ"

**ಅಮೃತ ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ ನರೇಗಾ ಯೋಜನೆಯಡಿ ಮಂಡ್ಯ ಜಿಲ್ಲೆಯ ಕೆರೆ ಕಟ್ಟೆಗಳಿಗೆ ಆಧುನಿಕ ಸ್ಪರ್ಶ.**

ಬಿ.ಜೆ. ಸೋಮಶೇಖರ್

ಮನುಷ್ಯನೂ ಸೇರಿದಂತೆ ಎಲ್ಲ ಪ್ರಾಣಿವರ್ಗವು ಬದುಕಲು ಗಾಳಿ, ನೀರು ಆಹಾರಗಳು ಮುಖ್ಯ, ಇವುಗಳಲ್ಲಿ ಆಹಾರವನ್ನು ಸಸ್ಯ, ಮರಗಳ ರೂಪದಲ್ಲಿ ಬೆಳೆಸಿ ವೃದ್ಧಿ ಮಾಡಬಹುದು. ನೀರನ್ನು ಬೆಳೆಯಲಾಗದಿದ್ದರೂ ಮೇಲಿನಿಂದ ಬರುವ ಮಳೆಯನ್ನು ಸಂಗ್ರಹಿಸಿಟ್ಟುಕೊಂಡು ಎಲ್ಲ ಕಾಲಕ್ಕೂ ಬಳಸಬಹುದು.

ಹಿಂದೆ ದೊಡ್ಡ ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳನ್ನು ನಿರ್ಮಿಸುವಷ್ಟು ತಂತ್ರಜ್ಞಾನದ ಅರಿವಿರಲಿಲ್ಲ. ಜನರು ಚಿಕ್ಕ ಹಳ್ಳಗಳಿಗೆ ಒಡ್ಡುಕಟ್ಟಿ ನೀರನ್ನು ಸಂಗ್ರಹಿಸಿ, ಆ ನೀರನ್ನು ಕೃಷಿಗೆ, ಕುಡಿಯುವುದಕ್ಕೆ ಬಳಸುತ್ತಿದ್ದರು. ಆ ಕಾಲದ ಕೆರೆಗಳನ್ನು ಈಗ ಯಾರೂ ಕಟ್ಟಿಸುವುದಿಲ್ಲ. ಅಂತಹ ಕೆರೆಗಳು ಈಗ ಎಷ್ಟೋ ಬತ್ತಿ ಹೋಗಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಕಣ್ಮರೆಯಾಗುತ್ತಿರುವ ಕೆರೆ–ಕಟ್ಟೆಗಳಿಗೆ ಜೀವ ತುಂಬುವ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ಕೆರೆ–ಕಟ್ಟೆಗಳ ಸಂರಕ್ಷಣೆ ಹಾಗೂ ಪುನಶ್ಚೇತನಗೊಳಿಸುವ ಸಲುವಾಗಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ "ಮಿಷನ್ ಅಮೃತ ಸರೋವರ" ಎಂಬ ಮಹತ್ವಾಕಾಂಕ್ಷೆ ಯೋಜನೆ ಜಾರಿಗೊಳಿಸಿ ಕೆರೆಗಳ ಪುನಶ್ಚೇತನಕ್ಕೆ ಸಂಜೀವಿನಿಯಾಗಿದೆ.

ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಹಾಗೂ ಕೆರೆಯಲ್ಲಿ ಶೇಖರಣೆಯಾಗಿರುವ ಹೂಳನ್ನು ಹೊರತೆಗೆಯುವುದು. ಹಾಲಿ ಇರುವ ಕೆರೆಯ ಏರಿಯನ್ನು ಅಭಿವೃದ್ಧಿ ಪಡಿಸುವುದು. ನೀರಿನ ಒಳಹರಿವು ಮತ್ತು ಹೊರ ಹರಿವುಗಳನ್ನು (Structures)



Downloaded From:www.kpscvaani.com



ಹೆಚ್ಚಿಸುವುದು. ಏರಿಗೆ ಅವಶ್ಯಕವಾಗಿರುವ ಬಾಹ್ಯಾಲಂಕಾರ (Revetment) ವನ್ನು ಅಳವಡಿಸುವುದು, ಕೆರೆಯು ತುಂಬಿದಾಗ ನೀರು ಹೊರ ಹೋಗುವ ವ್ಯವಸ್ಥೆ (Waste Wier, Toe wall) ಯನ್ನು ಅಭಿವೃದ್ಧಿ ಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಅಮೃತ ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಗೆ 75 ಕೆರೆಗಳನ್ನು ಅಭಿವೃದ್ಧಿಗೊಳಿಸಲು ಗುರಿ ನಿಗದಿಪಡಿಸಿದ್ದು, ಜಿಲ್ಲಾವಾರು ನರೇಗಾ ಯೋಜನೆಯಡಿ ಗುರಿ ಮೀರಿದ ಸಾಧನೆ ಮಾಡಿದ್ದಾರೆ. ರಾಜ್ಯಾದ್ಯಂತ ಒಟ್ಟು 2325 ಕೆರೆಗಳ ಅಭಿವೃದ್ಧಿ ಗುರಿ ನಿಗದಿಯಾಗಿದ್ದು, 3571 ಕೆರಗಳ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, 1074 ಕೆರೆಗಳ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಇದರೊಂದಿಗೆ ಶೇ.153.59 ರಷ್ಟು ಸಾಧನೆ ಮಾಡಿದೆ.

ರಾಮನಗರ ಜಿಲ್ಲೆ 237 ಕೆರೆಗಳ ಪೈಕಿ 196 ಕೆರೆಗಳ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಿದ್ದು, ಪ್ರಥಮ ಸ್ಥಾನದಲ್ಲಿದೆ. ಹಾಸನ ಜಿಲ್ಲೆ 235 ಕೆರೆಗಳ ಪೈಕಿ 191 ಕೆರೆಗಳ ಅಭಿವೃದ್ಧಿಗೊಳಿಸಿ ದ್ವಿತೀಯ ಸ್ಥಾನ ಕಾಯ್ದು ಕೊಂಡಿದೆ. ಶಿವಮೊಗ್ಗ ಜಿಲ್ಲೆ 3ನೇ ಸ್ಥಾನ, ಕೋಲಾರ ನಾಲ್ಕನೇ ಸ್ಥಾನ ಹಾಗೂ ಮಂಡ್ಯ ಜಿಲ್ಲೆ 5ನೇ ಸ್ಥಾನದಲ್ಲಿದ್ದು ಗುರಿ ಮೀರಿದ ಸಾಧನೆ ಮಾಡಿವೆ.

ಈ ಸಂಬಂಧವಾಗಿ ನೂತನವಾಗಿ ಮುಖ್ಯ ಇಂಜಿನಿಯರ್



ರವರನ್ನು ನಿಯೋಜಿಸಲಾಗಿದ್ದು, ಇವರು ಈವರೆವಿಗೆ ರಾಜ್ಯದ 18 ಜಿಲ್ಲೆಗಳಿಗೆ ಪ್ರವಾಸ ಮಾಡಿ ಅಮೃತ ಸರೋವರದ ಕಾಮಗಾರಿಗಳ ಅನುಷ್ಠಾನದ ಬಗ್ಗೆ ತಪಾಸಣೆ ನಡೆಸಿದ್ದಾರೆ. ಕೇಂದ್ರ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಸುತ್ತೋಲೆ ಅನುಸಾರ ಆಜಾದಿ ಕಾ ಅಮೃತ್ ಮಹೋತ್ಸವ ನಿಮಿತ್ತ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಿಷನ್ ಅಮೃತ ಸರೋವರ ಅಭಿಯಾನದಡಿ ಗ್ರಾಮೀಣ ಪ್ರದೇಶದ ಜಲಮೂಲಗಳನ್ನು ಪುನಶ್ಚೇತನಗೊಳಿಸಿ ಅಮೃತ ಸರೋವರಗಳಾಗಿ ಹೊಸ ರೂಪ ನೀಡಲಾಗಿದೆ.

ಕೆರೆಯ ಅಂಗಳವನ್ನು ಸುಂದರೀಕರಣಗೊಳಿಸಲು ಮಹಾತ್ಮಗಾಂಧಿ ನರೇಗಾ ಅನುದಾನ ಹೊರತುಪಡಿಸಿ ಇತರೆ



ಅಮೃತ ಸರೋವರದ ಯೋಜನೆಯಡಿ ಪ್ರತಿ ಜಿಲ್ಲೆಗೆ 75 ಕೆರೆಗಳ ಅಭಿವೃದ್ಧಿಗೊಳಿಸುವಂತೆ ಗುರಿ ನಿಗದಿ ಮಾಡಲಾಗಿತ್ತು. ಆದರೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 158 ಕೆರೆಗಳನ್ನು ಈ ಯೋಜನೆಯಡಿ ಅಭಿವೃದ್ಧಿಗೆ ಆಯ್ಕೆ ಮಾಡಿಕೊಳ್ಳಲಾಯಿತು. ಈ ಪೈಕಿ ಈಗಾಗಲೇ 157 ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ ಒಂದು ಕೆರೆಯ ಅಭಿವೃದ್ಧಿ ಕಾಮಗಾರಿ ಪ್ರಗತಿ ಹಂತದಲ್ಲಿದೆ. ಹಾಗಾಗಿ ನಮ್ಮ ಜಿಲ್ಲೆಯು ಅಮೃತ ಸರೋವರ ಯೋಜನೆಯಡಿ ಗುರಿ ಮೀರಿದ ಸಾಧನೆ ಮಾಡಿದೆ.

**–ಶೇಖ್ ತನ್ವೀರ್ ಆಸೀಫ್,**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮಂಡ್ಯ ಜಿಲ್ಲೆ.



Downloaded From:www.kpscvaani.com



ನಿಧಿಗಳಿಂದ ಅನುದಾನ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕೆರೆ ಏರಿಯನ್ನು ಭದ್ರಪಡಿಸುವ ಸಲುವಾಗಿ ಅಗತ್ಯವಿದ್ದಲ್ಲಿ ದುರಸ್ಥಿ ಕಾರ್ಯ ಕೈಗೊಳ್ಳುವುದು ಮತ್ತು ಏರಿಯನ್ನು ಭದ್ರಗೊಳಿಸಲು ಇಳಿ ಜಾರುಗಳಲ್ಲಿ ಹುಲ್ಲುಗಾವಲನ್ನು ಅಭಿವೃದ್ಧಿ ಪಡಿಸಲಾಗಿದೆ. ಕೆರೆಯು ಪೂರ್ಣ ಪ್ರಮಾಣದಲ್ಲಿ ತುಂಬಿದಾಗ ನೀರನ್ನು ಹೊರಹಾಕಲು ಈ ಯೋಜನೆಯಡಿ ಹಳ್ಳವನ್ನು ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗಿದೆ.

ಹಿಂದೆ ಉದಾರಿಗಳು ತಮ್ಮ ಖರ್ಚಿನಲ್ಲೇ ಕೆರೆ, ಬಾವಿ, ಹೊಂಡ ಕಟ್ಟಿಸುತ್ತಿದ್ದರು. ನೀರಿನ ಉಪಯೋಗದಿಂದ ತಮಗೂ ತಮ್ಮ ಕುಟುಂಬದವರಿಗೂ ಮುಕ್ತಿ ದೊರಕುತ್ತದೆ ಎಂದು ನಂಬಿದ್ದರು. ಅವರಿಗೆ ಜನರ, ಅದರಲ್ಲೂ ಬಡಜನರ, ಜಾನುವಾರುಗಳ ಹಿತಾಸಕ್ತಿ ಮುಖ್ಯವಾಗಿತ್ತು. ಕೆರೆಗಳನ್ನು ತಮ್ಮ ತಾಯಿ, ತಂದೆ, ರಾಜರ ಹೆಸರಿನಲ್ಲಿ ಕಟ್ಟಿಸುತ್ತಿದ್ದರು. ನಮ್ಮ ಹಿಂದಿನ ಜನರ ನಿಸ್ವಾರ್ಥ ಉದಾರ ಮನೋಧರ್ಮಕ್ಕೆ ಉಳಿದಿರುವ ಈಗಿನ ಕೆರೆಕಟ್ಟೆಗಳು ಜೀವಂತ ನಿದರ್ಶನ.

ಸೂಳೆಕೆರೆ: ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ನಿರ್ಮಾಣವಾಗಿರುವ "ಸೂಳೆಕೆರೆ" ಏಷ್ಯಾದಲ್ಲೇ ಎರಡನೇ ಅತಿ ದೊಡ್ಡಕರೆ ಎಂದು ಪ್ರಸಿದ್ಧವಾಗಿದೆ. ಅದನ್ನು "ಸೂಳೆ" ಶಾಂತವ್ವ ಕಟ್ಟಿಸಿದ್ದು, ಎಂಬ ಜನಜನಿತ ಕತೆ ಅಲ್ಲಿ ಪ್ರಚಲಿತವಾಗಿದೆ. ಆ ಹೆಸರಿನಲ್ಲಿ ಜನರಿಗೆ ಕಾಣಿಸುತ್ತಿದ್ದುದು ಆಶ್ಲೀಲ ಅಲ್ಲ ಶಾಂತವ್ವನ ತ್ಯಾಗ. ಸೂಳೆಯಾಗಿದ್ದರೂ ತನ್ನ ಹಣವನ್ನು ಕೆರೆ ನಿರ್ಮಾಣಕ್ಕಾಗಿ ವ್ಯಯಿಸಿದ್ದಳು ಎಂಬ ಭಾವನೆಯೇ ಜನರಿಗೆ ಮುಖ್ಯವಾಗಿತ್ತು. ಇದೇ ರೀತಿ ರಾಜ್ಯದ ವಿವಿಧೆಡೆ ಕೆರೆಗಳನ್ನು ನಿರ್ಮಾಣ ಮಾಡಿರುವುದನ್ನು ನಾವು ನೋಡಿದ್ದೇವೆ.

ಮಂಡ್ಯ ಜಿಲ್ಲೆಯಲ್ಲಿ ಒಟ್ಟು 159 ಕೆರೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ಪೈಕಿ 158 ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ ಒಂದು ಕೆರೆಯ ಅಭಿವೃದ್ಧಿ ಕಾಮಗಾರಿ ಪ್ರಗತಿ ಹಂತದಲ್ಲಿದೆ. ಬೆಂಗಳೂರು ನಗರ ಹಾಗೂ ಕೊಡಗು ಜಿಲ್ಲೆಗಳನ್ನು ಹೊರತುಡಪಸಿದರೆ ಉಳಿದ 29 ಜಿಲ್ಲೆಗಳು ಕೆರೆಗಳ ಅಭಿವೃದ್ಧಿಯಲ್ಲಿ ಗುರಿ ಮೀರಿದ ಸಾಧನೆ ಮಾಡಿವೆ.

**ಅಮೃತ ಸರೋವರ ನಿರ್ಮಾಣದ ವೆಚ್ಚ:**

ಕೆರೆ ಕಟ್ಟೆ, ಪುರಾತನ ಕಾಲದ ಕಲ್ಯಾಣಿಗಳು, ಗೋ ಕಟ್ಟೆಗಳನ್ನು ಅಮೃತ ಸರೋವರಗಳಾಗಿ ಅಭಿವೃದ್ಧಿ ಪಡಿಸಲು ಅವುಗಳ ವಿಸ್ತೀರ್ಣದ ಆಧಾರದ ಮೇಲೆ 3 ರಿಂದ 30 ಲಕ್ಷ ರೂ. ವರೆಗೆ ವೆಚ್ಚ ಮಾಡಲಾಗಿದೆ. ಈ ಹಣದಲ್ಲಿ ಅಮೃತ ಸರೋವರಗಳ ಬಳಿ ಬೆಳೆದ ಗಿಡಗಂಟಿಗಳನ್ನು ತೆರವುಗೊಳಿಸಲಾಗಿದೆ. ಫೆನ್ಸಿಂಗ್, ಸ್ಟೋನ್ ಪಿಚ್ಚಿಂಗ್, ಬಣ್ಣ, ವಾಕಿಂಗ್ ಪಾಥ್, ಅರಣ್ಯೀಕರಣ (ಗಿಡಗಳನ್ನು ನೆಡುವುದು). ಕಲ್ಲು ಬೆಂಚುಗಳನ್ನು ಅಳವಡಿಸುವುದನ್ನು ಮಾಡಲಾಗಿದೆ.

ಗೋಪಾಲಪುರ ಗ್ರಾಮ ಪಂಚಾಯತಿಯ ಪಿಡಿಒ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ರೇಣುಕಾ ಅವರು ಈ ಅಮೃತ ಸರೋವರ ಯೋಜನೆಯಡಿ ಗೋಪಾಲಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟೆಯೊಂದನ್ನು ಅಭಿವೃದ್ಧಿಗೊಳಿಸಿ ವಾಕಿಂಗ್ ಪಾಥ್ ಮಾಡಿ, ಕಲ್ಲು ಬೆಂಚುಗಳನ್ನು ಅವಳವಡಿಸಲಾಗಿದೆ. ಇದರಿಂದ ಗ್ರಾಮಕ್ಕೆ ಒಂದು ಮೆರಗು ಬಂದಂತಾಗಿದೆಯಲ್ಲದೆ ಜಲಮೂಲ ಸಂರಕ್ಷಣೆಗೆ ಇದು ಸಹಕಾರಿಯಾಗಲಿದೆ. ಇಂತಹ ಒಂದು ಯೋಜನೆಯಲ್ಲಿ ನಾನು ಕೆಲಸ ಮಾಡಿರುವುದು ನನಗೆ ಹೆಚ್ಚಿನ ಸಂತಸ ಕೊಟ್ಟಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

**ಅಮೃತ ಸರೋವರದಡಿ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ**

ರಾಜ್ಯದ ಎಲ್ಲಾ ಅಮೃತ ಸರೋವರಗಳಲ್ಲಿ 15ನೇ ಆಗಸ್ಟ್ 2023ರ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಿಯಮಾನುಸಾರ ಹಾಗೂ ಯಶಸ್ವಿಯಾಗಿ ಧ್ವಜಾರೋಹಣ ಮತ್ತು ಚಟುವಟಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಪ್ರತಿ ಜಿಲ್ಲೆಗೆ 75 ಅಮೃತ ಸರೋವರಗಳನ್ನು ಪುನಶ್ಚೇತನಗೊಳಿಸಿ, ಇದೀಗ ಸರೋವರಗಳಿಗೆ ಹೊಸ ಸ್ಪರ್ಶ ನೀಡಿರುವ ನಿಟ್ಟಿನಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಶೇಷವಾಗಿ ಆಚರಿಸಲಾಯಿತು.

ಸರ್ಕಾರದ ಸೂಚನೆಯಂತೆ ಕರ್ತವ್ಯದಲ್ಲಿ ಇದ್ದಾಗ ದೇಶಕ್ಕಾಗಿ ಪ್ರಾಣವನ್ನು ತ್ಯಾಗ ಮಾಡಿದ ಎಲ್ಲಾ ಧೈರ್ಯಶಾಲಿಗಳು, ವೀರರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುವ ಅಂಶವಾಗಿ ವೀರರಾಗಿರುವ ಸ್ವಾತಂತ್ರ್ಯ ಹೋರಾಟಗಾರರು, ರಕ್ಷಣಾ ಸಿಬ್ಬಂದಿ, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಅಧಿಕಾರಿಗಳು / ಸಿಬ್ಬಂದಿ, ರಾಜ್ಯ ಪೊಲೀಸರು ಮುಂತಾದ ವೀರರ ಹೆಸರನ್ನು ಶಿಲಾಫಲಕದಲ್ಲಿ ಬರೆದು ಎಲ್ಲಾ ಅಮೃತ ಸರೋವರಗಳ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಒಂದು ವೇಳೆ ಸದರಿ ಪಂಚಾಯಿತಿ ವ್ಯಾಪ್ತಿಯಲ್ಲಿ ವೀರರು ಲಭ್ಯವಿಲ್ಲದಿದ್ದಲ್ಲಿ, ಊರಿನ ಹಿರಿಯರೊಂದಿಗೆ ಚರ್ಚಿಸಿ ಆ ಭಾಗದಲ್ಲಿ ಸಾಮಾಜಿಕ ಕೊಡುಗೆ ನೀಡಿರುವವರ ಹೆಸರಿನ ಶಿಲಾಫಲಕವನ್ನು ಅಳವಡಿಸಲಾಗಿದೆ.

ಒಟ್ಟಾರೆ ಅಮೃತ ಸರೋವರದಡಿ ಜಲಮೂಲಗಳಿಗೆ ಜೀವಕಳೆ ಕಲ್ಪಿಸಿಕೊಡುತ್ತಿದ್ದು, ನಶಿಸಿ ಹೋಗುತ್ತಿದ್ದ ಕೆರೆ ಕಟ್ಟೆಗಳಿಗೆ ಜೀವ ಬಂದಂತ್ತಾಗಿದೆ. ಮುಂದಿನ ಪೀಳಿಗೆಗೆ ನೀರಿನ ಸೆಲೆಗಳನ್ನು ಬಿಟ್ಟು ಹೋಗುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.



Downloaded From:www.kpscvaani.com







# ಮಹಿಳಾ ಸಬಲೀಕರಣದಿಂದ ಸ್ವಚ್ಛತೆಯಡೆಗೆ ಹಳ್ಳಿಗಳು

**ಭಾ**ರತವು ಹಳ್ಳಿಗಳ ದೇಶ. 'ಭಾರತದ ಆತ್ಮವು ಅದರ ಹಳ್ಳಿಗಳಲ್ಲಿ ವಾಸಿಸುತ್ತದೆ' ಎಂದು ಹಲವು ವರ್ಷಗಳ ಹಿಂದೆ ಮಹಾತ್ಮ ಗಾಂಧಿಜೀಯವರು ಹೇಳಿದ ಈ ಪ್ರಸಿದ್ಧ ಅವಲೋಕನವು ಇಂದಿಗೂ ಸತ್ಯವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ನಮ್ಮ ದೇಶದ ಒಟ್ಟು ಜನಸಂಖ್ಯೆಯ ಶೇ.70 ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಗ್ರಾಮೀಣ ಭಾರತವನ್ನು ಸ್ವಚ್ಛಗೊಳಿಸದ ಹೊರತು ಸಮಗ್ರ ಅಭಿವೃದ್ಧಿಯ ಕನಸು ನನಸಾಗುವುದು ಕಷ್ಟ. ಗ್ರಾಮಗಳು ಸ್ವಚ್ಛವಾಗದಿದ್ದರೆ ಗ್ರಾಮಗಳ ಅಭಿವೃದ್ಧಿ ಅಪೂರ್ಣವಾಗಿಯೇ ಉಳಿದು ಬಿಡಲಿದೆ.

ಹಳ್ಳಿಗಳಲ್ಲಿ ಹಲವು ವಿನೂತನ ಪ್ರಯತ್ನಗಳಿಂದಾಗಿ ಸಾಕಷ್ಟು ಬದಲಾವಣೆಯಾಗುತ್ತಿವೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ನೆಲಸಿರುವ ಕೋಟ್ಯಾಂತರ ಜನರ ಬದುಕಿನಲ್ಲಿ ಪರಿವರ್ತನೆಯ ಪ್ರಕ್ರಿಯೆ ನಡೆಯುತ್ತಿದೆ. ಸ್ವಚ್ಛತೆ ಎನ್ನುವುದು ಕೇವಲ ಜೀವನಕ್ಕೆ ವೇಗ ನೀಡುವಂತಹುದ್ದಲ್ಲ. ಅದು ಮಾನವ ಅಭಿವೃದ್ಧಿಯ ಪ್ರಮುಖಾಂಶ. ಸ್ವಚ್ಛತೆ ಕಾಯ್ದುಕೊಳ್ಳದ ಹೊರತು ಯಾವುದೇ ಸಮುದಾಯ ಮತ್ತು ಸಮಾಜ ಯಶಸ್ವಿಯಾಗಲು ಸಾಧ್ಯವಿಲ್ಲ. ಸ್ವಚ್ಛತೆ ಇಲ್ಲದೆ, ಶಿಕ್ಷಣ, ಆರೋಗ್ಯ, ಬಡತನ ನಿವಾರಣೆ, ಮಾನವ ಅಭಿವೃದ್ಧಿ ಸೇರಿದಂತೆ ಯಾವುದೇ ಗುರಿಗಳನ್ನು ಸಾಧಿಸುವುದು ಅಸಾಧ್ಯ. ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಯು ಮಾನವನ ಮೂಲಭೂತ ಹಕ್ಕಾಗಿದ್ದು, ಉತ್ತಮ ಆರೋಗ್ಯ ಹೊಂದಿ ಗೌರವಯುತ ಜೀವನ ನಡೆಸಲು ಅಗತ್ಯವಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಹಿಂದೆಂದೂ ಕಂಡರಿಯದ ವಿನೂತನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಹಿಳಾ ಸ್ವ ಸಹಾಯ ಗುಂಪುಗಳು ಸ್ವಚ್ಛತಾ ಆಂದೋಲನಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅವರು ಸ್ವಚ್ಛತೆಗೆ ಸಂಬಂಧಿಸಿದ ಕೆಲಸಗಳಿಗೆ ತಮ್ಮ ಉಳಿತಾಯದ ಹಣವನ್ನು ತೊಡಗಿಸಿದ್ದಾರೆ. ಆ ಮೂಲಕ ತಮ್ಮ ಸುತ್ತಲಿನ ಪರಿಸರವನ್ನು

**ಸ್ವಚ್ಛತಾ ಕಾರ್ಯದ ಸಂಪೂರ್ಣ ಹೊಣೆಯನ್ನು ಸ್ವ ಸಹಾಯ ಗುಂಪಿನ ಮಹಿಳೆಯರು ವಹಿಕೊಂಡು ಗ್ರಾಮೀಣ ಪ್ರದೇಶಗಳನ್ನು ಸ್ವಚ್ಛತೆಯಡೆಗೆ ಕೊಂಡೊಯ್ಯುದ್ದಾರೆ.**

ಯತಿರಾಜ್ ಎಂ. ಡಿ



Downloaded From:www.kpscvaani.com



ಸ್ವಚ್ಛ ಮತ್ತು ಸುಂದರವನ್ನಾಗಿ ಮಾಡುವಲ್ಲಿ ಅವರು ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದಾರೆ. ಅಲ್ಲದೆ, ಸ್ವ ಸಹಾಯ ಗುಂಪುಗಳ ಮಹಿಳಾ ಸದಸ್ಯರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ್ದ ಕುಟುಂಬಗಳಿಗೆ ಹಣಕಾಸಿನ ಸಹಾಯವನ್ನು ವಿಸ್ತರಿಸಿದ್ದಾರೆ. ಸ್ವ ಸಹಾಯ ಗುಂಪುಗಳು ಪರಸ್ಪರ ಸಹಕಾರದ ಹಲವು ಪ್ರಯತ್ನಗಳ ಮೂಲಕ ಸಮಾಜದಲ್ಲಿ ಸೌಹಾರ್ದತೆ ಬಲವರ್ಧನೆಗೆ ಸಹಾಯ ಮಾಡಿವೆ. ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರೇ ಆಗಿದ್ದಾರೆ. ಕಳೆದ ಹಲವು ವರ್ಷಗಳಲ್ಲಿ ಸಾರ್ವಜನಿಕ ಜೀವನದಲ್ಲಿ ಮಹಿಳೆಯರು ಮಹತ್ತರ ಬೆಳವಣಿಗೆ ಕಾಣುತ್ತಿರುವುದನ್ನು ನೋಡಬಹುದು. ಕಚೇರಿಗಳಲ್ಲಿ ಕೆಲಸ ಮಾಡುತ್ತಾ, ಕ್ರೀಡಾಕ್ಷೇತ್ರದಲ್ಲಿ, ಅಧಿಕಾರ ವರ್ಗದಲ್ಲಿ, ರಾಜಕೀಯ ರಂಗದಲ್ಲಿ, ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಇದೊಂದು ಸಕಾರಾತ್ಮಕ ಬದಲಾವಣೆ ಮಾತ್ರವಲ್ಲದೇ, ಅದು ಹಿಂದೆಂದಿಗಿತಂಲೂ ಅಧಿಕ ವೇಗದಲ್ಲಿ ನಡೆಯುತ್ತಿದೆ.

ಮಹಿಳಾ ಸಬಲೀಕರಣದ ವಿಚಾರದಲ್ಲಿ ಇತ್ತೀಚಿನ ಬೆಳವಣಿಗೆಗಳು ಬಹಳ ಪ್ರೋತ್ಸಾಹದಾಯಕವೆಂದು ನಾವು



ಭಾವಿಸುತ್ತೇವೆ. ಇತ್ತೀಚಿಗಷ್ಟೇ ಭಾರತೀಯ ವಾಯುಪಡೆಯಲ್ಲಿ ಮಹಿಳಾ ಪೈಲಟ್‌ಗಳಾಗಿ, ಯುದ್ಧ ಭೂಮಿಯಲ್ಲೂ ಕೂಡ ಮಹಿಳೆಯರಿಗೆ ಸ್ಥಾನವನ್ನು ಕಲ್ಪಿಸುವ ಪ್ರಯತ್ನ ನಡೆದಿದೆ. ಮಂಗಳಯಾನ ಮತ್ತು ಒಂದೇ ರಾಕೆಟ್ ಮೂಲಕ ದಾಖಲೆಯ 104 ನ್ಯಾನೋ ಉಪಗ್ರಹಗಳನ್ನು ಉಡಾವಣೆ ಮಾಡಿದ ಭಾರತದ ಐತಿಹಾಸಿಕ ದಾಖಲೆಯ ಹಿಂದಿದ್ದ ವಿಜ್ಞಾನಿಗಳ ತಂಡದಲ್ಲೂ ಮಹಿಳೆಯರು ಸ್ಥಾನ ಪಡೆದಿದ್ದಾರೆ. ಈ ಮಹಿಳೆಯರು ಪ್ರಸ್ತುತ "ಭೇಟಿ ಬಚಾವೊ, ಭೇಟಿ ಪಢಾವೊ" ಎಂದು ಉದ್ಘರಿಸುತ್ತಿರುವ ದೇಶಕ್ಕೆ ಮಾದರಿಯಾಗಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣ ಕರ್ನಾಟಕಕ್ಕಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ (SLWM) ಘಟಕಗಳ ನಿರ್ಮಾಣ, ವೈಜ್ಞಾನಿಕ ನಿರ್ವಹಣೆ ಮತ್ತು ಅನುಷ್ಠಾನಕ್ಕೆ ಮಾರ್ಗದರ್ಶಿ ಸೂತ್ರಗಳ ರೂಪದಲ್ಲಿ ಘನ ಮತ್ತು ದ್ರವತ್ಯಾಜ್ಯ ನಿರ್ವಹಣಾ ನೀತಿಯನ್ನು ಜಾರಿಗೆ ತಂದಿದೆ. ಇದು ಗ್ರಾಮೀಣ ಪ್ರದೇಶದ ನೈರ್ಮಲ್ಯ ನೀತಿ ಮತ್ತು ಕಾರ್ಯತಂತ್ರದ ಬಗ್ಗೆ ವಿಸ್ತೃತ ಮಾಹಿತಿ ಹೊಂದಿದೆ. ಇಂತಹ ಸಮಗ್ರ ನೀತಿ ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ಕರ್ನಾಟಕ.

**ಸ್ವಚ್ಛ ಸಂಕೀರ್ಣ ಘಟಕ**

ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ನಿರ್ಮಾಣಗೊಂಡ ಘನ ತ್ಯಾಜ್ಯ ನಿರ್ವಹಣಾ ಘಟಕಗಳ ಜವಬ್ದಾರಿಯನ್ನು ಎನ್‌ಆರ್‌ಎಲ್‌ಎಮ್ ಯೋಜನೆಯ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಸರ್ಕಾರವು ಒದಗಿಸಿಕೊಟ್ಟಿದೆ. ಹಳ್ಳಿಗಳಲ್ಲಿ ಮಹಿಳೆಯರೇ ವಾಹನ ಚಲಾಯಿಸಿಕೊಂಡು ಬಂದು, ಎಲ್ಲ ಮನೆಯಿಂದ ಕಸ ಪಡೆಯುತ್ತಾರೆ. ಬರೀ ವಾಹನ ಚಾಲನೆ ಅಷ್ಟೇ ಅಲ್ಲ, ಕಸ ಸಂಗ್ರಹಣೆ ಮತ್ತು ವಿಂಗಡಣೆಯ ಕೆಲಸವನ್ನು ಕೂಡ ಮಹಿಳೆಯರೇ ಮಾಡುತ್ತಿದ್ದಾರೆ. ಮಹಿಳಾ ಸಬಲೀಕರಣದ ಆಶಯ ಜಾರಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಈ ಮಹತ್ವದ ಹೆಜ್ಜೆ ಇಟ್ಟಿದ್ದು, ಸ್ವಚ್ಛತಾ ಕಾರ್ಯದ ಸಂಪೂರ್ಣ ಹೊಣೆಯನ್ನು ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ವಹಿಸಿದೆ.

**ಸ್ವಚ್ಛ ವಾಹಿನಿಯ ಮಹಿಳಾ ಚಾಲಕರು**


ಶಿವಮೊಗ್ಗ ಜಿಲ್ಲಾ ಪಂಚಾಯತ್ ಎನ್‌ಆರ್‌ಎಲ್‌ಎಮ್– ಸಂಜೀವಿನಿ ಯೋಜನೆಯ ವತಿಯಿಂದ ಒಕ್ಕೂಟದ ಸ್ವ ಸಹಾಯ ಗುಂಪುಗಳ ಮಹಿಳಾ ಸದಸ್ಯರಿಗೆ ವಾಹನ ಚಾಲನಾ ತರಬೇತಿ ಮತ್ತು ಕಸ ಸಂಗ್ರಹಣೆ ಮತ್ತು ನಿರ್ವಹಣೆಯ ತರಬೇತಿಯನ್ನು ನೀಡಲಾಗಿದೆ. ಮಹಿಳಾ ಚಾಲಕರಿಗೆ ಚಾಲನಾ ಪರವಾನಗಿಯನ್ನು ಒದಗಿಸಿಕೊಟ್ಟು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆಗಳಿಂದ ಕಸ ಸಂಗ್ರಹಿಸಲು ಮುಂದಾಗಿರುವ ಕಾರ್ಯವು ಮಹಿಳೆಯರಲ್ಲಿ ಇರುವ ಆಸಕ್ತಿ ಹಾಗೂ ಸಾಮಾಜಿಕ ಕಳಕಳಿಯನ್ನು ತೋರಿಸುತ್ತದೆ.

**ಕಸ ಸಂಗ್ರಹಣಾ ಶುಲ್ಕ ಸಂಗ್ರಹಿಸುತ್ತಿರುವ ಒಕ್ಕೂಟದ ಮಹಿಳೆಯರು**

ಗ್ರಾಮ ಪಂಚಾಯಿತಿ ಮತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ನಡುವೆ ಒಪ್ಪಂದ ಏರ್ಪಟ್ಟು, ಗ್ರಾಮ ಪಂಚಾಯತಿ ಸಹಕಾರದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕವನ್ನು ನಿರ್ವಹಣೆ ಮಾಡುವಲ್ಲಿ ಸಂಜೀವಿನಿ ಒಕ್ಕೂಟಗಳು ಮುಂದೆ ಬಂದಿವೆ. "ಮಹಿಳೆಯು ಅಬಲೆಯಲ್ಲ, ಸಬಲೆ" ಎನ್ನುವ ನಾಣ್ಣುಡಿಯಂತೆ, ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರು ಸ್ವಚ್ಛ ವಾಹಿನಿಯ ಚಾಲಕರಾಗಿ ಹಾಗೂ ಕಸ ಸಂಗ್ರಹಣೆ ಮತ್ತು ವಿಂಗಡಣೆಯ ಕೆಲಸ ನಿರ್ವಹಿಸುತ್ತಿರುವುದು ಹಳ್ಳಿಗಳನ್ನು 'ಒಂದು ಸ್ವಚ್ಛ ಸುಂದರ' ಗ್ರಾಮವನ್ನಾಗಿ ರೂಪಿಸುವಲ್ಲಿ ಗ್ರಾಮೀಣ ಸ್ವ ಸಹಾಯ ಗುಂಪಿನ ಮಹಿಳೆಯರು ಬಹು ಮುಖ್ಯ ಪಾತ್ರವನ್ನು ವಹಿಸಿರುವರು. ಮಹಿಳೆಯರ ಈ ಕೆಲಸವು ಸರ್ಕಾರಕ್ಕೆ ಒಂದು ಸಾಧನೆಯಾಗಿ ಕಂಡಿದೆ.



Downloaded From:www.kpscvaani.com



# ರೈತರಿಗೆ ವರವಾಗಿರುವ ಕೃಷಿ ಯಂತ್ರಧಾರೆ ಕೇಂದ್ರಗಳು



**ಬಾಡಿಗೆ ಆಧಾರದ ಮೇಲೆ ಕೃಷಿ ಯಂತ್ರೋಪಕರಣವನ್ನು ಒದಗಿಸುವ ಕೃಷಿ ಯಂತ್ರಧಾರೆ ಕೇಂದ್ರಗಳು ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸುತ್ತಿವೆ.**

ಕೆ.ಎಸ್. ರಾಜಮನ್ನಾರ್

**ಕೃ**ಷಿ ಕ್ಷೇತ್ರದಲ್ಲಿ ಕೂಲಿ ಕಾರ್ಮಿಕರು ಸಿಗದೇ ರೈತರು ಪರದಾಡುವಂತ್ತಾಗಿದೆ. ಹೀಗಾಗಿ ಕೃಷಿ ವಲಯ ಮಾನವ ಮತ್ತು ಪ್ರಾಣಿಗಳ ಅವಲಂಬನೆಯಿಂದ ಹೊರಬಂದು ಯಾಂತ್ರಿಕ ಅವಲಂಬನೆಯತ್ತ ಹೊರಳಿದೆ. ಇದರ ವೆಚ್ಚ ಪರಿಣಾಮಕಾರಿ ಕೂಡ ಹೌದು. ಮಾನವ ಸಂಪನ್ಮೂಲದ ಕೊರತೆಯನ್ನು ಕೃಷಿ ಯಂತ್ರಗಳು ನೀಗಿಸಬಹುದಾಗಿದೆ. ಆದರೆ, ಯಾವ ಬಗೆಯ ಯಂತ್ರ ಬೇಕು? ಆ ಯಂತ್ರ ಬಳಸುವುದು ಹೇಗೆ? ಎಂಬ ಮಾಹಿತಿ ಅನೇಕ ರೈತರಿಗೆ ಇರುವುದಿಲ್ಲ. ಇನ್ನು ಸಣ್ಣ ಹಿಡುವಳಿದಾರರು ಲಕ್ಷಾಂತರ ರೂಪಾಯಿ ಮೌಲ್ಯದ ಯಂತ್ರೋಪಕರಣ ಖರೀದಿಸುವುದು ಸುಲಭದ ಮಾತಲ್ಲ, ಸಾಧ್ಯವೂ ಇಲ್ಲ. ಈ ನಿಟ್ಟಿನಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಮೂಲಕ ಕೃಷಿ ಯಂತ್ರಧಾರೆ ಕೇಂದ್ರಗಳು ರೈತ ಸಮುದಾಯಕ್ಕೆ ವರದಾನವಾಗಿವೆ.

ಕೃಷಿ ಯಂತ್ರೋಪಕರಣ ಖರೀದಿಸಲು ಸಾಧ್ಯವಾಗದ ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಕೃಷಿ ಕಾಯಕಕ್ಕೆ ಆಧುನಿಕ ಯಂತ್ರಗಳು ದೊರೆಯುವಂತಾಗಬೇಕು ಎಂಬ ಉದ್ದೇಶದಿಂದ ಸರ್ಕಾರವು ಈ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಿದೆ.

ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಕೃಷಿಯನ್ನು ಲಾಭದಾಯಕವಾಗಿ ಮಾಡುವುದೇ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಹೊಸ ಸರ್ಕಾರ ಈ ಕೇಂದ್ರಗಳಿಗೆ ಹೈಟೆಕ್ ಸ್ಪರ್ಶ ನೀಡಿ ಈ ಕೇಂದ್ರಗಳು ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಪಣ ತೊಟ್ಟು, ಬಜೆಟ್‌ನಲ್ಲಿ ಹಣವನ್ನೂ ಮೀಸಲಿಟ್ಟಿದೆ. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಈ ಕೇಂದ್ರಗಳಿಗೆ ಈಗ ಇನ್ನಷ್ಟು ಬಲ ನೀಡಲಾಗಿದೆ. ಇವುಗಳಲ್ಲಿ 300 ಹೈಟೆಕ್ ಹಾರ್ವೆಸ್ಟರ್ ಹಬ್ ಅನ್ನು ಹಂತ ಹಂತವಾಗಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ 2023–24ನೇ ಸಾಲಿನಲ್ಲಿ 100 ಹಬ್‌ಗಳನ್ನು ಸ್ಥಾಪಿಸಲು ಬಜೆಟ್‌ನಲ್ಲಿ 50 ಕೋಟಿ ರೂ ಅನುದಾನ ಒದಗಿಸಿದೆ.

**ಕೃಷಿ ಯಂತ್ರಧಾರೆ ಯೋಜನೆಯ ಉದ್ದೇಶಗಳು:**

- ಬಾಡಿಗೆಗೆ ಕೃಷಿ ಯಂತ್ರೋಪಕರಣಗಳನ್ನು ನೀಡಿ, ಕೃಷಿ ಚಟುವಟಿಕೆಗಳಿಗೆ ರೈತರಿಗೆ ನೆರವು ನೀಡುವುದು.
- ರೈತರಿಗೆ ಯಂತ್ರೋಪಕರಣಗಳ ಖರೀದಿ ಹೊರೆ ತಪ್ಪಿಸುವುದು.
- ಆಧುನಿಕ ಯಂತ್ರೋಪಕರಣಗಳ ಬಳಕೆಗೆ ಉತ್ತೇಜನ ನೀಡುವುದು.


Downloaded From:www.kpscvaani.com



- ಕಡಿಮೆ ಉತ್ಪಾದನಾ ವೆಚ್ಚದೊಂದಿಗೆ ಲಾಭದಾಯಕ ಕೃಷಿ.
- ಸಮಯಕ್ಕೆ ಸರಿಯಾಗಿ ಉತ್ತಮ ಇಳುವರಿ ಸಿಗುವಂತೆ ಮಾಡುವುದು.
- ಸಣ್ಣ ಹಿಡುವಳಿದಾರರಿಗೂ ಆಧುನಿಕ ಯಂತ್ರೋಪಕರಣಗಳು ಸಿಗುವಂತೆ ಮಾಡುವುದು.
- ಕೃಷಿ ತ್ಯಾಜ್ಯ, ನಷ್ಟ ಕಡಿಮೆ ಮಾಡುವುದು

**ಪರೋಕ್ಷ ಲಾಭಗಳು:**

- ಕೃಷಿಯ ಹೆಚ್ಚಿನ ಪರಿಶ್ರಮದ ಮತ್ತು ಹೆಚ್ಚು ಸಮಯ ಹಿಡಿಸುವ ಕೆಲಸವನ್ನು ಯಂತ್ರಗಳ ಸಹಾಯದಿಂದ ಸುಲಭವಾಗಿ ಮಾಡಬಹುದಾಗಿದೆ.
- ಮಾನವನ ಪ್ರಯತ್ನಗಳಿಗಿಂತ ಹೆಚ್ಚು ಪರಿಣಾಮಕಾರಿ.
- ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಪೂರ್ಣ.
- ಮಣ್ಣಿನ ತೇವಾಂಶ ಹಿಡಿದಿಟ್ಟುಕೊಳ್ಳಲು ಸಹಕಾರಿ.

**ಯಂತ್ರಗಳನ್ನು ಬಾಡಿಗೆಗೆ ಪಡೆಯುವುದು ಹೇಗೆ?**

ಕೃಷಿ ಯಂತ್ರೋಪಕರಣಗಳು ಬಾಡಿಗೆಗೆ ಬೇಕಾದಲ್ಲಿ ಸಮೀಪದ ಕೃಷಿ ಯಂತ್ರಧಾರೆ ಕೇಂದ್ರಕ್ಕೆ ಹೋಗಿ, ಅಗತ್ಯವಿರುವ ಯಂತ್ರವನ್ನು ಮುಂಗಡ ಹಣ ಪಾವತಿಸಿ ಪಡೆಯಬಹುದಾಗಿದೆ. ಏಕಕಾಲದಲ್ಲಿ ಅಲ್ಲಿನ ರೈತರಿಗೆ ಒಂದೇ ಬಗೆಯ ಯಂತ್ರಗಳು ಬೇಕಾಗುವ ಸಂದರ್ಭದಲ್ಲಿ ಯಂತ್ರಗಳ ಲಭ್ಯತೆ ನೋಡಿಕೊಂಡು ಅವುಗಳನ್ನು ಬೇಡಿಕೆಯ ಆಧಾರದಲ್ಲಿ ಪೂರೈಸಲಾಗುತ್ತದೆ. ಯಂತ್ರೋಪಕರಣಗಳ ಬಾಡಿಗೆ ದರ ಮತ್ತು ಲಭ್ಯವಿರುವ ಯಂತ್ರಗಳ ಪಟ್ಟಿಯನ್ನು ಕೃಷಿ ಯಂತ್ರಧಾರೆ ಕೇಂದ್ರದಲ್ಲಿ ಪ್ರಕಟಿಸಲಾಗಿರುತ್ತದೆ.

ಕೃಷಿ ಯಂತ್ರಧಾರೆ ಜೊತೆಗೆ ಸಿಬ್ಬಂದಿ ಬರುತ್ತಾರೆ...

ಬಾಡಿಗೆ ಕೇಂದ್ರಗಳಿಂದ ಯಂತ್ರಗಳನ್ನು ಕಳುಹಿಸಿಕೊಡುವಾಗ ನುರಿತ ಸಿಬ್ಬಂದಿಯು ಬರುತ್ತಾರೆ. ಗದ್ದೆ ಅಥವಾ ತೋಟಕ್ಕೆ ಯಂತ್ರ ಇಳಿದ ಆನಂತರ ಗಂಟೆಗಳ ಆಧಾರದಲ್ಲಿ ಬಾಡಿಗೆ ನೀಡಬೇಕಾದ ಸಮಯ ಆರಂಭವಾಗುತ್ತದೆ. ರೈತರು ಬೇಕಾದ ಯಂತ್ರೋಪಕರಣಗಳನ್ನು ಮುಂಗಡ ಪಾವತಿಸಿ ಅನುಕೂಲಕ್ಕೆ ತಕ್ಕಂತೆ ಕಾಯ್ದಿರಿಸಿಕೊಳ್ಳುವ ಅವಕಾಶವಿದೆ.

**ಎಲ್ಲೆಲ್ಲಿವೆ ಕೃಷಿ ಯಂತ್ರಧಾರೆ ಕೇಂದ್ರಗಳು?**

ಕೃಷಿ ಉಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ 'ಕೃಷಿ ಯಂತ್ರಧಾರೆ' ಕೇಂದ್ರಗಳು 2014–15 ರಿಂದ ಕಾರ್ಯಾರಂಭವಾಗಿವೆ. ರಾಜ್ಯ ಕೃಷಿ ಇಲಾಖೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಇವುಗಳನ್ನು ನಡೆಸುತ್ತಿದೆ. ಸದ್ಯ ರಾಜ್ಯದ 490 ಹೋಬಳಿ ಸ್ಥಳಗಳಲ್ಲಿ ಈ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 164 ಕೇಂದ್ರಗಳಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಇವುಗಳನ್ನು ನಿರ್ವಹಿಸಲಾಗುತ್ತಿದ್ದರೆ, ಬೆಂಗಳೂರಿನ ವಿಎಸ್‌ಟಿ ಟಿಲ್ಲರ್ಸ್ ಟ್ರ್ಯಾಕ್ಟರ್ ಲಿಮಿಟೆಡ್ 79 ಕೇಂದ್ರಗಳನ್ನು ನಿರ್ವಹಿಸುತ್ತಿದೆ. ಹೀಗೆ ಖಾಸಗಿ ಸಹಭಾಗಿತ್ವದಲ್ಲೂ ಹಲವು ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳಿಗೂ ವಹಿಸಿಕೊಡಬೇಕೆಂಬ ಬೇಡಿಕೆ ರೈತ ಸಮುದಾಯದಿಂದ ಕೇಳಿಬರುತ್ತಿದೆ.

**ಯಾವೆಲ್ಲ ಕೃಷಿ ಯಂತ್ರಗಳು ಬಾಡಿಗೆಗೆ ಲಭ್ಯ?**

ಟ್ರಾಕ್ಟರ್, ಪವರ್ ಟಿಲ್ಲರ್, ರೋಟರಿ ಟಿಲ್ಲರ್, ಎಂ.ಬಿ.ನೇಗಿಲು, ರೋಟಾವೇಟರ್, ಡಿಸ್ಕ್ ನೇಗಿಲು, ಡಿಸ್ಕ್ ಹ್ಯಾರೋ, ನೇಗಿಲು, ಕಬ್ಬಿನ ಸ್ಟಬಲ್ ಶೇವರ್ ಮತ್ತು ನೇಗಿಲು, ಲೆವೆಲ್ಲರ್ ಬ್ಲೇಡ್, ಕೇಜ್ ವೀಲ್, ಬದು ನಿರ್ಮಾಣ ಯಂತ್ರ, ಭತ್ತ ನಾಟಿ ಯಂತ್ರ, ಬದು ಮತ್ತು ಸಾಲು ತೆಗೆಯುವ ಯಂತ್ರ, ಲೇಸರ್ ಆಧಾರಿತ ಸಮತಟ್ಟು ಯಂತ್ರ, ಗುಂಡಿ ತೆಗೆಯುವ ಯಂತ್ರ, ಬಿತ್ತನೆ ಮತ್ತು ರಸಗೊಬ್ಬರ ಕೂರಿಗೆ ಯಂತ್ರ, ಶೂನ್ಯ ಬೇಸಾಯ ಹೊದಿಕೆ ಯಂತ್ರ, ಸಿಂಪಡಣಾ ಯಂತ್ರಗಳು, ಬಹು ಬೆಳೆ ಒಕ್ಕಣೆ ಯಂತ್ರ, ಕೂರಿಗೆ, ನರ್ಸರಿ ಟ್ರೇ, ಕಳೆ ತೆಗೆಯುವ ಯಂತ್ರ, ತೂರುವ ಯಂತ್ರ, ನೆಲಗಡಲೆ ಸುಲಿಯುವ/ಒಕ್ಕಣೆ ಯಂತ್ರ, ಕಬ್ಬು ಸ್ಟ್ರಿಪ್ಪರ್, ಅಡಿಕೆ ಸುಲಿಯುವ ಯಂತ್ರ, ಕಟಾವು ಯಂತ್ರ, ಬಹುಬೆಳೆ ಕಟಾವು ಯಂತ್ರ, ಕಾಳು ಮೆಣಸು ಬಿಡಿಸುವ ಯಂತ್ರ, ಪಂಪ್ ಸೆಟ್, ನೀರಿನ ಟ್ಯಾಂಕರ್, ಅಲ್ಯುಮಿನಿಯಂ ಪೈಪುಗಳು, ಸ್ಪ್ರಿಂಕ್ಲರ್‌ಗಳು, ತಳ್ಳು ಗಾಡಿ, ಅಡಿಕೆ/ ತೆಂಗಿನ ಮರ ಹತ್ತುವ ಯಂತ್ರ, ಟ್ರಾಲಿಗಳು, ಗರಗಸ ಹೀಗೆ 44 ಬಗೆಯ ಯಂತ್ರ ಹಾಗೂ ಉಪಕರಣಗಳು ಲಭ್ಯವಿದೆ. ಆದರೆ ಇದೆಲ್ಲಾ ಆಯಾ ಭಾಗದ ಕೃಷಿ ಅವಶ್ಯಕತೆಗೆ ಅನುಗುಣವಾಗಿ ಲಭ್ಯವಿರಲಿವೆ.

ಒಟ್ಟಿನಲ್ಲಿ ರೈತರು ಈ ಕೃಷಿ ಯಂತ್ರಧಾರೆ ಕೇಂದ್ರದಿಂದ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯುವ ಮೂಲಕ ಸಮಯ ಹಾಗೂ ಖರ್ಚನ್ನು ಉಳಿಸಬಹುದು.



Downloaded From:www.kpscvaani.com




# ಭಾರತದ ಹೆಗ್ಗಳಿಕೆಯನ್ನು ಹೆಚ್ಚಿಸಿದ ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ

ಆರ್. ಎಸ್. ಪಾಟೀಲ

ಸಿರಿಧಾನ್ಯಗಳೆಂದರೆ ಬಡರವರ ಬೆಳೆ, ಬಡವರ ಆಹಾರ ಎಂದು ಮೂಗು ಮುರಿಯುವ ಕಾಲ ಒಂದಿತ್ತು. ಆದರೆ ಜಮಾನ ಈಗ ಬದಲಾಗಿದೆ. ಸಿರಿವಂತರು, ಸ್ಥಿತಿವಂತರು, ಉಳ್ಳವರು ಬಲ್ಲಿದರು, ಎಲ್ಲರೂ ಒಟ್ಟೊಟ್ಟಿಗೆ ಹುಡುಕಿಕೊಂಡು ಬರುವಂತೆ ಮೋಡಿ ಮಾಡಿದ ಹೆಗ್ಗಳಿಕೆ ಈಗ ಸಿರಿಧಾನ್ಯಗಳಿಗಿದೆ. ಹಾಗೆ ನೋಡಿದರೆ ಭಾರತವೇ ಈ ಸಿರಿಧಾನ್ಯಗಳ ತವರು ನೆಲ ಎನ್ನಬೇಕು. ಏಕೆಂದರೆ ಇಡೀ ಜಗತ್ತಿನಲ್ಲಿ ಅತೀ ಹೆಚ್ಚು ಸಿರಿಧಾನ್ಯ ಉತ್ಪಾದನೆ ಆಗುತ್ತಿರುವುದು ಭಾರತದಲ್ಲೆ. ಪ್ರಪಂಚದಲ್ಲಿ ಕಂಡು ಬರುವ 10 ಸಿರಿಧಾನ್ಯಗಳ ಪೈಕಿ ಸಾಮೆ, ನವಣೆ, ಕೊರಲೆ, ಹಾರಕಗಳ ಮೂಲ ಭಾರತವೇ ಆಗಿದೆ.

2023 ರನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆಯನ್ನಾಗಿ ಆಚರಿಸುವ ಪ್ರಸ್ತಾಪವೂ ಭಾರತದ್ದೆ. ವಿಶ್ವ ಸಂಸ್ಥೆಯು ಒಪ್ಪಿಕೊಂಡು ಅಂಗೀಕರಿಸಿದ ಈ ನಿರ್ಣಯವನ್ನು ಎಪ್ಪತ್ತಕ್ಕೂ ಹೆಚ್ಚು ರಾಷ್ಟ್ರಗಳು ಬೆಂಬಲಿಸಿರುವುದು ಭಾರತದ ಹೆಗ್ಗಳಿಕೆಗೆ ಗರಿ ಮೂಡಿದೆ.

ಭಾರತದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಸಿರಿಧಾನ್ಯ ವರ್ಷಾಚರಣೆ ಕುರಿತಂತೆ ಕಾರ್ಯಕ್ರಮಗಳ ಸರಣಿಯನ್ನೇ ಸಿದ್ಧಪಡಿಸಿದೆ. ಆಹಾರ ಭದ್ರತೆ ಹಾಗೂ ಆರೋಗ್ಯ ವೃದ್ಧಿಯಲ್ಲಿ ಸಿರಿಧಾನ್ಯಗಳ ಮಹಿಮೆಯನ್ನು ಸಾರುವುದು, ಸಿರಿಧಾನ್ಯಗಳ ಸುಸ್ಥಿರ ಉತ್ಪಾದನೆಯ ಅಗತ್ಯತೆ ಕುರಿತು ಅರಿವು ಮೂಡಿಸುವುದು, ಸಿರಿಧಾನ್ಯಗಳ ಗುಣಮಟ್ಟ ಸುಧಾರಣೆಗೆ ವ್ಯಾಪಕ ಸಂಶೋಧನೆ ಕೈಗೊಳ್ಳುವುದು ಇನ್ನು ಹತ್ತು ಹಲವಾರು ಯೋಜನೆಗಳು ಸಿರಿಧಾನ್ಯ ವರ್ಷಾಚರಣೆಯ ಕಾರ್ಯಕ್ರಮದ ಅಜೆಂಡಾದಲ್ಲಿವೆ.

ರಾಗಿ, ಜೋಳ, ಸಾಮೆ, ಸಜ್ಜೆ, ಕೊರಲೆ, ನವಣೆ, ಹಾರಕ ಹಾಗೂ ಬರಗು ಭಾರತದಲ್ಲಿ ಬೆಳೆಯುವ ಮತ್ತು ಬಳಸುವ ಸಿರಿಧಾನ್ಯಗಳಾಗಿವೆ. ಹಾಗೆ ನೋಡಿದರೆ ಸಿಂಧೂ ನಾಗರೀಕತೆಯಲ್ಲಿಯೇ ಇವುಗಳ ಬೇಸಾಯ ಹಾಗೂ ಬಳಕೆ ಕುರಿತಂತೆ ಪುರಾವೆಗಳಿವೆ. ಆಹಾರಕ್ಕಾಗಿ ಪಳಗಿಸಿದ ಮೊದಲ ಆಹಾರ ಧಾನ್ಯಗಳಿವು ಅನ್ನುವ ಹೆಗ್ಗಳಿಕೆಯೂ ಈ ಸಿರಿಧಾನ್ಯಗಳ ಹೆಚ್ಚುಗಾರಿಕೆಯಾಗಿದೆ.

**ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆಯನ್ನು ವಿಶ್ವದ ಎಪ್ಪತ್ತಕ್ಕೂ ಹೆಚ್ಚು ದೇಶಗಳು ಬೆಂಬಲಿಸಿರುವುದು ಭಾರತದ ಹೆಗ್ಗಳಿಕೆಯನ್ನು ಹೆಚ್ಚಿಸಿದೆ.**



Downloaded From:www.kpscvaani.com



ಜಗತ್ತಿನ ಸುಮಾರು 131 ರಾಷ್ಟ್ರಗಳಲ್ಲಿ ಕಿರುಕಾಳು ಕೃಷಿ ನಡೆಸಲಾಗುತ್ತಿದೆ. ಏಷ್ಯಾ ಮತ್ತು ಆಫ್ರಿಕಾದಲ್ಲಿ ಸುಮಾರು 60 ಕೋಟಿ ಜನರ ಪಾಲಿಗೆ ಸಿರಿಧಾನ್ಯಗಳೇ ಸಾಂಪ್ರದಾಯಿಕ ಆಹಾರವೆನ್ನವುದೂ ಅಷ್ಟೇ ಮುಖ್ಯ. ಜಗತ್ತಿನ ಸಿರಿಧಾನ್ಯ ಉತ್ಪಾದನೆಯಲ್ಲಿ ಶೇ. 20% ರಷ್ಟು ಪಾಲು ಭಾರತದೆ ಆಗಿದೆ. ಚೀನಾ ಮತ್ತು ನೈಜೀರಿಯಾ ಸಿರಿಧಾನ್ಯ ಕೃಷಿಯಲ್ಲಿ ಖುಷಿಪಡುತ್ತಿರುವ ಇತರೆ ರಾಷ್ಟ್ರಗಳೆನ್ನಬಹುದು.

**ಬರಡು ನೆಲದ ಗಟ್ಟಿ ಬೆಳೆಗಳು:**

ಸಿರಿಧಾನ್ಯಗಳೆಂದರೆ ಇವು ಪಕ್ಕಾ ನಾಟಿ ತಳಿ ಬೆಳೆಗಳು. ಪ್ರಕೃತಿಯಲ್ಲಾಗುವ ವಿಕೋಪ, ಪ್ರಕೋಪ, ವಾತಾವರಣ ವೈಪರಿತ್ಯಗಳಿಗೆ ಅಂಜದೆ ಅಳುಕದೆ ಬೆಳೆಯುವ ಗುಣ ಇವುಗಳ ಜೀನ್‌ಗಳಲ್ಲೇ ಅಂತರ್ಗವಾಗಿದೆ. ನೀರಾವರಿ ನೆಲ ಇರಲಿ ಬಯಲು ಬೇಸಾಯವಿರಲಿ, ಮಳೆ ಹೆಚ್ಚಾಗಲಿ, ಮಳೆಯ ಅಭಾವವಿರಲಿ ಎಲ್ಲದಕ್ಕೂ ಹೊಂದಾಣಿಕೆ ಮಾಡಿಕೊಂಡು ಹುಲುಸಾಗಿ ಬೆಳೆಯಬಲ್ಲ ಔದಾರ್ಯ ಬೆಳೆಗಳಿವು. ಇನ್ನು ನೆಲಗುಣ, ಅದು ಅಷ್ಟೆ. ಕಪ್ಪು, ಕೆಂಪು, ಮಸಾರೆ ಕಲ್ಲು ಮರಡಿ, ಬರಡು ಭೂಮಿ ಎಲ್ಲಾದರು ಸರಿ. ನಾಟಿಯಾದರೆ ಸಾಕು ಹುಲುಸಾಗಿ ಬೆಳೆದು ರೈತರಿಗೆ ಆಸರೆಯಾಗಬಲ್ಲ, ಬರಗಾಲದಲ್ಲೂ ಹುಲುಸಾಗಿ ಬೆಳೆಯಬಲ್ಲ ಗ್ಯಾರಂಟಿ ಬೆಳೆಗಳೆನ್ನುವುದು ಸಿರಿಧಾನ್ಯಗಳ ಖ್ಯಾತಿಯಾಗಿದೆ.

ಇನ್ನು ರೋಗ, ಕೀಟಾಣು, ವೈರಾಣುಗಳ ಆಟ ಈ ತೃಣ ಧಾನ್ಯಗಳ ಮುಂದೆ ನಡೆಯುವುದೇ ಇಲ್ಲ. ರೋಗ, ಕೀಟಾಣುಗಳ ಹುಟ್ಟಡಗಿಸುವ ಅದ್ಭುತ ರೋಗ ನಿರೋಧಕ ಶಕ್ತಿ ಈ ತೃಣ ಮೂಲ ಧಾನ್ಯಗಳಿಗೆ ಪ್ರಕೃತಿ ದತ್ತವಾಗಿ ಬಂದ ಬಳುವಳಿಯಾಗಿದೆ ಎನ್ನಬಹುದು.

**ಸಿರಿಧಾನ್ಯಗಳಿಗೆ ಶ್ರೀಮಂತರ ದುಂಬಾಲು:**

ಬದಲಾಗುತ್ತಿರುವ ಜೀವನ ಶೈಲಿ, ವ್ಯಾಯಾಮ ವಿಶ್ರಾಂತಿ ಇಲ್ಲದ ಬದುಕು, ಮನೆ ಊಟದಿಂದ ವಿಮುಖರಾಗುತ್ತಿರುವುದು, ಜಂಕ್ ಫುಡ್‌ಗಳ ದಾಸರಾಗುವುದು, ಕೊಲೆಸ್ಟ್ರಾಲ್‌ಯುತ ಆಹಾರ ಸೇವನೆ, ಉಪ್ಪು-ಸಕ್ಕರೆ ಅಡುಗೆಗಳಿಗೆ ಅಂಟಿಕೊಳ್ಳುವುದು ಈಗ ಸರ್ವೆ ಸಾಮಾನ್ಯವಾಗಿದೆ. ಇವೆಲ್ಲವೂ ಬಿ.ಪಿ, ಶುಗರ್, ಬೊಜ್ಜು, ಮಲಬದ್ಧತೆ, ಹೃದಯ ಸಂಬಂಧಿ ಕಾಯಿಲೆಗಳಿಗೆ ಆಮಂತ್ರಣ ಇದ್ದಂತೆ. ಈ ಎಲ್ಲ ಸಮಸ್ಯೆಗಳಿಗೆ ಕಿರು ಧಾನ್ಯ ಆಹಾರಗಳು ವರದಾನವಾಗಿ ಬಂದಂತಿವೆ. ಕೇವಲ ಬಡವರ ಆಹಾರವೆಂದೇ ಸೀಮಿತವಾಗಿದ್ದ ಸಿರಿಧಾನ್ಯಗಳನ್ನು ಸಿರಿವಂತರೂ ಹುಡುಕಿಕೊಂಡು ದುಂಬಾಲು ಬೀಳುವ ಜಮಾನ ಬಂದಿದೆ.

ನಿಧಾನವಾಗಿ ಜೀರ್ಣವಾಗಬಲ್ಲ ಪ್ರೋಟೀನ್, ಫೈಬರ್, ವಿಟಮಿನ್ ಹಾಗೂ ಖನಿಜಾಂಶಗಳ ಆಗರದಂತಿವೆ ಈ ಸಿರಿಧಾನ್ಯಗಳು, ಮಧುಮೇಹ, ರಕ್ತದೊತ್ತಡ, ಹೃದಯಘಾತ, ಬೊಜ್ಜುಗಳಿಗೆ ಪರಿಹಾರವಾಗಿವೆ. ಮಕ್ಕಳು ಮತ್ತು ಮಹಿಳೆಯರಲ್ಲಿ ಪೌಷ್ಠಿಕಾಂಶದ ಕೊರತೆಯ ವಿರುದ್ಧ ಗುರಾಣಿಯಂತೆ ನಿಲ್ಲುತ್ತವೆ ಈ ಸಿರಿಧಾನ್ಯಗಳು. ಇನ್ನು ಗರ್ಭಿಣಿಯರು ಹಾಗೂ ಶಿಶುಗಳನ್ನು ಅತಿಯಾಗಿ ಕಾಡುವ ರಕ್ತಹೀನತೆ ಸಮಸ್ಯೆಗಳಿಗೆ ಕಬ್ಬಿಣಾಂಶದ ಆಗರವಾಗಿರುವ ಸಿರಿಧಾನ್ಯಗಳಿಂದ ತಯಾರಿಸಿದ ಆಹಾರವೇ ಅಮೃತ.

**ಪೋಷಕಾಂಶಗಳ ಖಜಾನೆ:**

ಪೋಷಕಾಂಶಗಳ ಆಗರವೇ ಆಗಿರುವುದರಿಂದ ಸಿರಿಧಾನ್ಯಗಳನ್ನು ಪೋಷಕಾಂಶಗಳ ಖಜಾನೆ ಎಂದೂ ಬಣ್ಣಿಸಲಾಗಿದೆ. ಗ್ಲುಟೆನ್ (ಅಂಟು) ಮುಕ್ತವಾಗಿರುವುದು, ಗ್ಲೆಸೆಮಿಕ್ ಸೂಚ್ಯಾಂಕ ಕಡಿಮೆ ಇರುವುದು, ಸಿರಿಧಾನ್ಯಗಳ ವೈಶಿಷ್ಟ್ಯ. 'ಗ್ಲುಟೆನ್' ಇದು ಒಂದು ಪ್ರೋಟೀನ್ ಆಗಿದ್ದು ಗೋದಿ ಬಾರ್ಲಿಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇದು ಆರೋಗ್ಯವಂತರಲ್ಲಿ ತೊಂದರೆ ಮಾಡದಿದ್ದರೂ. ಕರಳು ಸಂಬಂಧಿ ಕಾಯಿಲೆ, ಆತಂಕ, ಖಿನ್ನತೆ, ಆಯಾಸ, ಮಲಬದ್ಧತೆಯಂತಹ ಆರೋಗ್ಯದ ತೊಂದರೆಗಳಿಗೆ ಗ್ಲುಟಿನ್ ನೇರವಾಗಿ ಕಾರಣವಾಗುತ್ತದೆ. ಯಾವುದೇ ಆಹಾರ ಸೇವನೆಯಿಂದಲೂ ರಕ್ತದಲ್ಲಿನ ಗ್ಲುಕೋಸ್ ಅಂಶ ಏರಿಕೆಯಾಗುತ್ತದೆ. ಇದನ್ನೆ ಗ್ಲೆಸೆಮಿಕ್ ಇಂಡೆಕ್ಸ್ ಅನ್ನುವುದು. ಆದರೆ ಒಂದೊಂದು ಆಹಾರಕ್ಕೂ ಒಂದೊಂದು ಗ್ಲೆಸೆಮಿಕ್ ಇಂಡೆಕ್ಸ್ ಉಂಟು, 100 ಗ್ರಾಂ ಸಕ್ಕರೆ ಸೇವಿಸಿದಾಗ ರಕ್ತದಲ್ಲಿನ ಗ್ಲುಕೋಸ್ ಮಟ್ಟ 100ಕ್ಕೆ ಏರುವುದು. ಅಂದರೆ ಸಕ್ಕರೆಯ ಜಿ.ಐ. (ಗ್ಲೆಸೆಮಿಕ್ ಇಂಡೆಕ್ಸ್) 100. ಅಕ್ಕಿಯ ಜಿ.ಐ. 80, ಜೋಳ, ರಾಗಿ, ಗೋದಿಗಳ ಜಿ.ಐ. 70 ರಿಂದ 75. ಸಿರಿಧಾನ್ಯಗಳ ಜಿ.ಐ. 50-57 ಅನ್ನುವುದು ಸಂಶೋಧನೆಗಳಿಂದ ಸಾಬೀತಾಗಿದೆ. ಈ ಕಾರಣಕ್ಕಾಗಿಯೇ ಮಧುಮೇಹಿಗಳು ಈ ಸಿರಿಧಾನ್ಯಗಳಿಗೆ ದುಂಬಾಲು ಬಿದ್ದಿರುವುದು.

ಅತಿ ಹೆಚ್ಚು ಪ್ರೋಟೀನ್‌ಗಳು, ನಾರಿನಾಂಶ, ಬಿ ಕಾಂಪ್ಲೆಕ್ಸ್, ವಿಟಮಿನ್‌ಗಳು ಅಗತ್ಯ. ಅಮಿನೊ ಆಮ್ಲಗಳು, ಫೋಲಿಕ್ ಆಮ್ಲ, ವಿಟಮಿನ್ 'ಇ' ಸಿರಿಧಾನ್ಯಗಳಲ್ಲಿ ಸಮೃದ್ಧವಾಗಿವೆ. ದೇಹಕ್ಕೆ ಬೇಕಾದ ಕಬ್ಬಿಣಾಂಶ, ಮೇಗ್ನೇಸಿಯಂ, ತಾಮ್ರ, ರಂಜಿಕೆ, ಸತು, ಕ್ಯಾಲ್ಸಿಯಂ, ಪೋಟ್ಯಾಶಿಯಂಗಳು ಹೇರಳವಾಗಿವೆ.

ನಾರಿನಾಂಶ ಶೇ.1 ರಿಂದ 9ರ ವರೆಗೆ ಇರುವುದರಿಂದ ಕೊಲೆಸ್ಟ್ರಾಲ್ ಕರಗಿಸಿ ಹೃದಯ ಕಾಯಿಲೆಗಳಿಗೆ ಕಡಿವಾಣ ಹಾಕುವ ತಾಕತ್ತು ಸಿರಿಧಾನ್ಯಗಳ ಶ್ರೀಮಂತ ಗುಣವಾಗಿದೆ.

ಶೇ.4 ರಿಂದ 6ರ ವರೆಗಿನ ಕೊಬ್ಬಿನಾಂಶ ಈ ಸಿರಿಧಾನ್ಯಗಳಲ್ಲಿರುವುದನ್ನು



Downloaded From:www.kpscvaani.com

ಸಂಶೋಧನೆಗಳು ಕಂಡುಕೊಂಡಿವೆ. ಆದರೆ ಈ ಕೊಬ್ಬಿನಾಂಶದಲ್ಲಿ ಇರುವುದು ದೇಹಕ್ಕೆ ಅವಶ್ಯ ಬೇಕಾಗಿರುವ ಮೇದೋ ಆಮ್ಲಗಳೇ. ಇದರಿಂದಾಗಿ ಈ ಧಾನ್ಯಗಳು ದೇಹಕ್ಕೆ ಬೇಕಾಗಿರುವ ಶಕ್ತಿಯ ಆಕರವಲ್ಲದೆ ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಅಂಗವಾಗಿ ಪ್ರತಿ ಸಂಚಿಕೆಯಲ್ಲೂ ನಮ್ಮ ಸಾಂಪ್ರದಾಯಿಕ ಸಿರಿಧಾನ್ಯಗಳ ಪರಿಚಯ ಮಾಡಿಸಲು ಉದ್ದೇಶಿಸಲಾಗಿದ್ದು, ಈ ಸಂಚಿಕೆಯಲ್ಲಿ ಬರಗು ಬೆಳೆಯ ಕುರಿತು ಪರಿಚಯಿಸಲಾಗಿದೆ.

**ಬರಗಾಲದ ಬೆಳೆ ಬರಗು**

ಬರಗು ನೋಡಲು ನವಣೆ ಕಾಳಿನಂತೆ ಕಂಡರೂ ಕಣ್ಣರಳಿಸಿ ನೋಡಿದಾಗ ಗೊತ್ತಾಗುತ್ತದೆ ಆ ಕಾಳಿನ ಗಾತ್ರ ನವಣೆಗಿಂತಲೂ ತುಸು ದಪ್ಪ ಅನ್ನುವುದು. ಆಕರ್ಷಕ ಅಪರಂಜಿ ವರ್ಣದಿಂದ ವಿಭಿನ್ನವಾಗಿ ಕಾಣುತ್ತದೆ. ಸಾಮೆಗೆ ಹೋಲಿಸಿದಲ್ಲಿ ಬರಗು ಬೆಳೆಯುವವರ ಸಂಖ್ಯೆ ಕಡಿಮೆ. 'ಬರಗು ಬೆಳೆದರೆ ಬರಗಾಲ ತಪ್ಪಲ್ಲ' ಅನ್ನುವ ಮಾತು ಕೇಳಿ ಬರುತ್ತಿದ್ದ ಕಾಲ ಒಂದಿತ್ತು. ಇದಕ್ಕೆಂದೇ ಇರಬೇಕು ಬರಗು ಬೆಳೆಯುವುದೂ ಬೇಡ, ಬರಗಾಲ ತಂದುಕೊಳ್ಳುವುದು ಬೇಡ ಎಂದುಕೊಂಡು ಬರಗು ಬೆಳೆಗೆ ಗುಡ್‌ಬೈ ಹೇಳಿರಲಿಕ್ಕೂ ಸಾಕು. ಬೆಳೆದು ನಿಂತ ಬರಗಿನ ಫಸಲು ದೂರದಿಂದ ಸಾಮೆಯಂತೆಯೇ ಕಂಗೊಳಿಸಿದರೂ ಹತ್ತಿರ ಹೋದಾಗ ಗೊತ್ತಾಗುತ್ತದೆ ಇದು ಸಾಮೆಯಲ್ಲ ಅಂತ. ಸಾಮೆಯ ಗಿಡಗಳು ಸಣಕಲು ಕಡ್ಡಿಯಂತೆ ಕಂಡು ಬಂದರೆ ಮೈದುಂಬಿಕೊಂಡು ಬೆಳೆದ ಬರಗಿನ ಫಸಲು ದಷ್ಟ ಪುಷ್ಟವಾಗಿ ಕಂಡು ಬರುತ್ತದೆ. ತೆನೆ ಭಾಗವೂ ಅಷ್ಟೇ. ಸಾಮೆ ತೆನೆಗಿಂತ ತುಸು ಭಿನ್ನ. ಬರಗಿನ ಫಸಲಿನ ಎತ್ತರವೂ ಸಾಮೆ ಫಸಲಿಗಿಂತ ಸ್ವಲ್ಪ ಎತ್ತರವೆನ್ನಬೇಕು.ಕಸುವಿನ (ಫಲವತ್ತಾದ) ಹೊಲದಲ್ಲಿ ನಾಲ್ಕು ಅಡಿ ಎತ್ತರಕ್ಕೂ ಬೆಳೆದು ಸೊಂಪಾಗಿ ಕಂಗೊಳಿಸುತ್ತದೆ.

ಸಿರಿಧಾನ್ಯಗಳಲ್ಲೇ ಮನುಕುಲದ ಬಳಕೆಗೆ ಮೊಟ್ಟ ಮೊದಲು ಪರಿಚಯವಾದ ಹೆಗ್ಗಳಿಕೆ ಬರಗಿನದು. ಮಧ್ಯ ಏಷ್ಯಾ, ಪೂರ್ವ ಏಷ್ಯಾ ಈ ಧಾನ್ಯದ ಜನ್ಮದಾತ ಭೂಮಿ ಎಂದೂ ಹೇಳಲಾಗುತ್ತದೆ. ಬರಗಿನ ತರಾವರಿ ತಳಿಗಳು ಮಂಗೋಲಿಯಾ, ಚೀನಾ ಮತ್ತು ಪೂರ್ವ ಏಷ್ಯಾದಲ್ಲಿ ಕಂಡು ಬರುತ್ತವೆ. ಹಳದಿ ನದಿ ಬಯಲು ಚೀನಾದ ಪ್ರಸಿದ್ಧವಾದ ತಾಣ. ಆ ಹಳದಿ ನದಿ ಬಯಲೇ ಈ ಸಿರಿ ಧಾನ್ಯದ ಹುಟ್ಟಿನ ಸ್ಥಳ ಎಂದೂ ಪುರಾವೆಗಳು ಹೇಳುತ್ತವೆ.

ಹಾಗಾಗಿ ಚೀನಾ ಬರಗು ಬೆಳೆಯ ತವರು ನೆಲ ಅನ್ನಬಹುದು. ಇತಿಹಾಸ ಪ್ರಸಿದ್ಧ ನವಶಿಲಾಯುಗದ ಕಾಲದಿಂದಲೂ ಬರಗು ಬೆಳೆಯುತ್ತಿದ್ದ ಬಗ್ಗೆ, ಬರಗಿನ ಬೇಸಾಯ ಮಾಡುತ್ತಿದ್ದ ಬಗ್ಗೆ ಪುರಾವೆಗಳಿವೆ ಅನ್ನುತ್ತಾರೆ ಕೃಷಿ ಪಂಡಿತರು. 'ಪ್ರೊಸೋ ಮಿಲ್ಲೇಟ್' (Proso Millate) ಇದರ ಆಂಗ್ಲ ಹೆಸರು. 'ಫೆನಿಕಮ್ ಮಿಲಿಯೇಸಿಯಮ್' (Penicum Miliaceum) ಎಂಬುದು ಇದರ ವೈಜ್ಞಾನಿಕ ನಾಮವಾಗಿದೆ.

ಒಣ ಬೇಸಾಯಕ್ಕೆ ಹೇಳಿ ಮಾಡಿಸಿದ ಬೆಳೆ ಇದು. ಬರನಿರೋಧಕ ಶಕ್ತಿ ಬರಗು ಬೆಳೆಗೆ ವರದಾನವಾಗಿ, ಪ್ರಕೃತಿದತ್ತವಾಗಿ ಬಂದಿರುವ ಬಳುವಳಿಯಾಗಿದೆ. ಬಿತ್ತಿದ ಬಳಿಕ ಒಂದೆರೆಡು ಬಾರಿ ಮಳೆಯಾದರೂ ಸಾಕು, ಪುಂಕಾನು ಪುಂಕ ಬೆಳೆದು, ಮನೆ ತುಂಬಾ ಕಾಳು ಮತ್ತು ಕಣ ತುಂಬಾ ಮೇವು ಕೊಡುವ ನಂಬಿಗಸ್ಥ ಬೆಳೆ ಅನ್ನುವಲ್ಲಿ ಅನುಮಾನವೇ ಇಲ್ಲ. ಅದಕ್ಕೆಂದೇ ಬರಗನ್ನು ಬರಗಾಲದ ಬೆಳೆ ಅನ್ನುವುದರಲ್ಲಿ ಸಾಕಷ್ಟು ಅರ್ಥವಿದೆ. 'ಬರಗು ಇದ್ದರೆ ಬರಗಾಲದಲ್ಲೂ ಬದುಕು' ಅನ್ನುವ ನಾಣ್ಣುಡಿ ಅರ್ಥಪೂರ್ಣ. ಹಾಗೆ ನೋಡಿದರೆ ಸಿರಿಧಾನ್ಯಗಳಲ್ಲೇ ಬರಗು ತೀರಾ ಅಲ್ಪಾವಧಿ ಬೆಳೆಯಾಗಿದೆ. ಬಿತ್ತಿದ ಅರವತ್ತೈದರಿಂದ ಎಪ್ಪತ್ತು ದಿನಗಳಲ್ಲಿ ಹುಲುಸಾಗಿ ಬೆಳೆದು ಕಟಾವಿಗೆ ಸಿದ್ಧವಾಗುತ್ತದೆ. ಬರಗು ಒಂದು ಸತ್ವ ಪೂರ್ಣ ಧಾನ್ಯ. ಇದರಲ್ಲಿ ಸಾರಜನಕ, ಸಸಾರಜನಕ, ಕೊಬ್ಬು, ಪಿಷ್ಠ ಮತ್ತು ಲವಣಾಂಶಗಳು ಸಮೃದ್ಧವಾಗಿವೆ. ನಾರಿನಂಶ, ರಂಜಕ ಹಾಗೂ ಥಯಮಿನ್‌ಗಳು ಯಥೇಚ್ಛವಾಗಿರುವುದರಿಂದ ಬರಗು ಒಂದು ಉತ್ತಮ ಪೌಷ್ಟಿಕ ಆಹಾರವಾಗಿದೆ.

ಬರಗು ಪಕ್ಕಾ ನಾಟಿ ತಳಿ ಬೆಳೆಯಾಗಿದ್ದು, ಅದ್ಭುತವಾದ ರೋಗನಿರೋಧಕ ಶಕ್ತಿಯನ್ನು ಹೊಂದಿದೆ. ಕೀಟ ಕಾಟ, ರೋಗ ರುಜಿನಗಳಿಗೆ ಬರಗು ಬಗ್ಗುವುದೇ ಇಲ್ಲ. ಕೀಟನಾಶಕ, ರೋಗನಾಶಕಗಳನ್ನು ಇಲ್ಲಿ ಬಳಕೆ ಮಾಡುವ ಪ್ರಸಂಗ ಬರುವುದೇ ಇಲ್ಲ. ರಸಗೊಬ್ಬರಗಳನ್ನೂ ಬಯಸದ ಬರಗು ಒಂದು ಪರಿಶುದ್ಧ ಆಹಾರವಾಗಿದೆ. ಸಾವಯವ ಬೇಸಾಯಕ್ಕಾಗಿ ಜೆ.ಪಿ.ಯು.ಪಿ ಮತ್ತು ಡಿ.ಎಚ್.ಪಿ.–2769 ಎಂಬ ಸುಧಾರಿತ ಬರಗು ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

100 ಗ್ರಾಂ ಧಾನ್ಯದಲ್ಲಿ 12.5 ಗ್ರಾಂ ಸಸಾರಜನಕ, 70.4 ಗ್ರಾಂ ಪಿಷ್ಠ, 1.1 ಗ್ರಾಂ ಕೊಬ್ಬು, 2.2 ಗ್ರಾಂ ನಾರಿನಂಶ, 1.9 ಗ್ರಾಂ ಖನಿಜಾಂಶ 14 ಮಿ.ಗ್ರಾಂ.ಸುಣ್ಣ, 206 ಮಿ.ಗ್ರಾಂ.ರಂಜಕ, 10 ಮಿ.ಗ್ರಾಂ. ಕಬ್ಬಿಣ 17.2 ಮಿ.ಗ್ರಾಂ ಸತು ಹೊಂದಿರುವ ಬರಗು ಒಂದು ಸತ್ವಪೂರ್ಣ ಆಹಾರವಾಗಿದೆ.

**ವೆರೈಟಿ ವೆರೈಟಿ ಆಹಾರ:**

ಸಾಮೆ ನವಣೆಯಂತೆಯೇ ಈ ಧಾನ್ಯವೂ ಹೊಟ್ಟಿನ ಹೊರಕವಚದಿಂದ ಆವೃತ್ತವಾಗಿರುತ್ತದೆ. ಹೀಗಾಗಿ ಬರಗನ್ನು ನೇರವಾಗಿ ಧಾನ್ಯ ರೂಪದಲ್ಲಿ ಬಳಸುವುದು ಕಮ್ಮಿ, ಗಿರಣಿಗೆ ಹಾಕಿಸಿ ತೌಡು ತೆಗೆದಾಗ ದೊರೆಯುವ ಬರಗಕ್ಕಿಯನ್ನು ವೈವಿಧ್ಯಮಯ ಆಹಾರ ತಿಂಡಿ ತಿನಿಸುಗಳಿಗೆ ಬಳಸುವ ವಿಧಾನಗಳನ್ನು ಈಗ ತಜ್ಞರು ಕಂಡು ಹಿಡಿದಿದ್ದಾರೆ. ಹಿರಿಯರ ಕಾಲದಲ್ಲಿ ಬರಗಕ್ಕಿಯನ್ನು ನೀರಲ್ಲಿ ಕುದಿಸಿ ಬರೀ ಅನ್ನ ಮಾಡಲು ಮಾತ್ರ ಸೀಮಿತಿಗೊಳಿಸಲಾಗಿತ್ತು. ಆ ಕಾಲ ಈಗ ಬದಲಾಗಿದೆ. ಬರಗಕ್ಕಿಯನ್ನು ಹಿಟ್ಟು ಮಾಡಿ ತುಪ್ಪದಲ್ಲಿ ಹುರಿದು ಸಕ್ಕರೆಪುಡಿ, ಏಲಕ್ಕಿ ಪುಡಿ, ದ್ರಾಕ್ಷಿ, ಗೋಡಂಬಿ, ಬಾದಾಮಿ ಸೇರಿಸಿ ಕಟ್ಟಿದ ಉಂಡೆಗಳನ್ನು ಒಮ್ಮೆ ತಿಂದರೆ ಸಾಕು, ಮತ್ತೆ ಮತ್ತೆ ಮಾಡಿಕೊಡಲು ಮನೆ ಹೆಣ್ಣು ಮಕ್ಕಳಿಗೆ ಗಂಟು ಬೀಳುವುದು ಗ್ಯಾರಂಟಿ. ಹೀಗೆ ಮಾಡಿದ ಬರಗಿನ ಉಂಡೆಗಳನ್ನು ಹತ್ತಿಪ್ಪತ್ತು ದಿನ ಇಟ್ಟುಕೊಂಡು ತಿನ್ನಬಹುದು. ನೆನೆ ಹಾಕಿ ರುಬ್ಬಿಕೊಂಡ ಬರಗಕ್ಕಿ ಹಾಗೂ ಉದ್ದಿನ ಮಿಶ್ರಣವನ್ನು ಕಾವಲಿ ಮೇಲೆ ಹಾಕಿ ಬೇಯಿಸಿದರೆ ಗರಿಗರಿ ಬರಗಿನ ದೋಸೆ ರೆಡಿ. ಇದೆ ರೀತಿ ಬರಗಿನ ಚಕ್ಕುಲಿ, ಬರಗಿನ ಹಪ್ಪಳ, ಪಾಯಸ ಸಂಡಿಗೆ, ಏನೆಲ್ಲಾ ವೆರೈಟಿ ಅಡುಗೆ ತಿಂಡಿ ತಿನಿಸುಗಳನ್ನು ಮಾಡಿಕೊಂಡು ತಿಂದರೆ ಬಾಯಿಗೂ ರುಚಿ, ಆರೋಗ್ಯಕ್ಕೂ ಅಮೃತ. ■



Downloaded From:www.kpscvaani.com

● ಆರ್. ಸ್ಮಿತಾ

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯವನ್ನು ಇದೀಗ ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ.**

ಇದೀಗ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಆವರಣದಲ್ಲಿ ಕೃಷಿ ವಿಜ್ಞಾನಗಳ ವಸ್ತುಸಂಗ್ರಹಾಲಯವು ಆರಂಭಗೊಂಡಿದೆ. ವಿಶ್ವವಿದ್ಯಾನಿಲಯಕ್ಕೆ ಆಗಮಿಸುವ ರೈತ ಬಾಂಧವರಿಗೆ, ಶಾಲಾ ಮಕ್ಕಳಿಗೆ, ಪ್ರವಾಸಿಗರಿಗೆ, ಕೃಷಿ ಆಸಕ್ತರಿಗೆ, ಕೃಷಿ ಕ್ಷೇತ್ರದ ಕುರಿತಾಗಿ ಸಮಗ್ರ ಮಾಹಿತಿಯನ್ನು ಒಂದೇ ಸೂರಿನಡಿಯಲ್ಲಿ ಸೂಕ್ತ ಶ್ರವಣ ದೃಶ್ಯ ಮಾದರಿಗಳು ಹಾಗೂ ಪ್ರದರ್ಶಕಗಳೊಂದಿಗೆ ಪರಿಚಯಿಸುವ ಉದ್ದೇಶದಿಂದ ಈ ವಸ್ತುಸಂಗ್ರಹಾಲಯವನ್ನು ಆರಂಭಿಸಲಾಗಿದೆ. 2013ರಲ್ಲಿ ಆರಂಭವಾದ ಈ ವಸ್ತು ಸಂಗ್ರಹಾಲಯವನ್ನು ಇದೀಗ ಸಾರ್ವಜನಿಕರ ವೀಕ್ಷಣೆಗಾಗಿ ಮುಕ್ತವಾಗಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೇ ಕೃಷಿ ಹಾಗೂ ಕೃಷಿ ಸಂಬಂಧಿತ ವಿಷಯಗಳ ಕುರಿತಾದ ಏಕೈಕ ಬೃಹತ್ ವಸ್ತುಸಂಗ್ರಹಾಲಯ ಇದಾಗಿದೆ.

ಈ ಸಂಗ್ರಹಾಲಯದ ಕಟ್ಟಡವನ್ನು ವಿಶೇಷವಾಗಿ 923 ಚದರ ಮೀಟರ್ ವಿಸ್ತೀರ್ಣದಲ್ಲಿ ವಿನ್ಯಾಸಗೊಳಿಸಲಾಗಿದ್ದು, ಒಟ್ಟು 6 ಬೃಹತ್ ಪ್ರದರ್ಶನ ಕೊಠಡಿಗಳನ್ನು ಹೊಂದಿದೆ. ಕೊಠಡಿ ಸಂಖ್ಯೆ-1 ರಲ್ಲಿ ಕಛೇರಿ ಇದೆ. ಕೊಠಡಿ ಸಂಖ್ಯೆ-2 ರಲ್ಲಿ ಕೃಷಿ ಇತಿಹಾಸ, ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಬೆಳವಣಿಗೆ ಕುರಿತು ಪರಿಚಯಿಸಲಾಗಿದೆ. ಕೊಠಡಿ ಸಂಖ್ಯೆ-3 ರಲ್ಲಿ ಮಣ್ಣು, ನೀರು, ಬೆಳೆಗಳು ಮತ್ತು ಬೆಳೆ ಪದ್ಧತಿಗಳು, ಕೊಠಡಿ ಸಂಖ್ಯೆ-4 ರಲ್ಲಿ ಸಸ್ಯ ರೋಗಗಳು,

# ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಂಡಿರುವ ಕೃಷಿವಿಜ್ಞಾನ ವಸ್ತುಸಂಗ್ರಹಾಲಯ






Downloaded From:www.kpscvaani.com

ಕೀಟಗಳು, ಕೃಷಿ ಸೂಕ್ಷ್ಮ ಜೀವಿಗಳು, ಬೀಜ ತಾಂತ್ರಿಕತೆ, ಜೈವಿಕ ತಂತ್ರಜ್ಞಾನ, ಅನುವಂಶೀಯತೆ ಮತ್ತು ಸಸ್ಯ ತಳಿ ಅಭಿವೃದ್ಧಿ, ಕೊಠಡಿ ಸಂಖ್ಯೆ–5ರಲ್ಲಿ ರೇಷ್ಮೆ ಕೃಷಿ ಮತ್ತು ಜೇನು ಕೃಷಿ ಕುರಿತಾದ ಮಾಹಿತಿ ಪೂರೈಸುವ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ, ಮಾಹಿತಿ ಸಂವಹನ ತಂತ್ರಜ್ಞಾನ ಬಳಸಿ ಸ್ಪರ್ಶ ಪರದೆಯಲ್ಲಿ (Touch Screen) ಭಾರತೀಯ ಕೃಷಿ ಚರಿತ್ರೆ, ಕರ್ನಾಟಕ ಕೃಷಿ ಚರಿತ್ರೆ, ಕೃಷಿ ಅಭಿವೃದ್ಧಿಯ ಮೈಲಿಗಲ್ಲುಗಳು, ಕೃಷಿ ವಿಶ್ವವಿದ್ಯಾನಿಲಯದ ಕೊಡುಗೆ, ಇತ್ಯಾದಿ ಮಾಹಿತಿಯನ್ನು ನೇರವಾಗಿ ಸಂದರ್ಶಕರೇ ಪಡೆದುಕೊಳ್ಳಬಹುದಾಗಿದೆ.

ಕಾಲಾಂತರದಲ್ಲಿ ಭೇಟಿ ನೀಡುವ ಸಂದರ್ಶಕರ ಆದ್ಯತೆಯ ಮೇರೆಗೆ ಹಲವು ಮಾರ್ಪಾಡುಗಳನ್ನು ಮಾಡುತ್ತಾ ಬರಲಾಗಿದೆ. ಪ್ರಸ್ತುತ 2023ರನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವನ್ನಾಗಿ ಆಚರಿಸುತ್ತಿರುವ ಹಿನ್ನಲೆಯಲ್ಲಿ ಪ್ರತ್ಯೇಕವಾದ ಸಿರಿಧಾನ್ಯಗಳ ಗ್ಯಾಲರಿಯನ್ನು ಕೊಠಡಿ ಸಂಖ್ಯೆ–5 ರಲ್ಲಿ ತೆರೆಯಲಾಗಿದೆ. ಇದಲ್ಲದೇ, ಸಮಗ್ರ ಕೃಷಿಯ ಪರಿಕಲ್ಪನೆಯನ್ನು ಸೂಕ್ತ ಮಾದರಿಗಳೊಂದಿಗೆ ಪೂರೈಸುವ ಉದ್ದೇಶದಿಂದ ಕೊಠಡಿ ಸಂಖ್ಯೆ–6 ರಲ್ಲಿ ವಿಭಿನ್ನ ರೀತಿಯ ಪ್ರದರ್ಶನದ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ ಹಲವು ವಿಷಯಗಳಿಗೆ ಒತ್ತು ನೀಡಲಾಗಿದೆ.

ಹಳ್ಳಿ ಸಂತೆ (Rural Sandy) ಯ ಮಾಡೆಲ್‌ನಲ್ಲಿ ಗ್ರಾಮೀಣ ಮಾರುಕಟ್ಟೆಯ ನೋಟ, ವೈವಿಧ್ಯತೆ, ಪ್ರಾಮುಖ್ಯತೆಯನ್ನು, ಕೃಷಿ ಮಾರುಕಟ್ಟೆ (Agril Marketing System)ಯ ಮಾಡೆಲ್‌ನಲ್ಲಿ ಕೃಷಿ ಮಾರುಕಟ್ಟೆಗೆ ಬರುವ ದಾಸ್ತಾನು, ಆಕ್ಷನ್





ಪ್ರಕ್ರಿಯೆ, ಶೀತಲೀಕರಣ, ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಸಗಟು ಖರೀದಿ ಕೇಂದ್ರ ಕುರಿತಾದ ಸಮಗ್ರ ಮಾಹಿತಿಯನ್ನು, ಪಶುಪಾಲನೆ (Animal Husbandry) ಯ ಮಾಡೆಲ್‌ನಲ್ಲಿ ಜಾನುವಾರು ಸಾಕಾಣಿಕೆ ವಿಧಾನಗಳು, ಹೈನು ತಳಿಗಳು, ಮೇವಿನ ಬೆಳೆಗಳು, ಹಾಲಿನ ಪೌಷ್ಟಿಕತೆ, ಕುರಿ ಮತ್ತು ಹಂದಿ ಸಾಕಣೆ ಇತ್ಯಾದಿಗಳ ಕುರಿತ ಮಾದರಿಗಳನ್ನು ಪ್ರದರ್ಶಿಸಲಾಗಿದೆ.

ಕುಕ್ಕುಟ (Poultry)ದಲ್ಲಿ ವಿವಿಧ ಜಾತಿಯ ಕುಕ್ಕುಟಗಳು, ಸಾಕಾಣಿಕೆ ವಿಧಾನ, ಮೊಟ್ಟೆ ಮತ್ತು ಮಾಂಸದ ಪೌಷ್ಟಿಕತೆಯನ್ನು, ಮೀನು ಕೃಷಿ (Fisheries)ಯಲ್ಲಿ ವಿವಿಧ ಮೀನಿನ ತಳಿಗಳು, ಒಳನಾಡು ಮೀನುಸಾಕಾಣಿಕೆ ಮಹತ್ವ, ಮೀನು ಮಾರುಕಟ್ಟೆ, ಮೀನಿನ ಪೌಷ್ಟಿಕತೆ ಇತ್ಯಾದಿಗಳನ್ನು, ಅರಣ್ಯ (Forest) ದಲ್ಲಿ ಸಾಮಾಜಿಕ ಅರಣ್ಯ, ಕೃಷಿ ಅರಣ್ಯದ ಪ್ರಾಮುಖ್ಯತೆ, ವಿವಿಧ ಅರಣ್ಯಗಳು, ಅರಣ್ಯ ಸಂರಕ್ಷಣಾ ವಿಧಾನಗಳನ್ನು, ಹವಾಮಾನ ವೈಪರೀತ್ಯ (Climate Change) ದಲ್ಲಿ ಹವಾಮಾನ ವೈಪರಿತ್ಯದ ಕಾರಣ ಮತ್ತು ಪರಿಣಾಮಗಳ ಕುರಿತು ಪ್ರದರ್ಶನವನ್ನು ತೋರಿಸಲಾಗಿದೆ.

ಕೃಷಿ ಯಾಂತ್ರೀಕರಣ (Farm Mechanisation) ದಲ್ಲಿ ಸಾಂಪ್ರದಾಯಿಕ ಕೃಷಿ ಉಪಕರಣಗಳ ಬಳಕೆಯಿಂದ ಹಿಡಿದು ಆಧುನಿಕ ಯಾಂತ್ರೀಕರಣದವರೆಗಿನ ತಾಂತ್ರಿಕ ಆವಿಷ್ಕಾರಗಳು, ಹಸಿರುಮನೆ, ಕೊಯ್ಲೋತ್ತರ ತಂತ್ರಜ್ಞಾನಗಳು ನವೀಕರಿಸಬಹುದಾದ ಇಂಧನ (Renewable Energy)



ನವೀಕರಿಸಬಹುದಾದ ಇಂಧನ ಮೂಲಗಳು ಹಾಗೂ ವಿವಿಧ ಜೈವಿಕ ಇಂಧನ ಘಟಕಗಳು, ಸೌರಶಕ್ತಿ, ಪವನಶಕ್ತಿ, ಅಲೆಗಳ ಶಕ್ತಿ ಇತ್ಯಾದಿಗಳನ್ನು, ಧಾನ್ಯ ಶೇಖರಣೆ (Grain Storage) ವಿವಿಧ ಧಾನ್ಯ ಸಂಗ್ರಹಣಾ ವಿಧಾನಗಳು (ಸಾಂಪ್ರದಾಯಿಕ, ಆಧುನಿಕ) ಹಾಗೂ ಇವುಗಳ ಉಪಯೋಗಗಳು, ನಿರ್ವಹಣೆ ಇತ್ಯಾದಿ, ಕುರಿತ ಮಾಹಿತಿಯನ್ನು ಒದಗಿಸಲಾಗಿದೆ.

ವಿಸ್ತರಣಾ ತಂತ್ರಜ್ಞಾನ (Extension Technologies) ಗಳಲ್ಲಿ ಕೃಷಿಕರಿಗೆ ಮಾಹಿತಿ ಹಾಗೂ ತಂತ್ರಜ್ಞಾನಗಳನ್ನು ಪೂರೈಸುವಲ್ಲಿ ಬಳಸುವ ವಿಸ್ತರಣಾ ವಿಧಾನಗಳನ್ನು (ಸಾಂಪ್ರದಾಯಿಕ ಹಾಗೂ ಆಧುನಿಕ ಪದ್ಧತಿಗಳು) ಪರಿಚಯಿಸಲಾಗಿದೆ.

ಈ ವಸ್ತುಸಂಗ್ರಹಾಲಯ ಕೃಷಿ ವಿಶ್ವವಿದ್ಯಾನಿಲಯದ ಮುಖ್ಯದ್ವಾರದಲ್ಲಿಯೇ ಇದ್ದು, ಆಗಮಿಸುವ ಎಲ್ಲಾ ಸಂದರ್ಶಕರಿಗೆ ಮುಕ್ತವಾಗಿ ತೆರೆದಿಡಲಾಗಿದೆ ಅಲ್ಲದೆ ವಿಶ್ವವಿದ್ಯಾನಿಲಯದ ತಜ್ಞರಿಂದ ಸೂಕ್ತ ವಿವರಣೆಯೊಂದಿಗೆ ಪ್ರದರ್ಶನವನ್ನು ವೀಕ್ಷಿಸುವ ವ್ಯವಸ್ಥೆ ಮಾಡಲಾಗಿದೆ. ಹಾಗಾಗಿ ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದಾಗ ಈ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯವನ್ನು ವೀಕ್ಷಿಸಿ ಬನ್ನಿ. ■



Downloaded From:www.kpscvaani.com



ಲಕ್ಷ್ಮಿಕಾಂತರಾಜು ಎಂ.ಜಿ

**ಚಿಕ್ಕನಾಯಕನಹಳ್ಳಿಯ ದಂತಕಥೆಯನ್ನು ಸಾಕ್ಷೀಕರಿಸುವ ಮದಲಿಂಗನ ಕಣಿವೆಯು ಚಾರಣಿಗರಿಗೆ ಪ್ರಕೃತಿ ಸೌಂದರ್ಯವನ್ನು ಉಣಬಡಿಸುತ್ತಿದೆ.**

# ಬಯಲು ಸೀಮೆಯ ಚಾರ್ಮಾಡಿ ಘಾಟ್



ದಟ್ಟ ಅಡವಿಯನ್ನು ಸೀಳಿಕೊಂಡು ಹೋಗಿರುವ ಬಯಲು ಸೀಮೆಯ ಪ್ರದೇಶವಾದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮದಲಿಂಗನಕಣಿವೆಯ ರಸ್ತೆಯ ಮೇಲೆ ವಾಹನಗಳ ಮೂಲಕ ಸಾಗುವಾಗ ಕಣ್ಮನ ಸೆಳೆಯುವ ಎಡಬಲದಲ್ಲಿನ ಪ್ರಕೃತಿ ಸೌಂದರ್ಯವು ನಮಗೆ ಚಾರ್ಮಾಡಿ ಘಾಟ್‌ನ ಅನುಭವವನ್ನು ನೀಡುತ್ತದೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯು ಶುದ್ಧ ಬಯಲು ಸೀಮೆ ನಾಡು. ಈ ಸೀಮೆಯಲ್ಲಿರುವ ಮದಲಿಂಗನ ಕಣಿವೆ ಮಲೆನಾಡಿನ ಘಟ್ಟ ಪ್ರದೇಶದ ಅನುಭವ ನೀಡಬಲ್ಲದು. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ನೆರೆಯ ಗುಬ್ಬಿ ತಾಲ್ಲೂಕಿನ ಹಾಗಲವಾಡಿಗೆ ಸಂಪರ್ಕಿಸುವ ರಸ್ತೆಯಲ್ಲಿ ಚಿಕ್ಕನಾಯಕನಹಳ್ಳಿಯಿಂದ ಹತ್ತು ಕಿಮೀ ದೂರದ ಅಂತರದಲ್ಲಿ ಸಿಗುವ ಘಟ್ಟ ಪ್ರದೇಶ ನಮ್ಮನ್ನು ಮಲೆನಾಡ ಪ್ರಕೃತಿಗೆ ಕೊಂಡೊಯ್ಯುತ್ತದೆ.


ಐದಾರು ಕಿಮೀ ಉದ್ದದಲ್ಲಿ ಹರಡಿಕೊಂಡಿರುವ ರಸ್ತೆ, ತಿರುವುಗಳು, ಕಡಿದಾದ ಎತ್ತರ, ಎಲ್ಲವೂ ಪಶ್ಚಿಮ ಘಟ್ಟಗಳ ಘಾಟ್‌ಗಳಿಗೆ ಹೋಲಿಕೆಯಾಗಬಲ್ಲದು. ಈ ಕುರುಚಲು ಕಾಡು ಕರಡಿ, ಹಂದಿ, ಚಿರತೆ, ಜಿಂಕೆ, ಮೊಲ ಮೊದಲಾದ ವನ್ಯ ಜೀವಿಗಳ ವಾಸಸ್ಥಾನವಾಗಿದೆ. ಹೀಗೆ ವೈವಿಧ್ಯಮಯ ಪರಿಸರ ಈ ಮದಲಿಂಗನ ಕಣಿವೆ. ತೀರ್ಥಪುರ ಮೀಸಲು ಅರಣ್ಯ ಪ್ರದೇಶವ್ಯಾಪ್ತಿಯಲ್ಲಿನ ಈ ಕಣಿವೆಯು 8500 ಎಕರೆಯಷ್ಟು ವಿಸ್ತಾರವಿದ್ದು, ನಿರ್ಬಂಧಿತ ಪ್ರದೇಶವಾಗಿದೆ.

ಫೋಟೋಗ್ರಫಿ ಮತ್ತು ಒಂದು ದಿನದ ಪಿಕ್‌ನಿಕ್‌ಗಾಗಿ ನೆರೆಯ ತಾಲ್ಲೂಕು ಮತ್ತು ಜಿಲ್ಲೆಗಳಿಂದ ಪ್ರಕೃತಿ ಪ್ರಿಯರು ಈ ಕಣಿವೆಯ ವೀಕ್ಷಣೆಗಾಗಿ ಬರುತ್ತಾರೆ. ಅರಣ್ಯ ಇಲಾಖೆಯವರೂ ಕೂಡ ಇಲ್ಲಿನ ಬೆಟ್ಟವೊಂದರಲ್ಲಿ ವಾಚಿಂಗ್ ಟವರ್



Downloaded From:www.kpscvaani.com





**ಹೀಗೆ ಬನ್ನಿ**

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಹಾಗಲವಾಡಿ ರಸ್ತೆಯಲ್ಲಿ ಹತ್ತು ಕಿಮೀ ಕ್ರಮಿಸಬೇಕು. ತುಮಕೂರಿನಿಂದ ಚೇಳೂರು ಹಾಗಲವಾಡಿಯಿಂದ ಎಡ ತಿರುವು ಪಡೆದು ಇಪ್ಪತ್ತು ಕಿಮೀ ಕ್ರಮಿಸಬೇಕು. ಆಗ ಈ ಮದಲಿಂಗನ ಕಣಿವೆ ಸಿಗಲಿದೆ. ಈ ಸ್ಥಳದಲ್ಲಿ ತಿಂಡಿ ತೀರ್ಥಕ್ಕೆ ಯಾವುದೇ ಹೋಟೆಲ್‌ಗಳು ಇರುವುದಿಲ್ಲ. ಆದ್ದರಿಂದ ಚಾರಣಿಗರು ಜೊತೆಯಲ್ಲಿ ತಿನ್ನಲಿಕ್ಕೆ ಏನಾದರು ತಿಂಡಿತಿನಿಸುಗಳನ್ನು ಹಾಗೂ ಕುಡಿಯಲಿಕ್ಕೆ ನೀರನ್ನು ತೆಗೆದುಕೊಂಡು ಹೋಗಬೇಕು. ಆದರೆ ತಿಂದು, ಕುಡಿದ ಮೇಲೆ ಪ್ಲಾಸ್ಟಿಕ್ ವಸ್ತುಗಳನ್ನು ಅಲ್ಲಿಯೇ ಬಿಸಾಡದೆ ತಮ್ಮ ಬ್ಯಾಗಿನಲ್ಲೇ ತೆಗೆದುಕೊಂಡು ಒಂದು ಮನೆಯ ಕಸದಬುಟ್ಟಿಗೆ ಹಾಕುವ ಮೂಲಕ ಪರಿಸರವನ್ನು ಕಾಪಾಡಬೇಕು.

ಒಂದನ್ನು ನಿರ್ಮಿಸಿದ್ದಾರೆ. ಈ ಟವರ್ ಅನ್ನು ಹತ್ತಿ ಹತ್ತಾರು ಕಿಮೀ ದೂರದ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಈ ಬೆಟ್ಟದ ಸಾಲಿನ ಪರಿಸರವನ್ನು ವೀಕ್ಷಿಸಿ ಕಣ್ತುಂಬಿಕೊಳ್ಳಬಹುದಾಗಿದೆ.

**ಏನಿದು ಮದಲಿಂಗನ ಕಣಿವೆ**

ಮದಲಿಂಗನ ಕಣಿವೆಗೊಂದು ದಂತಕಥೆ ಇದೆ. ಮದಲಿಂಗನೇ ಇಲ್ಲಿನ ಕಥಾ ನಾಯಕ. ಹೊಸದಾಗಿ ಮದುವೆಯಾದ ಮದಲಿಂಗನು ತನ್ನ ಹೆಂಡತಿ, ಅತ್ತೆ ಮತ್ತು ನಾದಿನಿ ಜಾಣೆ ಯೊಂದಿಗೆ ಎತ್ತಿನಗಾಡಿಯಲ್ಲಿ ಚಿಕ್ಕನಾಯಕನಹಳ್ಳಿಗೆ ಸಾಗುತ್ತಿರುವಾಗ ತನ್ನ ಹೆಂಡತಿಯ ತಂಗಿಯನ್ನು ತನಗೆ ಮದುವೆ ಮಾಡಿಕೊಡಲು ಅತ್ತೆಗೆ ರೇಗಿಸುತ್ತಾನೆ. ಇದಕ್ಕೆ ಪ್ರತಿಕ್ರಿಯಿಸಿದ ಅತ್ತೆ, "ನಿನ್ನಂಥ ಗಂಡಿಗೆ ಎರಡು ಮದುವೆಯಾ ?!" ಎಂದು ಅಳಿಯನ ಪೌರುಷಕ್ಕೆ ಸವಾಲೆಸೆಯುತ್ತಾಳೆ. ಇಲ್ಲಿನ ಬೆಟ್ಟವೊಂದನ್ನು ಹಿಮ್ಮುಖವಾಗಿಯೇ ಏರಿ ಹಿಮ್ಮುಖವಾಗಿಯೇ ಇಳಿದರೆ ತನ್ನ ಎರಡನೆಯ ಮಗಳನ್ನು ಕೊಡಲಾಗುವುದೆಂಬ ಷರತ್ತಿನ ಪಂದ್ಯವು ಅತ್ತೆ ಅಳಿಯನ ನಡುವೆ ಏರ್ಪಟ್ಟಾಗ ಪಂದ್ಯಕ್ಕೆ ಅತ್ತೆಯೂ ಸಮ್ಮತಿಸುತ್ತಾಳೆ.

ಷರತ್ತಿನಂತೆ ಮದಲಿಂಗ ಸಿದ್ದಗುಡ್ಡವನ್ನು ಹಿಮ್ಮುಖವಾಗಿಯೇ ಏರಿಳಿಯುತ್ತಾನೆ. ಆದರೆ ದಣಿದ ಬಾಯಾರಿಕೆಯನ್ನು ನೀಗಿಸಿಕೊಳ್ಳಲು ಹೋದ ಸಂದರ್ಭದಲ್ಲಿ ಮಣ್ಣಿನ ನೀರಿನ ಕೊಡವು ಬಿದ್ದು ಒಡೆದು ಹೋಗುತ್ತದೆ. ಕುಡಿಯಲು ನೀರು ಸಿಗದೇ ಮದಲಿಂಗ ಪ್ರಾಣ ಬಿಡುತ್ತಾನೆ. ಗಂಡನ ಬಾಯಾರಿಕೆಗೆ ನೀರು ತರಲು ಹೋದ ಹೆಂಡತಿ ನೀರಿನ ಮಡುವಿಗೆ ಬಿದ್ದು ಸಾವನ್ನಪ್ಪುತ್ತಾಳೆ. ಆ ಜಾಗವೇ ಇಂದಿನ ಮದನಮಡುವಾಗಿದೆ. ತನ್ನ ಜೊಲ್ಲನ್ನೇ ಮದಲಿಂಗನಿಗೆ ನೀಡಿ ಪ್ರಾಣ ಉಳಿಸಿಕೊಳ್ಳುವ ಪ್ರಯತ್ನದಿಂದ ಬಂದ ನಾದಿನಿ ಜಾಣೆಯೂ ಪ್ರಾಣ ಬಿಡುತ್ತಾಳೆ. ಆ ಸ್ಥಳವು ಜಾಣೆಹಾರ್ ಆಗಿದೆ.

ತನ್ನಿಬ್ಬರ ಮಕ್ಕಳು ಹಾಗೂ ಅಳಿಯನ ಸಾವಿನಿಂದ ಕಂಗಾಲಾಗಿ ಸಹಾಯ ಯಾಚಿಸಿ ಓಡಿದ ಅತ್ತೆಯೂ ಸಾವನ್ನಪ್ಪುತ್ತಾಳೆ. ಅದೀಗ ಹತ್ಯಾಳು ಆಗಿದೆ. ಅತ್ತೆಯನ್ನು ಸಮಾಧಿ ಮಾಡಿದ ಜಾಗವೀಗ ಅಜ್ಜಿಗುಡ್ಡಿಯಾಗಿದೆ ಎಂಬ ದಂತ ಕಥೆಯು ಈಗಲೂ ಜೀವಂತವಾಗಿದೆ. ಈ ದಂತ ಕಥೆಯು ಮೈಸೂರು ವಿಶ್ವ ವಿದ್ಯಾಲಯದ ಪದವಿ ತರಗತಿಗೆ ಪಠ್ಯವೂ ಆಗಿತ್ತು ಎಂಬುದು ಈ ಸ್ಥಳದ ಮತ್ತೊಂದು ವಿಶೇಷತೆಯಾಗಿದೆ. ಇಂದಿನ ಮದಲಿಂಗನ ಬೆಟ್ಟ, ಜಾಣೆಹಾರ್, ಮದನಮಡು, ಅಜ್ಜಿಗುಡ್ಡೆ ಗ್ರಾಮಗಳು ಈ ಕಣಿವೆಯ ರಸ್ತೆಯಲ್ಲಿ ಒಂದೆರಡು ಕಿಮೀ ಅಂತರದಲ್ಲಿರುವುದು ಈ ಕಥೆಯನ್ನು ಸಾಕ್ಷೀಕರಿಸುತ್ತವೆ.

ಇತ್ತೀಚೆಗೆ ಮದಲಿಂಗನ ಕಣಿವೆ ಪ್ರವಾಸಿ ಸ್ಥಳವಾಗಿ ಮಾರ್ಪಟ್ಟಿದೆ. ಮಳೆಗಾಲದಲ್ಲಿ ನೋಡುಗರ ಸಂಖ್ಯೆ ಹೆಚ್ಚಾಗಿರುತ್ತದೆ. ಭಾನುವಾರ ಸೇರಿದಂತೆ ರಜಾ ದಿನಗಳಲ್ಲಿ ಒಂದು ದಿನದ ಟ್ರೆಕ್ಕಿಂಗ್, ಫೋಟೋಗ್ರಫಿಗೆ ಹೇಳಿ ಮಾಡಿಸಿದ ಸ್ಥಳವಾಗಿದೆ.

ನೋಡುಗರ ಸಂಖ್ಯೆ ಹೆಚ್ಚಾದಂತೆ ಇಲ್ಲಿ ಪರಿಸರ ಮಾಲಿನ್ಯವೂ ಹೆಚ್ಚಾಗುತ್ತಿದೆ. ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲ್, ಮದ್ಯದ ಬಾಟಲ್‌ಗಳು ಎಲ್ಲೆಂದರಲ್ಲಿ ಎಸೆದು ಪರಿಸರ ಮಾಲಿನ್ಯವನ್ನು ಮಾಡುತ್ತಿದ್ದಾರೆ. ಹಾಗಾಗಿ ಕೆಲವೊಮ್ಮೆ



Downloaded From:www.kpscvaani.com

# ಪಾಲಕರನ್ನು ದೂರವಾಗಿಸುವ ಪತ್ನಿಯಿಂದ ವಿಚ್ಛೇದನ ಪಡೆಯಲು ಪತಿಗೆ ಅವಕಾಶ



**ಪಾಲಕರಿಂದ ದೂರವಾಗಿಸಲು ಪ್ರಯತ್ನಿಸುವ ಪತ್ನಿಯಿಂದ ವಿಚ್ಛೇದನ ಪಡೆಯುವ ಹಕ್ಕನ್ನು ಪತಿಯು ಹೊಂದಿರುತ್ತಾನೆ ಎಂದು ಗುಜರಾತ್ ಹೈಕೋರ್ಟ್ ತೀರ್ಪು ನೀಡಿದೆ.**

ಡಾ. ಡಿ. ಎಂ. ಹೆಗಡೆ

"ನಿಮ್ಮ ಮನೆಯಲ್ಲಿ ಯಾರ್ಯಾರು ಇರುತ್ತೀರಿ?" ಹುಡುಗಿಯ ಪಾಲಕರು ಕೇಳಿದರು.

"ನಾನು, ನನ್ನ ತಂದೆ ಮತ್ತು ತಾಯಿಯ ಜೊತೆಗೆ ಇದ್ದೇನೆ. ಹಾಗಾಗಿ ನಮ್ಮ ಮನೆಯಲ್ಲಿ ನಾವು ಮೂವರಿದ್ದೇವೆ. ನನ್ನ ತಂದೆ ಸರಕಾರಿ ನೌಕರಿಯಿಂದ ನಿವೃತ್ತರಾಗಿದ್ದಾರೆ." ಹುಡುಗ ಹೇಳಿದ.

"ನಿನ್ನ ಮದುವೆಯಾದ ಮೇಲೆ ಹೇಗೆ?" ಹುಡುಗಿಯ ತಾಯಿಯ ಪ್ರಶ್ನೆ.

"ಅಂದರೆ. ನಾನು, ನನ್ನ ಹೆಂಡತಿ ಮತ್ತು ನನ್ನ ಪಾಲಕರು ಒಟ್ಟಿಗೆ ಇರುತ್ತೇವೆ." ಹುಡುಗ ಹೇಳಿದ.

"ಅದೇ. ಅದು ಆಗುವುದಿಲ್ಲ. ನಮ್ಮ ಮಗಳು ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಒಳ್ಳೆಯ ಕೆಲಸದಲ್ಲಿದ್ದಾಳೆ. ಕೈತುಂಬ ಸಂಬಳ ತರುತ್ತಾಳೆ. ಅವಳಿಗೆ ಗಂಡನ ಜೊತೆಗೆ ಸಂಸಾರ ಮಾಡುವ ಆಸೆ ಇದೆ. ನೀನು ಅವಳನ್ನು ಮದುವೆಯಾದರೆ ಬೇರೆ ಮನೆಯನ್ನು ಮಾಡಬೇಕಾಗುತ್ತದೆ. ಒಪ್ಪಿಗೆ ಇದೆಯಾ?"

"ಇಲ್ಲ" ಹುಡುಗ ಸ್ಪಷ್ಟವಾಗಿ ಉತ್ತರಿಸಿದ.

"ಅದು ಆಗುವುದಿಲ್ಲವಾದರೆ ನಮ್ಮ ಮಗಳನ್ನು ನಿಮಗೆ ಕೊಡಲು ಆಗುವುದಿಲ್ಲ!" ಎಂದರು ಹುಡುಗಿಯ ಪಾಲಕರು. ಮಾತುಕತೆ ಅಲ್ಲಿಗೆ ಮುಗಿಯಿತು. ಅವರಿಬ್ಬರ ಮದುವೆಯಾಗಲಿಲ್ಲ. ಹಾಗಾಗಿ ಒಂದು ವಿವಾಹ ವಿಚ್ಛೇದನ ಆಗುವುದು ತಪ್ಪಿತು.

"ನಿನ್ನ ಹಾಗೆಯೇ ನಾನೂ ಹೊರಗೆ ಕೆಲಸವನ್ನು ಮಾಡುತ್ತೇನೆ. ಕೈತುಂಬ ಸಂಬಳವನ್ನು ತರುತ್ತಿದ್ದೇನೆ. ನನಗೆ ಈ ಮನೆಯಲ್ಲಿದ್ದುಕೊಂಡು ನಿನ್ನ ತಂದೆ-ತಾಯಿಯ ಸೇವೆಯನ್ನು ಮಾಡಿಕೊಂಡಿರಲಿಕ್ಕೆ ಸಾಧ್ಯವಿಲ್ಲ. ನಾನೂ ನನ್ನ ಪಾಲಕರನ್ನು ಬಿಟ್ಟು ನಿನ್ನ ಜೊತೆಗೆ ಬಂದಿದ್ದೇನೆ. ನೀನೂ ನಿನ್ನ ಪಾಲಕರನ್ನು ಬಿಟ್ಟು ಬಾ. ನಾವು ಬೇರೆ ಮನೆಯನ್ನು ಮಾಡಿಕೊಂಡಿರೋಣ. ನಿನ್ನ



Downloaded From:www.kpscvaani.com

ಪಾಲಕರನ್ನು ನೋಡಿಕೊಳ್ಳಲು ಬೇರೆ ವ್ಯವಸ್ಥೆಯನ್ನು ಮಾಡೋಣ" ಎಂದು ಪತ್ನಿ ಬಹಳ ಗಂಭೀರವಾಗಿಯೇ ಗಂಡನಿಗೆ ಹೇಳಿದಳು.

ಗಂಡ ಹೆಂಡತಿ ಇಬ್ಬರೂ ಸುಶಿಕ್ಷಿತರು. ಒಳ್ಳೆಯ ಆದಾಯ ಇರುವ ವೈದ್ಯರು. ಹೆಂಡತಿಯ ಮಾತಿನಿಂದ ಗಂಡನಿಗೆ ಬಹಳ ಬೇಜಾರಾಯಿತು. ಅವನ ಮನಸ್ಸಿನಲ್ಲಿದ್ದ ಸುಖಸಂಸಾರದ ಸುಂದರವಾದ ಚಿತ್ರವು ಒಡೆದು ಚೂರುಚೂರಾಯಿತು. ವಯಸ್ಸಾದ ಪಾಲಕರನ್ನು ನೋಡಿಕೊಳ್ಳಬೇಕು. ಅದೂ ಅಲ್ಲದೇ ತನ್ನ ತಂದೆಗೆ ಕ್ಯಾನ್ಸರ್ ಆಗಿದೆ. ತಾಯಿ ಕಂಗಾಲಾಗಿದ್ದಾಳೆ. ವೈದ್ಯನಾದ ಮಗ ಮತ್ತು ಸೊಸೆ, ತಾವು ಬದುಕಿರುವಷ್ಟು ಕಾಲ ತಮ್ಮ ಸೇವೆಯನ್ನು ಮಾಡುತ್ತಾರೆ ಎಂದುಕೊಳ್ಳುವುದು ಅವನ ಪಾಲಕರ ತಪ್ಪಲ್ಲ. ಇಂಥ ಸಂದರ್ಭದಲ್ಲಿ ಅವರನ್ನು ಸಾಧ್ಯವಾದಷ್ಟು ಚೆನ್ನಾಗಿ ನೋಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯ, ಎಂದೆಲ್ಲ ಹೇಳಿ ತನ್ನ ಹೆಂಡತಿಯನ್ನು ಸಮಾಧಾನ ಪಡಿಸಲಿಕ್ಕೆ ಪ್ರಯತ್ನಿಸಿದ.

ಅವನ ಪ್ರಯತ್ನ ಫಲ ಕೊಡಲಿಲ್ಲ."ನಿನ್ನ ಪಾಲಕರನ್ನು ಬೇರೆ ಮನೆಗೆ ಕಳಿಸು. ಅವರನ್ನು ನೋಡಿಕೊಳ್ಳಲಿಕ್ಕೆ ಬೇರೆ ಯಾರನ್ನಾದರೂ ನೇಮಿಸಬಹುದಲ್ವಾ? ಬಾ, ನಾವಿಬ್ಬರೂ ಬೇರೆ ಮನೆಯನ್ನು ಮಾಡೋಣ"ಎಂದೇ ಹೆಂಡತಿ ಹಠ ಮಾಡುತ್ತಿದ್ದಳು.

ಗಂಡನಿಗೆ ಅವಳ ಮಾತು ಸುತರಾಂ ಒಪ್ಪಿಗೆಯಾಗಲಿಲ್ಲ. ದಿನಗಳು ಕಳೆಯುತ್ತಿದ್ದಂತೆಯೇ, ಇಬ್ಬರಿಗೂ ಒಟ್ಟಿಗೆ ಇರಲಿಕ್ಕಾಗದಷ್ಟು ಕಷ್ಟವಾಯಿತು. ಅವಳ ಕಿರಿಕಿರಿಯೂ ಜಾಸ್ತಿಯಾಯಿತು. ಅವನ ತಂದೆಯ ಪರಿಸ್ಥಿತಿ ಉಲ್ಬಣಿಸುತ್ತಿತ್ತು. ಹೆಂಡತಿಯ ನಿರಂತರ ಕಿರುಕುಳದಿಂದ ಬೇಸತ್ತ ಗಂಡ ವಿವಾಹ ವಿಚ್ಛೇದನಕ್ಕೆ ಮುಂದಾದ. ಆದರೆ ಹೆಂಡತಿಯು ಅದಕ್ಕೆ ಒಪ್ಪಲಿಲ್ಲ. ಅವಳಿಗೆ ವಿವಾಹ ವಿಚ್ಛೇದನ ಬೇಕಾಗಿರಲಿಲ್ಲ. ಅವಳಿಗೆ ಗಂಡನ ಪಾಲಕರು ಬೇಕಿರಲಿಲ್ಲ ಅಷ್ಟೇ.

ಗಂಡನು ಅನಿವಾರ್ಯದಿಂದ ವಿವಾಹ ವಿಚ್ಛೇದನಕ್ಕೆ ಅರ್ಜಿಯನ್ನು ಹಾಕಿದ. ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯಿತು. ಕೌಟಂಬಿಕ ನ್ಯಾಯಾಲಯವು ಅವರಿಗೆ ವಿವಾಹ ವಿಚ್ಛೇದನವನ್ನು ಕೊಡಲಿಲ್ಲ. ಗಂಡನು ಅದನ್ನು ಪ್ರಶ್ನಿಸಿ ಗುಜರಾತ್ ಹೈಕೋರ್ಟಿಗೆ ಅಪೀಲು ಹೋದ. ಅಲ್ಲಿ ಈ ವ್ಯಾಜ್ಯವನ್ನು ಕೂಲಂಕುಷವಾಗಿ ಚರ್ಚಿಸಲಾಯಿತು.

ಗಂಡನ ಪಾಲಕರನ್ನು (ಹೆಂಡತಿಯು ತನ್ನ ಅತ್ತೆ–ಮಾವಂದಿರನ್ನು) ಮನೆಯಲ್ಲಿ ಒಟ್ಟಿಗೆ ಇಟ್ಟುಕೊಂಡು, ಅವರನ್ನು ಗೌರವದಿಂದ ನೋಡಿಕೊಳ್ಳಲು ಒಪ್ಪದೇ ಇರುವ ಹೆಂಡತಿಯಿಂದ ವಿವಾಹ ವಿಚ್ಛೇದನವನ್ನು ಪಡೆದುಕೊಳ್ಳುವ ಹಕ್ಕನ್ನು ಗಂಡನು ಹೊಂದಿರುತ್ತಾನೆ ಎಂದು ಗುಜರಾತ್ ಹೈಕೋರ್ಟು ತೀರ್ಪಿತ್ತಿದೆ. (Men entitled to divorce if wife doesn't let his parents stay with them, rules High Court of Gujarat)





ಈ ಪ್ರಕರಣದ ವಿಚಾರಣೆಯನ್ನು ನಡೆಸಿದ ನ್ಯಾಯಮೂರ್ತಿ ಭಾಸ್ಕರ ಭಟ್ಟಾಚಾರ್ಯ ಹಾಗೂ ನ್ಯಾಯಮೂರ್ತಿ ಜೆ. ಬಿ. ಪಾರ್ದಿವಾಲಾ ಅವರಿದ್ದ ನ್ಯಾಯಪೀಠವು, ಅತ್ತೆಮಾವಂದಿರನ್ನು ಜೊತೆಗೆ ಇಟ್ಟುಕೊಳ್ಳದೇ ಇರುವುದು, ಮತ್ತು ಅವರ ಜವಾಬ್ದಾರಿಯನ್ನು ತೆಗೆದುಕೊಳ್ಳದಂತೆ ಗಂಡನನ್ನು ತಡೆಯುವುದು, ಅವರ ಸೇವೆಯನ್ನು ಮಾಡಲು ಒಪ್ಪದೇ ಇರುವುದು, ತನ್ನ ಗಂಡನನ್ನು ಅವನ ವಯಸ್ಸಾದ ಪಾಲಕರಿಂದ ಬೇರ್ಪಡಿಸಲಿಕ್ಕೆ ಪ್ರಯತ್ನಿಸುವುದು ಮಾನಸಿಕ ಕಿರುಕುಳಕ್ಕೆ ಸಮ. ಹೀಗಾಗಿ ಇಂಥ ಪತ್ನಿಯಿಂದ ವಿಚ್ಛೇದನವನ್ನು ಪಡೆದುಕೊಳ್ಳಲಿಕ್ಕೆ ಕಾನೂನಿನಲ್ಲಿ ಅವಕಾಶವಿದೆ ಎಂದು ಹೇಳಿದೆ.

ಒಟ್ಟಿನಲ್ಲಿ, ತಮ್ಮ ಪಾಲಕರ ಜೊತೆಗೆ, ಮನೆಯ ಎಲ್ಲ ಸದಸ್ಯರೂ, ಸಾಧ್ಯವಾದಷ್ಟು ಸಂತೋಷದಿಂದ ಬದುಕುವುದು ಮುಖ್ಯ. ಎಲ್ಲರೂ ಒಂದೇ ಮನೆಯಲ್ಲಿ ಅನ್ಯೋನ್ಯವಾಗಿ ಬದುಕುವುದರಲ್ಲಿಯೇ ಸಂಸಾರದ ಸ್ವಾರಸ್ಯ ಮತ್ತು ಸಾರ್ಥಕತೆ ಇದೆ. ಇದನ್ನು ಇತ್ತೀಚಿಗೆ ಗುಜರಾತ್ ಹೈಕೋರ್ಟು ತನ್ನ ಒಂದು ತೀರ್ಪಿನಲ್ಲಿ ಸ್ಪಷ್ಟವಾಗಿ ತಿಳಿಸಿದೆ.



Downloaded From:www.kpscvaani.com

# ಮತ್ತೆ ಮರುಜೀವ ಪಡೆದ ಆಲದ ಮರ



**ಅನಿವಾರ್ಯ ಕಾರಣಗಳಿಂದ ಕತ್ತರಿಸಿದ ಆಲದ ಮರಕ್ಕೆ ಪರಿಸರ ಕಾಳಜಿಯ ವನಸಿರಿ ಸಂಸ್ಥೆಯು ಮರು ಜೀವ ನೀಡಿದೆ.**

**ಶಶಿಧರ ಅಂಗಡಿ**

ವೃಕ್ಷ ರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು, ವೃಕ್ಷಗಳಿಂದಲೇ ಇಂದು ಮನುಷ್ಯ ಜಗತ್ತಿನಲ್ಲಿ ಉಸಿರಾಡುತ್ತಿದ್ದಾನೆ. ಪ್ರಸ್ತುತ ದಿನಗಳಲ್ಲಿ ಆಧುನಿಕ ಜೀವನ ಶೈಲಿ, ಜೀವನದಲ್ಲಿ ತಂತ್ರಜ್ಞಾನಗಳ ಬಳಕೆಯಿಂದ ಮನುಷ್ಯ ಪರಿಸರವನ್ನು ತನಗೆ ಗೊತ್ತಿಲ್ಲದಂತೆ ನಾಶ ಮಾಡುತ್ತಿರುವುದು ದುರಂತವೇ ಸರಿ. ಮನುಷ್ಯ ವೃಕ್ಷಗಳನ್ನು ಕತ್ತರಿಸುವ ಮೂಲಕ ಅಥವಾ ಪರಿಸರ ಮಾಲಿನ್ಯ ಮಾಡುವ ಮೂಲಕ ತನ್ನ ಜೀವಿತಾವಧಿಯನ್ನೇ ಕಡಿಮೆ ಮಾಡಿಕೊಳ್ಳುತ್ತಿದ್ದಾನೆ. ಇಂತಹ ಘೋರ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಸಂಸ್ಥೆಯೊಂದು ಜೀವ ಬಿಡುತ್ತಿದ್ದ ವೃಕ್ಷವೊಂದನ್ನು ತಂದು ಅದಕ್ಕೆ ಮರುಜೀವ ನೀಡಿ, ಪೋಷಿಸುತ್ತಾ ಬಂದಿದೆ.

ಹಲವು ಬಾರಿ ನೀವು ಪತ್ರಿಕೆಯಲ್ಲಿ ಓದಿರಬಹುದು, ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ನೋಡಿರಬಹುದು ವ್ಯಕ್ತಿ ಅಥವಾ ಯಾವುದೋ ಒಂದು ಜೀವಿ ಮರಣ ಹೊಂದುವ ಹಂತಕ್ಕೆ ಸಮೀಪಿಸುತ್ತಿದ್ದ ವೇಳೆ ಮರುಜೀವ ಕೊಟ್ಟು ಅದೆಷ್ಟೋ ವೈದ್ಯರು ಬದುಕಿಸಿದ್ದಾರೆ. ಮಾನವ ಎಷ್ಟು ಸ್ವಾರ್ಥಿ ಎಂದರೆ ಕೇವಲ ಮನುಷ್ಯನ ಜೀವವನ್ನು ಉಳಿಸಿದ್ದಕ್ಕೆ ಮಾತ್ರ ಸಾಧನೆ ಎನ್ನುತ್ತಾನೆ. ಆದರೆ ನೆನಪಿರಲಿ ಜಗತ್ತಿನಲ್ಲಿ ವ್ಯಕ್ತಿಗಿಂತಲೂ ಮುಂಚಿತವಾಗಿ ಜೀವನ ನಡೆಸುತ್ತಿರುವ ಒಬ್ಬ ಅಪರೂಪದ ಮತ್ತು ನಿಸ್ವಾರ್ಥ ಮನೋಭಾವನೆಯ ಜೀವ ಇಂದಿಗೂ ಅದೇ ನಿಸ್ವಾರ್ಥತೆಯಿಂದ ನಮ್ಮ ಜೀವವನ್ನು ಕಾಯುತ್ತಿದೆ.

ಹೌದು ಜಗತ್ತಿನಲ್ಲಿ ಮಾನವ ಅಥವಾ ಪ್ರಾಣಿ ಸಂಕುಲ ಜೀವಿಸುವ ಮೊದಲೇ ಹಚ್ಚ ಹಸಿರಿನ ಜೀವಿ ಜಗತ್ತಿನಲ್ಲಿ ಎಲ್ಲರೂ ತನ್ನಂತೆ ಜೀವಿಸಬೇಕು ಎಂಬ ದೃಷ್ಟಿಯಿಂದ ಈಗಲೂ ತನ್ನುಸಿರಿನಿಂದ ಮಾನವ ಹಾಗೂ ಪ್ರಾಣಿ ಸಂಕುಲಕ್ಕೆ ಉಸಿರನ್ನು ನೀಡುತ್ತಾ ಪ್ರತಿಯೊಬ್ಬರೂ ಬದುಕಬೇಕೆಂದು ಅವಕಾಶ ಮಾಡಿಕೊಟ್ಟಿದೆ. ಆದರೆ ಮಾನುಷ್ಯ ಮಾತ್ರ ಉಸಿರು ನೀಡಿ ನಮ್ಮನ್ನು



Downloaded From:www.kpscvaani.com

ಉಳಿಸಿಕೊಂಡು ಹೋಗುತ್ತಿರುವ ಮಾತೆಯನ್ನು ಕೊಲ್ಲಲು ಮುಂದಾಗಿರುವುದು ಅತ್ಯಂತ ಕೆಟ್ಟ ಸಂಗತಿಯಾಗಿದೆ.

ಹಸಿರಿದ್ದರೆ ಮಾತ್ರ ಉಸಿರು ಎಂಬಂತೆ ಮರಗಳು ಇದ್ದರೆ ಮಾತ್ರ ಮನುಷ್ಯ ಉಸಿರಾಡಲು ಸಾಧ್ಯ. ಆದರೆ ಹಣ ಮತ್ತು ಬುದ್ಧಿವಂತಿಕೆ ಇದ್ದರೆ ಮತ್ತು ತಂತ್ರಜ್ಞಾನದ ಸಹಾಯದಿಂದ ಹೇಗಿದ್ದರೂ ಬದುಕಬಹುದು ಎಂಬ ಮೌಢ್ಯದಲ್ಲಿ ಮನುಷ್ಯ ಬದುಕುತ್ತಿದ್ದಾನೆ. ತಂತ್ರಜ್ಞಾನ, ಹಣ ಮತ್ತು ತನ್ನ ಬುದ್ಧಿವಂತಿಕೆಯಿಂದ ಎಲ್ಲವನ್ನು ಮನುಷ್ಯ ಸಾಧಿಸಬಲ್ಲ. ಹಣದಿಂದ ಕೃತಕ ಉಸಿರನ್ನು ತಯಾರಿಸಬಲ್ಲ ಮತ್ತು ಅದರಿಂದ ಬದುಕನ್ನೂ ನಡೆಸಬಲ್ಲ ನಿಜ. ಆದರೆ ಯಾವುದೇ ಹಣದ ಅಪೇಕ್ಷೆಯಿಲ್ಲದೇ. ಮನುಷ್ಯನಿಂದ ಏನನ್ನು ಬಯಸದೇ ತನ್ನ ಮಡಿಲಿನಲ್ಲಿ ಸಾಕುತ್ತಿರುವ ವೃಕ್ಷ  ಎಲ್ಲಾ ಸಂಪತಿಗಿಂತಲೂ ಮಿಗಿಲು.

ಈ ಮೊದಲೇ ಹೇಳಿದ ಹಾಗೇ ರಾಯಚೂರು ಜಿಲ್ಲೆಯಲ್ಲಿ ಪ್ರಾಣ ಬಿಡುತ್ತಿದ್ದ ವೃಕ್ಷಕ್ಕೆ ಮರು ಜೀವ ನೀಡಿದ ಸಂಸ್ಥೆಯ ಬಗ್ಗೆ ಹೇಳುತ್ತಿದ್ದೆ. ಇದೇನು ವೃಕ್ಷ ಪ್ರಾಣ ಬಿಡುವುದೇ ವಿಚಿತ್ರವಾಗಿದೆಯಲ್ಲ ಎಂದು ನೀವು ಆಶ್ಚರ್ಯ ಪಡಬಹುದು. ಆದರೆ ಇದು ನಿಜ, ರಾಯಚೂರು ಜಿಲ್ಲೆಯ ಏಳುರಾಗಿ ಕ್ಯಾಂಪ್ ಎಂಬ ಗ್ರಾಮದಲ್ಲಿ ರೈತನೊಬ್ಬನ ಜಮೀನಿನ ಬದುವೊಂದರಲ್ಲಿ ಬೆಳೆದಿದ್ದ ಈ ಆಲದ ಮರವನ್ನು 2022ರಲ್ಲಿ ಜಮೀನನ್ನು ಸಮತಟ್ಟು ಮಾಡುವ ಉದ್ದೇಶದಿಂದ ಕಡಿದು ಹಾಕಿದರು.

ನಂತರ ಸಿಂಧನೂರಿನ ವನಸಿರಿ ಫೌಂಡೇಷನ್ ಎಂಬ ಸಂಸ್ಥೆಯ ಪರಿಸರ ಪ್ರೇಮಿಗಳು ಆ ಮರದ ಬುಡವನ್ನು ಪರಿಶೀಲಿಸಿ, ಸಂಶೋಧಕರು ಮತ್ತು ವಿಜ್ಞಾನಗಳ ಸಹಾಯದಿಂದ ಮರಕ್ಕೆ ಮರುಜೀವ ತರಿಸಬಹುದೆ ಎಂದು ಸಂಶೋಧನೆ ನಡೆಸಿದರು. ವಿಜ್ಞಾನಿಗಳು ಮತ್ತು ಸಂಶೋಧಕರು ಹಲವಾರು ಸಂಶೋಧನೆಗಳನ್ನು ನಡೆಸಿ ಮರದ ಬೇರುಗಳಲ್ಲಿರುವ ನೀರಿನ ಅಂಶವನ್ನು ಪರಿಗಣಿಸಿ

**ಮರವೇ ತನ್ನ ಕಥೆಯನ್ನು ಜನರಿಗೆ ಹೇಳಿಕೊಳ್ಳುವಂತೆ ಒಂದು ಕಾಲ್ಪನಿಕ  ಬೋರ್ಡ್ ಅನ್ನು ಮರದ ಮುಂದೆ ಹಾಕಲಾಗಿದೆ. ಆದರೆ ಇದು ಮರದ ಕಾಲ್ಪನಿಕ ಮಾತು ಅನಿಸಿದರೂ ಕೂಡ ನಿಜವಾಗಿಯೂ ಇದು ಮರದ ಅಂತರಾಳದ ಮಾತಾಗಿದೆ.**





ಮರವನ್ನು ಬೇರು ಸಮೇತ ತೆಗೆದು ಬೇರೆಡೆ ನೆಟ್ಟರೆ ಮತ್ತೆ ಬೆಳೆಯುವ ಸಾಧ್ಯತೆ ಇದೆ ಎಂಬ ವರದಿಯನ್ನು ನೀಡಿದರು. ವರದಿಯನ್ನು ಆಧಾರಿಸಿ ಪರಿಸರ ಪ್ರೇಮಿಗಳು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಮರವನ್ನು ಬೇರಿನ ಸಮೇತವಾಗಿ ಕಿತ್ತು, ನೀರಾವರಿ ಇಲಾಖೆಯ ಆವರಣದಲ್ಲಿ ನೆಟ್ಟಿದ್ದಾರೆ. ಇದಕ್ಕೆ ಅನೇಕರು ಇಷ್ಟೊಂದು ಖರ್ಚು ಮಾಡುವ ಬದಲು ಅದೇ ಹಣದಲ್ಲಿ ಸಾಕಷ್ಟು ಸಸಿಗಳನ್ನು ಹಾಕಬಹುದಿತ್ತು ಎಂಬ ಕೊಂಕು ಮಾತುಗಳನ್ನು ಸಹ ಆಡಿದ್ದಾರೆ. ಆದರೆ ಅದ್ಯಾವುದಕ್ಕೂ ತಲೆಗೊಡದೇ ಮರವನ್ನು ನೆಟ್ಟಿದ ಪರಿಸರ ಪ್ರೇಮಿಗಳು ಮರವನ್ನು ಉತ್ತಮ ರೀತಿಯಲ್ಲಿ ಪೋಷಿಸಿದ್ದಾರೆ.

ದಿನಗಳು ಕಳೆದಂತೆ ಪರಿಸರ ಪ್ರೇಮಿಗಳ ಶ್ರಮಕ್ಕೆ ಪ್ರತಿಫಲ ಸಿಕ್ಕು, ಕತ್ತಿಸಿದ್ದ ಮರವು ಚಿಗುರೊಡೆಯಿತು. ಅದನ್ನು ಕಂಡ ವನಸಿರಿ ಫೌಂಡೇಷನ್‌ನ ಪರಿಸರ ಪ್ರೇಮಿಗಳ ಕಣ್ಣಲ್ಲಿ ಸಾಧನೆ ಮತ್ತು ಆನಂದದ ಚೇತನವು ಉಕ್ಕಿ ಹರಿಯಿತು. ಈ ಪರಿಸರ ಕಾಳಜಿಗಾಗಿ ಅಲ್ಲಿನ ಜನರು ಹರ್ಷ ವ್ಯಕ್ತಪಡಿಸುತ್ತಿದ್ದಾರೆ. ಇದೇ ರೀತಿಯಲ್ಲಿ ಪ್ರತಿಯೊಬ್ಬರೂ ವೃಕ್ಷ ರಕ್ಷಣೆಗೆ ಮುಂದಾದಾಗ ಜಗತ್ತು ಮತ್ತೊಮ್ಮೆ ಹಚ್ಚ ಹಸಿರಿನಿಂದ ಕಂಗೊಳಿಸುವ ಕ್ಷಣವನ್ನು ನೋಡಬಹುದಾಗಿದೆ. ವೃಕ್ಷ ರಕ್ಷಣೆಗೆ ಎಲ್ಲರೂ ಮುಂದಾಗುವ ಮೂಲಕ ಪ್ರಕೃತಿ ಮಾತೆಯ ಹಾಗೂ ವೃಕ್ಷಗಳ ಋಣವನ್ನು ತೀರಿಸೋಣ.



Downloaded From:www.kpscvaani.com

# ಪದಬಂಧ-47



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಗೃಹಿಣಿಗೆ ಆರ್ಥಿಕ ನೆರವು ನೀಡುವ ಯೋಜನೆಯಿದು (4)
3. ಅಭ್ಯಂಜನ ಮಾಡುವಾಗಿನ ಅಡ್ಡಿ ಈ ತರ ಬಂದಿದೆ! (4)
5. ಸ್ಲೇಟಿನ ಮೇಲೆ ಬರೆಯುವ ಸಾಧನ (3)
7. ನಿಯಮದಂತೆ ಕನ್ನಡಿಗ ಮಾಡಿರುವ ಎಕ್ಸ್‌ಚೇಂಜ್! (4)
9. ಆಕಾಶದಲ್ಲಿ ಸಂಚಾರ ಮಾಡುವವನು (5)
11. ಯಾವುದೇ ಆಯುಧವಿಲ್ಲದಿರುವಿಕೆ (4)
13. ನಲಿಯುತ್ತಿರುವ ರಾಷ್ಟ್ರಪಕ್ಷಿ (3)
15. ಈತ ಲೆಕ್ಕ ಬರೆಯುವವನು (4)
16. ಅರ್ಜುನನ ಮಗನ ಹೆಸರುಳ್ಳ ಈತ ತಾಯಿ ಚಾಮುಂಡೇಶ್ವರಿಯನ್ನು ಹೊರುತ್ತಾನೆ! (4)

## ಮೇಲಿಂದ ಕೆಳಕ್ಕೆ

2. ಸಮುದ್ರ ಜೀವಿಯಿಂದ ಉತ್ಪನ್ನವಾಗುವ ಈ ಕಠಿಣಪದಾರ್ಥ ನವರತ್ನಗಳಲ್ಲಿ ಒಂದೆನಿಸಿದೆ (3)
3. ಅವನಿರುವ ಭೂಮಿ (3)
4. ತನ್ಮಯನಾಗಿರುವ ಮಗ (3)
5. ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಎಂದು ವರ್ಣಿಸಿದ ಪಂಪನ ಹುಟ್ಟೂರು (4)
6. ಹೂವಿನಲ್ಲಿರುವ ಹುಡಿ (3)
7. ಕೆಂಗಲ್ ಹನುಮಂತಯ್ಯನವರು ನಿರ್ಮಿಸಿದ ಭವ್ಯಸೌಧ (5)
8. ತೊಂದರೆಯ ನಿವಾರಣೆಗಾಗಿ ಮಾಡುವ ಮನವಿ (4)
10. ಜ್ಯೋತಿಶ್ಚಕ್ರದ ಹನ್ನೆರಡು ರಾಶಿಗಳಲ್ಲಿ ಒಂದು (3)
11. ಪರ್ವತದ ಮೇಲಿನಿಂದ ಹರಿಯುವ ಝರಿ (3)
12. ತರುಣ ಇಲ್ಲಿದ್ದಾನೆ (3)
14. ಬಿಡುವಿಗೊಂದು ಪರ್ಯಾಯ ಪದ (3)

## ಉತ್ತರ

**ಮೇಲಿಂದ ಕೆಳಕ್ಕೆ**

2. ಹವಳ 3. ಅವನಿ 4. ತನಯ 5. ಬನವಾಸಿ 6. ಪರಾಗ 7. ವಿಧಾನಸೌಧ 8. ಅಹವಾಲು 10. ಮಿಥುನ 11. ನಿರ್ಜರ 12. ಯುವಕ 14. ವಿರಾಮ

**ಎಡದಿಂದ ಬಲಕ್ಕೆ**

1. ಗೃಹಲಕ್ಷ್ಮಿ 3. ಅಭ್ಯಂತರ 5. ಬಳಪ 7. ವಿನಿಮಯ 9. ಗಗನಗಾಮಿ 11. ನಿರಾಯುಧ 13. ನವಿಲು 15. ಕರಣಿಕ 16. ಅಭಿಮನ್ಯು

### –: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com




ಸೆಪ್ಟೆಂಬರ್ 15 ರಂದು ಕರ್ನಾಟಕ ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಆಯೋಜಿಸಿದ್ದ ಎಂಜಿನಿಯರ್ ದಿನಾಚರಣೆಯಲ್ಲಿ ಸಾಧನೆ ಮಾಡಿದ ಎಂಜಿನಿಯರ್‌ಗಳಿಗೆ ಮುಖ್ಯಮಂತ್ರಿಗಳು ಸನ್ಮಾನಿಸಿದ ಸಂದರ್ಭ. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರಾದ ಎಂ.ಸಿ.ಸುಧಾಕರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ನಸೀರ್ ಅಹಮದ್, ಕರ್ನಾಟಕ ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷರಾದ ಲಕ್ಷ್ಮಣ್ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.




ಸೆಪ್ಟೆಂಬರ್ 9ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಆಯೋಜಿಸಲಾಗಿದ್ದ ಕೃಷಿಮೇಳ-2023 ಅನ್ನು ಮುಖ್ಯಮಂತ್ರಿ ಅವರು ಉದ್ಘಾಟಿಸಿದ ಸಂದರ್ಭ. ಈ ಸಂದರ್ಭದಲ್ಲಿ ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ, ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಲಾಡ್, ವಿಧಾನ ಪರಿಷತ್‌ನ ಸರಕಾರದ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಸೇರಿದಂತೆ ಸ್ಥಳೀಯ ಶಾಸಕರು ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From:www.kpscvaani.com